
ರಂಜನೆ ಬೋಧನೆ ಪ್ರಚೋದನೆ

ಗೌರಿ ಲಂಕೇಶ್

31 ಆಗಸ್ಟ್ 2016 ಪುಟ 20 ರೂ. 15/-




ಚಾಂದಿನಿಯ ಮನದ ಕಣ್ಣು




KAS ಖದೀಮನ ಕನ್ಯಾ ಶಿಕಾರಿ

ಭಾಸ್ಕರ್ ಶೆಟ್ಟಿ ಕೊಲೆ



ಕಾಪಿ ಕರಾಮತ್ತು



ರಾಜಕೀಯಾಗಸದ ನಕ್ಷತ್ರ

ಮಂಡ್ಯ ಚೆಲುವಣ್ಣನ ಬರ್ತ್‌ಡೇಗೆ ಕುಮಾರಣ್ಣನ ಜಾಗ್ವಾರ್!

ಹೊಳಲ್ಕೆರೆ ಯಡ್ಡಿ ಶಿಷ್ಯ ಚಂದ್ರಪ್ಪನಿಗೆ ಸ್ತ್ರೀ ಕಂಟಕ

ಬಳ್ಳಾರಿ ಪಿ.ಎಫ್ ಹಣ ನುಂಗಿದ ಬ್ಯಾಂಕ್ ಅಧ್ಯಕ್ಷ



ಕೊಡಗು ಸಿಂಹನ ಖೆಡ್ಡಾ

ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ

ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ

- ★ ಭೂಮಿ ಇಲ್ಲದ ಎಲ್ಲಾ ಬಡವರಿಗೆ 5 ಎಕರೆ ಭೂಮಿ ಬೇಕು!
- ★ ಮನೆ ಇಲ್ಲದ ಎಲ್ಲರಿಗೂ ನಿವೇಶನ ಹಾಗೂ ಮನೆ ಬೇಕು!
- ★ ಬಗರ್‌ಹುಕುಂ ರೈತರಿಗೆ ಪಟ್ಟಾ - ಸರಕಾರಿ ಜಾಗದಲ್ಲಿರುವವರಿಗೆ ಹಕ್ಕುಪತ್ರ ಬೇಕೇಬೇ


ಆಗಸ್ಟ್ 20–ದೇವರಾಜ ಅರಸ ಶತಜಯಂತಿಯಂದ

ಬೆಂಗಳೂರು ರೈಲ್ವೆ ನಿಲ್ದಾಣದಿಂದ ದೇವರಾಜ ಅರಸು ಪ್ರತಿಮೆವರೆಗೆ

ಮೆರವಣಿಗೆ

ಬೆಂಗಳೂರಿನಲ್ಲಿ

ಬಡವರ ಮತ್ತು ರೈತರ ಬೃಹತ್ ಪ್ರತಿಭಟನೆ



ಆತ್ಮೀಯ ಬಂಧುಗಳೆ,

ಭೂಮಿ ಇಲ್ಲದವರ ಮನೆ ಇಲ್ಲದವರ ಹಕ್ಕುಗಳ ಧಿಕ್ಕರಿಸುವ ಸರಕಾರ, ದೇವರಾಜ ಅರಸು ಜ ಶತಮಾನೋತ್ಸವದ ಮೂಲಕ 'ಭೂ ಸುಧಾರಣೆ – ಭೂ ಹಂಚಿಕೆ'ಯ ಬಗ್ಗೆ ಬೆಟ್ಟದಷ್ಟು ಸಾಧನೆಯನ್ನು ಪ್ರಕಟಿಸ ಹೊರಟಿದೆ. ಅರಸು ತಂದ ಭೂ ಸುಧಾರಣೆಯನ್ನು ಅನುಷ ಮಾಡದೆ ಅರಸು ಜಯಂತಿಯನ್ನು ಅದ್ದೂರಿಗೊಳಿಸಲಾಗು "ಶತಶತಮಾನದಿಂದ ಜೀವನಕ್ಕಾಗಿ ಭೂಮಿಯನ್ನೇ ನಂ ಜನಕ್ಕೆ ಸ್ವಂತ ಭೂಮಿ ಇಲ್ಲ ಏಕೆ? ಇರಲು ಮನೆ ಇಲ್ಲ ಸತ್ತರೆ ಸ್ಮಶಾನವಿಲ್ಲ ಏಕೆ?" ಎಂದು ಸರಕಾರವನ್ನು ನಾ ಕೇಳಬೇಕಾಗಿದೆ. ಭೂಮಿ – ಮನೆ ಕೊಡದೆ ' ಸುಧಾರಣೆಯ ಹರಿಕಾರ'ನ ಗುಣಗಾನ ಏಕೆ? ಎಂ ಗಟ್ಟಿಯಾಗಿ ಆಗ್ರಹಿಸಲು ನಾಡಿನ ನಾಲ್ಕೂ ನಿಟ್ಟಿನ ನೆಲ–ನೆಲೆ ಇಲ್ಲದ ಬಡವರು ಮತ್ತು ರೈತರು ಬೆಂಗಳೂ ಸಾಗರೋಪಾದಿಯಲ್ಲಿ ಹರಿದು ಹೊರಟಿದಾ ಕಾದುಕೂರದೆ ನಾವೆಲ್ಲರೂ ಈ ಹೋರಾಟದ ಜೊತೆಗೂಡಬೇಕಿದೆ. ಬನ್ನಿ ಬೆಂಗಳೂರಿಗೆ ಹೊರಡೋಣ.

ಭೂ ಹೋರಾಟದ ಸಹಭಾಗಿ ಸಂಘಟನೆಗಳು

ಕರ್ನಾಟಕ ರೈತ ಸಂಘ, ಕರ್ನಾಟಕ ಜನಶಕ್ತಿ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ಜನಾಂದೋಲನ ಸಂಘಟನೆ, ಜನಸಂಗ್ರಾಮ ಪರಿಷತ್, ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ಪೀಪಲ್ಸ್ ಡೆಮಾಕ್ರೆಟಿಕ್ ಫೋರಂ, ಟಿಯುಸಿಐ, ಕರ್ನಾಟಕ ಶ್ರಮಿಕ ಶಕ್ತಿ, ಬೀಡಿ ಕಾರ್ಮಿಕರ ಸಂಘಟನೆ, ಕರ್ನಾಟಕ ಗಾರ್ಮೆಂಟ್ ವರ್ಕರ್ಸ್ ಯೂನಿಯನ್, ಜಾತಿ ನಿರ್ಮೂಲನ ಚಳವಳಿ, ಮಹಿಳಾ ಮುನ್ನಡೆ, ಕರ್ನಾಟಕ ಕಬ್ಬು ಬೆಳೆಗಾರರ ಸಂಘ, ಸ್ವರಾಜ್ ಅಭಿಯಾನ, ಕರ್ನಾಟಕ ವಿದ್ಯಾರ್ಥಿ ಸಂಘಟನೆ, ಪೆಡೆಸ್ಟ್ರಿಯನ್ ಪಿಕ್ಚರ್ಸ್, ಆರ್‌ವೈಎಫ್ಐ, ಶ್ರಮಿಕ ನಗರ ನಿವಾಸಿಗಳ ಒಕ್ಕೂಟ, ಜೈ ಕಿಸಾನ್ ಆಂದೋಲನ ಸ್ಲಂ ಜನಾಂದೋಲನ, ಸಮಾಜ ಪರಿವರ್ತನ ಸಮುದಾಯ, ಆಮ್ ಆದ್ಮಿ ಪಾರ್ಟಿ, ನಿವೇಶನರಹಿತರ ಹೋರಾಟ ಸಮಿತಿ, ಕರ್ನಾಟಕ ಜನಾರೋಗ್ಯ ಚಳವಳಿ, ರಾಜ್ಯ ಬಗರ್ ಹುಕುಂ ರೈತರ ಹಿತರಕ್ಷಣಾ ವೇದಿಕೆ, ಅಮೃತಮಹಲ್ ಕಾವಲ್ ಹೋರಾಟ ಹಾಗೂ ಹಿತರಕ್ಷಣಾ ಸಮಿತಿ, ಕರಾವಳಿ ಮೀನುಗಾರರ ಸಂಘಟನೆ, ಹಾಲಕ್ಕಿ ಒಕ್ಕಲಿಗರ ಸಂಘಟನೆ, ಅರಣ್ಯಮೂಲ ಬುಡಕಟ್ಟು ಸಮುದಾಯಗಳ ಒಕ್ಕೂಟ, ಮತ್ತಿತರ ಸಂಘಟನೆಗಳು.



ಬೇಕಿದೆ ಆಜಾದಿ ಪೆದ್ದರಿಂದ, ಮೂಢರಿಂದ, ಕೋಮುವಾದಿಗಳಿಂದ



• ಗೌರಿ ಲಂಕೇಶ್

editorlankesh@gmail.com

ಕಂಡಹಾಗೆ

"ಇತ್ತೀಚೆಗೆ 'ಆಜಾದಿ' (ಇದರ ಅರ್ಥವೇ 'ಸ್ವಾತಂತ್ರ್ಯ') ಂಬ ಪದವೇ ದೇಶದ್ರೋಹಿ ಪದವೆಂಬಂತೆ ುಖ್ಯವಾಹಿನಿಯ ಮಾಧ್ಯಮಗಳು ಬಿಂಬಿಸುತ್ತಿವೆ. ಆಜಾದಿ ದವನ್ನು ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹಯ್ಯ ಂಮಾರ್ ಮಾರ್ಚ್ ತಿಂಗಳಲ್ಲಿ ದೇಶವ್ಯಾಪಿ ರಿಚಯಿಸಿದನಾದರೂ ಇದು ಕಳೆದ ಕೆಲವು ದಶಕಗಳಿಂದ ಶ್ಮೀರದ ಕಣಿವೆಗಳಲ್ಲಿ ಪ್ರತಿ ದಿನ ಕೇಳಿಬರುತ್ತಿರುವಂತಹದ್ದು. ದಕ್ಕೂ ಮುನ್ನ ಮಹಿಳೆಯರ ಹೋರಾಟದಲ್ಲೂ ಪ್ರಚಲಿತಕ್ಕೆ ಂದಿತ್ತು.

ಆದರೆ ಯಾವಾಗ ಕನ್ಹಯ್ಯ ಮತ್ತು ಆತನ ಮಿತ್ರರು ಾಶ್ಮೀರಕ್ಕೆ ಭಾರತದಿಂದ ಆಜಾದಿ ಬೇಕು' ಎಂಬ ್ಲೋಗನ್‌ಗಳನ್ನು ಕೂಗಿದರೆಂದು ಆರೋಪಿಸಿ ಆತನ ವಿರುದ್ಧ ಾಷ್ಟ್ರದ್ರೋಹ' ದೂರು ದಾಖಲಿಸಿ ದೆಹಲಿ ಪೊಲೀಸರು ರೆಸ್ಟ್ ಮಾಡಿದರೋ ಅಂದಿನಿಂದ ಭಾರತದ ಪಾಲಿಗೆ ೊಡ್ಡ ದೇಶದ್ರೋಹಿಗಳಾದ ಚೆಡ್ಡಿಗಳು 'ಆಜಾದಿ' ನ್ನುವವರೆಲ್ಲಾ ದೇಶದ್ರೋಹಿಗಳು ಎಂದು ರೋಪಿಸಲಾರಂಭಿಸಿದ್ದಾರೆ.

ಕಳೆದ ಏಪ್ರಿಲ್ ತಿಂಗಳಲ್ಲಿ ತುಮಕೂರಿನ ಒಂದು ಲೇಜ್ ಮುಂದೆ ಸಿಪಿಐನ ವಿದ್ಯಾರ್ಥಿ ಸಂಘಟನೆಯಾದ ಐಎಸ್‌ಎಫ್‌ನ ಇಬ್ಬರು ಸದಸ್ಯರು ಕನ್ಹಯ್ಯ ಮತ್ತು ೈದರಾಬಾದಿನಲ್ಲಿ ಆತ್ಮಹತ್ಯೆಗೆ ದೂಡಲ್ಪಟ್ಟ ರೋಹಿತ್ ೇಮುಲಾ ಕುರಿತಂತೆ ಕರಪತ್ರ ಹಂಚುತ್ತಿದ್ದಾಗ ಆರೆಸ್ಸೆಸ್‌ನ ದ್ಯಾರ್ಥಿ ಸಂಘಟನೆಯಾದ ಎಬಿವಿಪಿಯ ಗೂಂಡಾಗಳು ವರ ಮೇಲೆ ದಾಳಿ ಮಾಡಿದ್ದರು. ವಿಪರ್ಯಾಸವೆಂದರೆ ಮಕೂರಿನ ಪೊಲೀಸರು ಎಬಿವಿಪಿಯ ಗೂಂಡಾಗಳನ್ನು ಂಧಿಸುವ ಬದಲು ಎಐಎಸ್‌ಎಫ್ ಸಂಘಟನೆಯ, ದಾಳಿಗೆ ತ್ತಾಗಿದ್ದ ಸದಸ್ಯರ ಮೇಲೆ 'ರಾಷ್ಟ್ರದ್ರೋಹ'ದ ದೂರನ್ನು ಖಲಿಸಿಕೊಂಡಿದ್ದರು. ಅದೇರೀತಿ ಸಾಗರದಲ್ಲಿ ಹಿರಿಯ ತಕ ಮಂಜುನಾಥ್ ಮೇಟಿ ಅವರು ಅಂಬೇಡ್ಕರ್ ರಿತು ಭಾಷಣ ಮಾಡಿದ್ದನ್ನು ವಿರೋಧಿಸಿದ ಅಲ್ಲಿನ ಡ್ಡಿಗಳು ಅವರ ವಿರುದ್ಧವೂ 'ರಾಷ್ಟ್ರದ್ರೋಹ' ದೂರನ್ನು ಖಲಿಸಬೇಕೆಂದು ಒತ್ತಡ ಹೇರಿದ್ದರು.

ಇದೇ ಹಿನ್ನೆಲೆಯಲ್ಲಿ ಇತ್ತೀಚೆಗೆ ಬೆಂಗಳೂರಿನಲ್ಲಿ ೆರಡು ವಿದ್ಯಮಾನಗಳು ಜರುಗಿವೆ.

ಮೊನ್ನೆ ಆಮ್ನೆಸ್ಟಿ ಸಂಸ್ಥೆಯು ಬೆಂಗಳೂರಿನಲ್ಲಿ 'ಬ್ರೋಕನ್ ಮಿಲೀಸ್' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ದು ಕಾಶ್ಮೀರದಲ್ಲಿ ಆಗುತ್ತಿರುವ ಮಾನವ ಹಕ್ಕುಗಳ ಲ್ಲಂಘನೆ ಮತ್ತು ಪೊಲೀಸ್ ಹಾಗು ಸೈನ್ಯದ ರೇಕಗಳಿಂದಾಗಿ ತಮ್ಮ ಕುಟುಂಬದ ಸದಸ್ಯರನ್ನು ಮಕೊಂಡಿದ್ದ ಕೆಲವರ ಅನುಭವಗಳನ್ನು ಚರ್ಚಿಸುವ ೋಜನೆ ಇತ್ತು, ಆದರೆ ಇದರ ಮುನ್ಸೂಚನೆ ಚೆಡ್ಡಿಗಳಿಗೆ ದ್ದರಿಂದ ಅಲ್ಲಿಗೆ ಹೋಗಿ ದಾಂಧಲೆ ಮಾಡಿದ್ದಾರೆ. ಅ ಯಲ್ಲಿ ಭಾರತೀಯ ಸೈನ್ಯವನ್ನು ಅವಮಾನಿಸಲಾಯಿತು ದು ಆರೋಪಿಸಿ ಆಮ್ನೆಸ್ಟಿ ಸಂಸ್ಥೆಯ ವಿರುದ್ಧವೂ 'ರಾಷ್ಟ್ರ ್ರೋಹ'ದ ದೂರು ದಾಖಲಾಗುವಂತೆ ನೋಡಿಕೊಂಡಿದ್ದಾರೆ.

ಭಾರತೀಯ ಸೈನ್ಯ ಕಳೆದ 69 ವರ್ಷಗಳಿಂದ ದೇಶದ ಕ್ಷೆಗಾಗಿ ಹೋರಾಡುತ್ತಿದೆ, ಹಲವಾರು ಕಷ್ಟಗಳನ್ನು ದುರಿಸುತ್ತಿದೆ, ಹಲವಾರು ಸೈನಿಕರನ್ನು ಕಳೆದುಕೊಂಡಿದೆ ಬುದೆಲ್ಲ ನಿಜ. ನಮ್ಮ ಸೈನ್ಯಕ್ಕೆ ಸೈನಿಕರಿಗೆ ಒಂದು ದ್ದ ಸಲಾಂ.

ಆದರೆ...

ಇವತ್ತು ನಮ್ಮ ಸೈನ್ಯ ಕೇವಲ ಭಾರತದ ಗಡಿಯನ್ನು ತ್ರ ಕಾಯುತ್ತಿಲ್ಲ, ಬದಲಾಗಿ ಬಂಡವಾಳಶಾಹಿಗಳ ಾಸಕ್ತಿಯನ್ನು ಕಾಪಾಡಲೂ ದುಷ್ಟ ಸರ್ಕಾರಗಳು ನಮ್ಮ ್ಯವನ್ನು ಉಪಯೋಗಿಸುತ್ತಿರುವುದೂ ದುರಂತ ಸತ್ಯ ಬುದನ್ನು ಎಲ್ಲರೂ ಗಮನಿಸಬೇಕಿದೆ. ಇಲ್ಲವೆಂದರೆ ತ್ತು ಭಾರತದ ಒಳಗೇ ಕೆಲವಾರು ಕಡೆಗಳಲ್ಲಿ ಸೈನ್ಯವನ್ನು ಕೆ ನಿಯೋಜಿಸಲಾಗಿದೆ? ಯಾಕೆ ಛತ್ತೀಸಗಡ, ಕಾಶ್ಮೀರ ತ್ತು ಈಶಾನ್ಯ ರಾಜ್ಯಗಳಲ್ಲಿ ಸೈನ್ಯದ ತುಕಡಿಗಳು ಬೀಡು ವೆ? ಕಾಶ್ಮೀರದ ಮಾತು ಪಕ್ಕಕ್ಕಿರಲಿ; ಛತ್ತೀಸಗಡ ತ್ತು ಈಶಾನ್ಯ ರಾಜ್ಯಗಳಲ್ಲಿ ಪಾಕಿಸ್ತಾನ, ಬಾಂಗ್ಲಾದೇಶ ವಾ ಚೀನಾದ ಸೈನ್ಯಗಳು ದಾಳಿ ಮಾಡಿವೆಯೇ? ಇಲ್ಲ, ಸೈನ್ಯ ಅಲ್ಲೆಲ್ಲ 'ಯುದ್ಧ' ಸಾರಿರುವುದು ಭಾರತೀಯರ ೆಯೇ. ಅದೂ ದುಷ್ಟ ಸರ್ಕಾರಗಳ ಆದೇಶದ ಮೇರೆಗೆ. ಇಂತಹ ಕಡೆಗಳಲ್ಲಿ ಸೈನ್ಯ ಕೆಲವೊಮ್ಮೆ ದಾಳಿ, ್ಯಚಾರ, ಕೊಲೆ ಇತ್ಯಾದಿಗಳಲ್ಲಿ ತೊಡಗಿರುವುದನ್ನು ಾರೂ ಅಲ್ಲಗಳೆಯಲಾಗುವುದಿಲ್ಲ, ಸ್ವಾತಂತ್ರ್ಯ ಬಂದ ವರ್ಷದಲ್ಲೇ ಮೊದಲು ಭಾರತ ಆಂತರಿಕವಾಗಿ ಯುದ್ಧ ದ್ದು ಈಶಾನ್ಯ ರಾಜ್ಯಗಳ ಜನರ ಮೇಲೆ ಎಂಬುದು ಹಾಸಿಕ ಸತ್ಯ. ಆಗ ಅಲ್ಲಿನ ಜನ ದಂಗೆ ಏಳಲಾರಂಭಿಸಿದರು. ದನ್ನು ಮಟ್ಟಹಾಕಲು ಸೈನ್ಯ ಕೊಲೆ, ದಮನ ಗಳಲ್ಲಿ ತೊಡಗಿತು. ಆಗ ಸೈನ್ಯದ ವಿರುದ್ಧ ಆಗಿನ ಾನಿ ಜವಾಹರಲಾಲ್ ನೆಹರೂ ಅವರಿಗೆ ದೂರುಗಳು ದವು; ಅಕ್ರಮಗಳನ್ನು ಎಸಗಿರುವ ಸೈನಿಕರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಒತ್ತಡ ಬಂತು. ಆದರೆ ಭಾರತೀಯ ಸೈನ್ಯ 'ದಂಗೆಗಳನ್ನು ಮಟ್ಟಹಾಕುವಾಗ ್ಲ ಎಡವಟ್ಟುಗಳು ಸಂಭವಿಸುತ್ತವೆ. ಅವುಗಳನ್ನೆಲ್ಲಾ ಸಿದರೆ ವಿಚಾರಣೆಗೆ ಒಳಪಡಿಸಿದರೆ ನಾವು ನಮ್ಮ ಕರ್ತವ್ಯವನ್ನು ನಿಭಾಯಿಸುವುದು ಕಷ್ಟ, ಆದ್ದರಿಂದ ನಮ್ಮ ರಕ್ಷಣೆಗೆ ವಿಶೇಷ ಕಾನೂನು ಬೇಕು' ಎಂದು ನೆಹರೂ ಅವರನ್ನು ಒಪ್ಪಿಸಿದರು. ಆಗ ರೂಪಗೊಂಡಿದ್ದೇ ಆರ್ಮ್ಡ್ ಫೋರ್ಸಸ್ ಸ್ಪೆಶಲ್ ಪವರ್ಸ್ ಆಕ್ಟ್ (ಅಫ್ಸಪ). ಅಫ್ಸಪ ಈಗ ದುರ್ಬಳಕೆ ಆಗುತ್ತಿರುವುದೂ ಸತ್ಯ, ಇಲ್ಲವೆಂದರೆ ಮಣಿಪುರದಲ್ಲಿ ಸೈನಿಕರು ಅಮಾಯಕರನ್ನು ಕೊಂದದ್ದನ್ನು ವಿರೋಧಿಸಿ ಇರೋಮ್ ಶರ್ಮಿಳಾ ಅವರು ಅಫ್ಸಪ ಕಾಯ್ದೆಯನ್ನು ವಾಪಸ್ ಪಡೆಯಬೇಕೆಂದು ಒತ್ತಾಯಿಸಿ ಹದಿನಾರು ವರ್ಷ ಉಪವಾಸ ಸತ್ಯಾಗ್ರಹವನ್ನು ಕೈಗೊಳ್ಳುತ್ತಿರಲಿಲ್ಲ, ಹಾಗೆಯೇ, ಮಣಿಪುರದ ರಾಜಧಾನಿ ಇಂಫಾಲ್‌ನಲ್ಲಿ ಭಾರತೀಯ ಸೈನಿಕರು ಮನೋರಮಾ ಎಂಬ ಮಹಿಳೆಯನ್ನು ಆಕೆಯ ಮನೆಯಿಂದ ಬಲವಂತವಾಗಿ ಎಳೆದೊಯ್ದು, ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ ಆಕೆಯನ್ನು ಕೊಂದು ಹಾಕಿದ್ದರು. ಅದನ್ನು ವಿರೋಧಿಸಿ ಮಣಿಪುರದ ಹತ್ತಾರು ತಾಯಂದಿರು ಸೈನ್ಯದ ಮುಖ್ಯ ಕಚೇರಿಯ ಮುಂದೆ ಸಂಪೂರ್ಣವಾಗಿ ನಗ್ನರಾಗಿ 'ಇಂಡಿಯನ್ ಆರ್ಮಿ, ರೇಪ್ ಅಸ್' ಎಂದು ಪ್ರತಿಭಟಿಸುತ್ತಿರಲಿಲ್ಲ, ಭಾರತೀಯ ಸೈನ್ಯದ ಅಕ್ರಮಗಳನ್ನು ಖಂಡಿಸುವುದು ದೇಶದ್ರೋಹವಾದರೆ ಇರೋಮ್ ಶರ್ಮಿಳಾ ಮತ್ತು ನಗ್ನರಾಗಿ ಪ್ರತಿಭಟಿಸಿದ ಮಣಿಪುರದ ತಾಯಂದಿರನ್ನೂ ದೇಶದ್ರೋಹಿಗಳು ಎಂದೇ ಕರೆಯಬೇಕಾಗುತ್ತದೆ.

ಆದರೆ ಚೆಡ್ಡಿಗಳಿಗೆ ಮತ್ತು ಕುತಂತ್ರಿ ಮಾಧ್ಯಮದವರಿಗೆ ಇಂತಹದ್ದೆಲ್ಲ ಅರ್ಥವಾಗುವುದು ಹೇಗೆ ಸಾಧ್ಯ ಹೇಳಿ.

ಆಮ್ನೆಸ್ಟಿ ಸಭೆಯಲ್ಲಿ ಕೆಲವರು 'ಆಜಾದಿ' ಎಂದು ಕೂಗಿದರು ಎಂಬುದನ್ನೇ ದೇಶದ್ರೋಹ ಎಂದು ಚೆಡ್ಡಿಗಳು ಬಿಂಬಿಸಿದ ಹೊತ್ತಿನಲ್ಲೇ ಸುವರ್ಣ ಟಿವಿ ಚಾನೆಲ್‌ನ ಆ್ಯಂಕರ್ ಅಜಿತ್ ಹನುಮಕ್ಕನವರ ಎಂಬಾತನೂ ಅಂತಹದ್ದೇ ನಿಲುವನ್ನು ವ್ಯಕ್ತಪಡಿಸಿದ್ದಾನೆ.

ಸ್ವಾತಂತ್ರ್ಯ ದಿನಾಚರಣೆಯಂದು ಪ್ರಸಾರವಾಗುವ ಚರ್ಚೆಯಲ್ಲಿ ಭಾಗವಹಿಸಬೇಕು ಎಂದು ಅಜಿತ್ ಹನುಮಕ್ಕನವರ ಕೆಲ ದಿನಗಳ ಹಿಂದೆ ನೂರ್ ಶ್ರೀಧರ್ ಮತ್ತು ಚೇತನಾ ತೀರ್ಥಹಳ್ಳಿಯವರನ್ನು ಆಹ್ವಾನಿಸಿದ್ದ. ಆತ ಆಗ ಅವರಿಬ್ಬರಿಗೂ ಹೇಳಿದ್ದು "ಸ್ವಾತಂತ್ರ್ಯಾಚರಣೆಯ



ಹಿನ್ನೆಲೆಯಲ್ಲಿ ದೇಶದ ರಾಜಕಾರಣವನ್ನು ಚರ್ಚಿಸಲಾಗುತ್ತದೆ" ಎಂದು. ಕೆಲದಿನಗಳ ಹಿಂದೆಯೇ ರೆಕಾರ್ಡ್ ಆದ ಚರ್ಚೆಯಲ್ಲಿ ಭಾಗವಹಿಸಲು ನೂರ್ ಮತ್ತು ಚೇತನಾ ಹೋದಾಗಲೇ ಹನುಮಕ್ಕನವರ ಕುತಂತ್ರ ಅವರಿಬ್ಬರ ಅರಿವಿಗೆ ಬಂದದ್ದು.

ಮೊದಲಿಗೆ ಚರ್ಚೆಗೆಂದು ಸಿದ್ಧ ಪಡಿಸಿದ್ದ ವೇದಿಕೆಯಲ್ಲಿ ಮಹಾನ್ ಚೆಡ್ಡಿಗಳಾದ ಚಕ್ರವರ್ತಿ ಸೂಲಿಬೆಲೆ ಮತ್ತು ತೇಜಸ್ವಿ ಸೂರ್ಯ ಅವರ ಹಿಂದೆ ತಿರಂಗದ ನೀಲಿ ಚಕ್ರವನ್ನು ಬಿಡಿಸಲಾಗಿತ್ತು, ಆದರೆ ನೂರ್ ಮತ್ತು ಚೇತನಾ ಅವರ ಹಿಂದೆ ಮುಳ್ಳಿನ ಬೇಲಿಯನ್ನೂ, ಪ್ರತಿಭಟನೆಯಾಗಿ ಎತ್ತಿದ್ದ ಕೈಗಳ ಚಿತ್ರವನ್ನೂ ಬಿಡಿಸಲಾಗಿತ್ತು, ಅಷ್ಟೇ ಅಲ್ಲದೆ, ಚರ್ಚೆಗೆ ಹನುಮಕ್ಕನವರ ಕೊಟ್ಟಿದ್ದ ಶೀರ್ಷಿಕೆ 'ಆಜಾದಿ ವರ್ಸಸ್ ಸ್ವಾತಂತ್ರ್ಯ'. ಅಂದರೆ, ಹನುಮಕ್ಕನವರ ಪ್ರಕಾರ ಸೂಲಿಬೆಲೆ ಮತ್ತು ಸೂರ್ಯ ದೇಶದ 'ಸ್ವಾತಂತ್ರ್ಯ'ವನ್ನು ಕಾಪಾಡಲು ಸಜ್ಜಾಗಿರುವ ದೇಶಪ್ರೇಮಿಗಳು ಆದರೆ ಅವರನ್ನು ವಿರೋಧಿಸುತ್ತಿರುವ ನೂರ್ ಮತ್ತು ಚೇತನಾ 'ಆಜಾದಿ' ಕೇಳುತ್ತಿರುವ ದೇಶದ್ರೋಹಿಗಳು.

ಅಲ್ಲಿ ಇವರಿಬ್ಬರಿಗೆ ಇನ್ನೊಂದು ಆಘಾತ ಕಾದಿತ್ತು, ಅಲ್ಲಿದ್ದವರಲ್ಲಿ ಮತ್ತು ವೀಕ್ಷಕರಲ್ಲಿ ಎಮೋಷನಲ್ ವಾತಾವರಣ ನಿರ್ಮಿಸಲು ಹನುಮಕ್ಕನವರ ಯುದ್ಧಗಳಲ್ಲಿ ಮಡಿದ ನಾಲ್ವರು ಸೈನಿಕರ ಕುಟುಂಬಗಳನ್ನು ಕರೆಸಿದ್ದ, ಆಗಲೇ ನೂರ್ ಮತ್ತು ಚೇತನಾ ಪ್ರತಿಭಟಿಸಬೇಕಿತ್ತು, ದೇಶದ ರಾಜಕಾರಣ ಕುರಿತ ಚರ್ಚೆಯಲ್ಲಿ ಯಾಕೆ ಯೋಧರ ಕುಟುಂಬದವರು ಎಂದೂ, ಚರ್ಚಾ ವಿಷಯಕ್ಕೂ 'ಆಜಾದಿ ವರ್ಸಸ್ ಸ್ವಾತಂತ್ರ್ಯ' ಎಂಬ ಶೀರ್ಷಿಕೆಗೂ ಯಾವ ಸಂಬಂಧ ಎಂದೂ ಪ್ರಶ್ನಿಸಬೇಕಿತ್ತು, ಕೊನೆಗೆ ಸುಮ್ಮನೆ ರಗಳೆ ಮಾಡುವುದು ಬೇಡ ಎಂದುಕೊಂಡು ಸುಮ್ಮನಾದರು. ಆದರೆ ಚರ್ಚೆ ಶುರುವಾಗುತ್ತಿದ್ದಂತೆ ಹನುಮಕ್ಕನವರ ಚೆಡ್ಡಿ ಬುದ್ಧಿ ಇಬ್ಬರಿಗೂ ಅರ್ಥವಾಗಿದೆ.

ನೂರ್ ಹೇಳುವಂತೆ "ಚರ್ಚೆ ಪ್ರಾರಂಭವಾದ ಸ್ವಲ್ಪ ಹೊತ್ತಿನಲ್ಲೆ ಆರೋಗ್ಯಪೂರ್ಣ ಸಂವಾದ ನಡೆಸುವ ಯಾವ ಇರಾದೆಯೂ ಇವರಿಗಿಲ್ಲ ಎಂದು ಗೊತ್ತಾಯಿತು. ದೇಶದ್ರೋಹಿಗಳನ್ನು ಬೆಂಬಲಿಸುವ ಅಪರಾಧಿಗಳಂತೆ ನಮ್ಮನ್ನು ಕಟಕಟೆಯಲ್ಲಿ ನಿಲ್ಲಿಸಿ ತರಾಟೆಗೆ ತೆಗೆದುಕೊಳ್ಳುವುದು ಆ್ಯಂಕರ್ ಉದ್ದೇಶ ಎಂಬುದು ಸ್ಪಷ್ಟವಾಯಿತು. ಆ್ಯಂಕರ್ ನಮಗೆ ಯಾವ ಮಾತನ್ನೂ ಮುಗಿಸಲು ಬಿಡುತ್ತಿರಲಿಲ್ಲ ಮತ್ತು ತಾನೇ ವಾದಕ್ಕೆ ಇಳಿಯುತ್ತಿದ್ದದ್ದು ಇದನ್ನು ಖಚಿತಪಡಿಸಿತ್ತು, ಮಾತು ತುಂಡರಿಸುತ್ತಾ ಹೋದಾಗ ನಾನು ಹೊರಟುಹೋಗುತ್ತೇನೆ ಎಂದು ಸಹ ಬೆದರಿಸಿದ ನಂತರ ಒಂದಷ್ಟು ಸಮಯ ಕೊಡತೊಡಗಿದರು."

ಚೇತನಾ ಹೀಗೆ ಹೇಳಿದ್ದಾರೆ: "ನನಗೆ ಹೇಳಲಾಗಿದ್ದು ಈಗಾಗಲೇ ಸಿಕ್ಕಿರುವ ಸ್ವಾತಂತ್ರ್ಯ ಮತ್ತು ಜೆಎನ್‌ಯುನಿಂದ ಶುರುವಾಗಿ ಈಗ ವ್ಯಾಪಕವಾಗಿರುವ ಕನ್ಹಯ್ಯನ ಆಜಾದಿಯ ಬಗ್ಗೆ ಚರ್ಚೆ ಎಂದು. ಡಿಬೇಟ್ ಶುರುವಾದಾಗ ಜೆಎನ್‌ಯು ಆಜಾದಿ ಘೋಷಣೆ ಬಿಟ್ಟು ಕಾಶ್ಮೀರಿ ಪ್ರತ್ಯೇಕತಾವಾದದ ಆಜಾದಿ ಬಗ್ಗೆ ಪ್ರಶ್ನೆ ತೆಗೆದರು."

ಹನುಮಕ್ಕನವರ ತಮಗೆ ವಂಚನೆ ಮಾಡಿದ್ದು ಗೊತ್ತಾದರೂ ಕಾಶ್ಮೀರ ಸಮಸ್ಯೆ ಬಗ್ಗೆಯಾದರೂ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳೋಣ ಎಂದು ಇವರಿಬ್ಬರೂ ನಿರ್ಧರಿಸಿದರೆ ಅದಕ್ಕೂ ಹನುಮಕ್ಕನವರ ಅವಕಾಶ ಮಾಡಿಕೊಡಲಿಲ್ಲ, ಆರಂಭದಲ್ಲಿ ನೂರ್ ಅವರು "ಕಾಶ್ಮೀರ ಸಮಸ್ಯೆ ಬಗ್ಗೆ ಅಂಬೇಡ್ಕರ್ ಹೀಗೆಂದಿದ್ದರು: 'ಈ ಸಮಸ್ಯೆಯನ್ನು ಬಗೆಹರಿಸಲು ಒಂದೋ ಜನಾಭಿಪ್ರಾಯ ನಡೆಸಿ ಅಲ್ಲಿನ ಜನಾಭಿಪ್ರಾಯದಂತೆ ತೀರ್ಮಾನ ತೆಗೆದುಕೊಳ್ಳಬೇಕು ಅಥವ ಭಾರತ-ಪಾಕಿಸ್ತಾನ ವಿಚಾರದಲ್ಲಿ ನೀವೇ ಮಾಡಿದಂತೆ- ತನಗೆ ಭಿನ್ನಾಭಿಪ್ರಾಯವಿರುವುದಾದರೂ ಧರ್ಮದ ಆಧಾರದ ಮೇಲೆ ಬಗೆಹರಿಸಿಕೊಳ್ಳಬೇಕು. ಎರಡೂ ಅಲ್ಲದ ದ್ವಂದ್ವ ನೀತಿ ಭವಿಷ್ಯದಲ್ಲಿ ಬಗೆಹರಿಯದ ಸಮಸ್ಯೆಯಾಗಿ, ಅಪಾರ ಸಾವುನೋವು ಮತ್ತು ವ್ಯರ್ಥ ವೆಚ್ಚಕ್ಕೆ ದಾರಿಮಾಡುತ್ತದೆ.' ಅಂಬೇಡ್ಕರ್ ನುಡಿದ ಭವಿಷ್ಯ ನಿಜವಾಗಿದೆ. ಹಾಗಾಗಿ ಭಾರತ ಅಳವಡಿಸಿದ ದ್ವಂದ್ವ ನೀತಿಯೇ ಈ ಕುಟುಂಬಗಳ ಕಣ್ಣೀರಿಗೆ ಮೂಲಕಾರಣವಾಗಿದೆ" ಎಂದು ವಿವರಿಸಲು ಅವಕಾಶವನ್ನೇ ಹನುಮಕ್ಕನವರ ಕೊಡಲಿಲ್ಲ, ಬದಲಾಗಿ ವಿಷಯವನ್ನು ಎತ್ತೆತ್ತಲೋ ಎಳೆದಾಡಿ ಈ ಅಂಶವನ್ನು ಸರಿಯಾಗಿ ಮಂಡಿಸಲಿಕ್ಕೇ ಬಿಡಲಿಲ್ಲ.

ಆಗ ನೂರ್ ಮತ್ತು ಚೇತನಾ ಮತ್ತೊಮ್ಮೆ ಪ್ರತಿಭಟಿಸಿದ್ದಾರೆ. ತಮಗೆ ಮಾತನಾಡಲು ಬಿಡದಿದ್ದರೆ ತಾವು ಹೊರನಡೆಯುವುದಾಗಿ ಹೇಳಿದ್ದಾರೆ. ಆಗ ಹನುಮಕ್ಕನವರ "ಇಲ್ಲ ಹೋಗಬೇಡಿ. ನಿಮ್ಮ ಮಾತಿಗೆ ಅಡ್ಡಬರುವುದಿಲ್ಲ" ಎಂದು ಹೇಳಿದ್ದಾನೆ. ಆಗ ನೂರ್ ಅವರು "ಸ್ವತಂತ್ರ ಭಾರತ ಇಂದು ಎದುರಿಸುತ್ತಿರುವ ರೈತರ ಆತ್ಮಹತ್ಯೆ, ಕಾರ್ಮಿಕರ ವಲಸೆ, ದಲಿತರ ಮೇಲಿನ ದೌರ್ಜನ್ಯ ಮಹಿಳೆಯರ ಮೇಲೆ ಹೆಚ್ಚುತ್ತಿರುವ ಹಿಂಸೆ ಮುಂತಾದ ಸಮಸ್ಯೆಗಳಿಗೆ ಕಾಶ್ಮೀರವೋ, ಭಯೋತ್ಪಾದನೆಯೋ ಕಾರಣವಲ್ಲ, ಕಾಶ್ಮೀರ ಮತ್ತು ಭಯೋತ್ಪಾದನೆಗಳೂ ಸಮಸ್ಯೆಗಳೇ. ಅವುಗಳ ಕುರಿತು ನಾವು ಪ್ರತ್ಯೇಕವಾಗಿ ಚರ್ಚಿಸಬಹುದು. ಆದರೆ ದೇಶದ ಸಮಸ್ಯೆಗಳು ಸಮಾಜದೊಳಗಿನ ಅಸಮಾನತೆಯ ಮೂಲದಿಂದ ಬಂದಿವೆ. ನಾವಿಂದು ಚರ್ಚಿಸಬೇಕಿರುವುದು ಇದನ್ನು ಹೇಗೆ ಬಗೆಹರಿಸುತ್ತೇವೆ ಎಂಬುದನ್ನು, ಈ ನಿಜ ಸಮಸ್ಯೆಗಳ ಕಡೆ ಸಮಾಜದ ಗಮನ ಹೋಗದಂತೆ ದಿಕ್ಕು ತಪ್ಪಿಸುವ ಹುನ್ನಾರ ನಡೆದಿದೆ. 1990ರ ತನಕ 'ಭ್ರಷ್ಟ' ರಾಜಕಾರಣದಲ್ಲಿದ್ದ ನಮ್ಮ ದೇಶ ಇಂದು 'ದುಷ್ಟ' ರಾಜಕಾರಣದಲ್ಲಿ ಸಿಲುಕಿದೆ" ಎಂದು ವಿವರಿಸಿದ್ದಾರೆ. ಆದರೆ ಹನುಮಕ್ಕನವರ ಅದನ್ನೆಲ್ಲ ಎಡಿಟಿಂಗ್ ಟೇಬಲ್ ಮೇಲೆ ಕತ್ತರಿಸಿಹಾಕಿದ್ದಾನೆ.

ಚೇತನಾ ಕೂಡ ಆಡಿದ ಮಾತುಗಳನ್ನು ಅಲ್ಲಲ್ಲಿ ಕತ್ತರಿಸಿ ಮಾತಿನ ಪರಿಣಾಮಕ್ಕೆ ಪೆಟ್ಟು ಬೀಳುವಂತೆ ಮಾಡಿದ್ದಾನೆ. ಸಂಘಪರಿವಾರದ ಸಂಚನ್ನು ಖಂಡಿಸುತ್ತಾ ಪ್ರೇಕ್ಷಕರ ಕಡೆಯಿಂದ ಕೆಲವರು ಬಹಳ ಚೆನ್ನಾಗಿ ಮಾತನಾಡಿದ್ದರು. ಅದನ್ನೂ ಹನುಮಕ್ಕನವರ ಕಟ್ ಮಾಡಿದ್ದಾನೆ.

ಚರ್ಚೆಯಲ್ಲಿ ಸೂಲಿಬೆಲೆ ಮತ್ತು ಸೂರ್ಯ ಬಾಯಿತೆರೆದಾಗಲೆಲ್ಲ ಸುಳ್ಳಿನ ಮೇಲೆ ಸುಳ್ಳುಗಳನ್ನೇ ಉದುರಿಸುತ್ತಿದ್ದರು ಆದರೆ ಚೆಡ್ಡಿ ಬುದ್ಧಿಯ ಹನುಮಕ್ಕನವರ ಅವರಿಗೆ ಪಾಟ ಸವಾಲುಗಳನ್ನೇ ಹಾಕಲಿಲ್ಲ, ಬದಲಾಗಿ ತಾನೂ ಸುಳ್ಳು ಹೇಳುವುದನ್ನು ಪ್ರಾರಂಭಿಸಿದ. ಚೇತನಾ ಅವರಿಗೆ "ತಿರಂಗ ಹಾರಿಸುವಾಗ ಪಂಡಿತನನ್ನು ಸುಟ್ಟು ಕೊಂದಿದ್ದು ನಿಮಗೆ ಗೊತ್ತಿಲ್ಲಾ?" ಅಂತ ಅಜಿತ್ ಕೇಳಿದ. ಆಗ ಚೇತನಾ "ಗೊತ್ತಿಲ್ಲ" ಎಂದೇ ಉತ್ತರಿಸಿದರು. ಯಾಕೆಂದರೆ ಅಂತಹ ಒಂದು ಘಟನೆ ನಿಜವಾಗಲೂ ನಡೆದಿದ್ದರೆ ತಾನೆ ಜನರಿಗೆ ಗೊತ್ತಿರುವುದು? ಚೇತನಾ ಅವರು ಹೇಳಿರುವಂತೆ "ಕಾಶ್ಮೀರಿ ಪಂಡಿತರ ಕೊಲೆಗಳ, ಮಹಾವಲಸೆಯ, ಅದರ ಸುತ್ತಲಿನ ನಿಜ ಸುಳ್ಳುಗಳ ಬಹುತೇಕ ಪುಸ್ತಕಗಳನ್ನು ಓದಿರುವ ಮತ್ತು ಖುದ್ದು ಕಾಶ್ಮೀರಿ ಪಂಡಿತರ ಜೊತೆ ಮಾತಾಡಿರುವ ನನಗೆ ಬಾವುಟ ಹಾರಿಸುವ ಪಂಡಿತನೊಬ್ಬನನ್ನು ಸುಟ್ಟು ಕೊಂದ ಉಲ್ಲೇಖ ಎಲ್ಲೂ ಕಂಡಿಲ್ಲ, ಆ ಪ್ರಶ್ನೆಯೇ ಒಂದು ಸುಳ್ಳು." ಹನುಮಕ್ಕನವರನ ಈ ಕುತಂತ್ರದ ಪರಿಣಾಮವಾಗಿ ಇವತ್ತು ಚೇತನಾ ಸಾಮಾಜಿಕ ಜಾಲತಾಣಗಳಲ್ಲಿ ಚೆಡ್ಡಿಗಳಿಂದ ಕೆಟ್ಟ ಕೆಟ್ಟ ನಿಂದನೆಗಳಿಗೆ ವಿನಾಕಾರಣ ಗುರಿಯಾಗಬೇಕಾಗಿದೆ.

ಒಟ್ಟು ಚರ್ಚೆ ಒಂದೂವರೆ ಗಂಟೆ ನಡೆದಿದ್ದರೂ ಕೊನೆಗೆ ಪ್ರಸಾರವಾಗಿದ್ದು ಕೇವಲ 40 ನಿಮಿಷಗಳು ಮಾತ್ರ. "ತೇಜಸ್ವಿ ಸೂರ್ಯ ಮತ್ತು ಸೂಲಿಬೆಲೆ ಮಾಡಿದ ಲೇವಡಿಗಳು, ಅವರ ಆಂಗಿಕ ಅಭಿನಯಗಳು, ವಿಷಯದ ಹೊರತಾದ ಆರ್ಭಟ ಎಲ್ಲವನ್ನೂ ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ" ಎಂದು ಚೇತನಾ ಹೇಳಿದ್ದರೆ, ನೂರ್ ಅವರು ಹೀಗೆ ತಮ್ಮ ಅನುಭವವನ್ನು ವಿವರಿಸಿದ್ದಾರೆ: "ಕೊನೆಗೆ ಎಲ್ಲರಿಗೂ ಒಂದೊಂದು ನಿಮಿಷ ಕೊಟ್ಟು ಮುಗಿಸಿ ಎಂದು ನಾನೇ ಹೇಳಿದೆ. ಅದರಂತೆ ಕೊಟ್ಟರು. ಆದರೆ ಪ್ರಸಾರವಾದಾಗ ಸೂಲಿಬೆಲೆ ಮತ್ತು ಸೂರ್ಯನ ಒಂದೊಂದು ನಿಮಿಷದ ಮಾತನ್ನು ಪೂರ್ತಿ ಪ್ರಸಾರ ಮಾಡಿ, ನನ್ನ ಮತ್ತು ಚೇತನಾರ ಮಾತನ್ನು 10 ಸೆಕೆಂಡಿಗೆ ಕತ್ತರಿಸಿದ್ದಾರೆ."

ನೂರ್ ಮತ್ತು ಚೇತನಾರಿಗೆ ಹನುಮಕ್ಕನವರ ಮೋಸ ಮಾಡಿದನಲ್ಲ, ಹೋಗಲಿ ಸತ್ತ ಸೈನಿಕರ ಕುಟುಂಬಗಳ ಕಷ್ಟವನ್ನಾದರೂ ಆಲಿಸಿದನಾ ಅಂದರೆ ಅದೂ ಇಲ್ಲ, ಅವತ್ತು ಕಾರ್ಗಿಲ್ ಸೈನಿಕರ ಸಂತ್ರಸ್ತ ಕುಟುಂಬಗಳ ಸಂಸ್ಥೆಯ ಅಧ್ಯಕ್ಷೆ ಬಹಳ ಚೆನ್ನಾಗಿ ಮಾತನಾಡಿ ಇಷ್ಟು ವರ್ಷಗಳಾದರೂ ತಮ್ಮ ಸಮಸ್ಯೆಗಳನ್ನು ಯಾರೂ ಹೇಗೆ ಬಗೆಹರಿಸಿಲ್ಲ ಎಂಬುದನ್ನು ಸಮರ್ಥವಾಗಿ ವಿವರಿಸಿದರು. ಆದರೆ ಅವರನ್ನೆಲ್ಲ ತನ್ನ ಕಾರ್ಯಕ್ರಮಕ್ಕೆ ಕರೆಸಿಕೊಂಡಿದ್ದು ಟಿಆರ್‌ಪಿ ಹೆಚ್ಚಿಸಿಕೊಳ್ಳಲು ಮತ್ತು ತನ್ನ ಚೆಡ್ಡಿ ಅಜೆಂಡಾವನ್ನು ಮುಂದಿಡಲು. ಅವರ ಭಾವನೆಗಳನ್ನು ಹೀಗೆ ದುರ್ಬಳಕೆ ಮಾಡಿಕೊಂಡ ಹನುಮಕ್ಕನವರ ಆಕೆಯ ನೋವಿಗೆ ಸ್ಪಂದಿಸಲೇ ಇಲ್ಲ, ಬದಲಾಗಿ ತನಗೂ ಅವರ ಗೋಳಿಗೂ ಸಂಬಂಧವೇ ಇಲ್ಲ ಎಂಬಂತೆ ವರ್ತಿಸಿದ.


ಈಗ ಅಜಿತ್ ಹನುಮಕ್ಕನವರನ ವಿರುದ್ಧ ನಾಡಿನ ಹಲವಾರು ಪ್ರಜ್ಞಾವಂತರು ಮತ್ತು ಜಾತ್ಯತೀತರು ಸುವರ್ಣ ಟಿವಿಯ ಮಾಲೀಕರಿಗೆ ದೂರು ನೀಡಿದ್ದಾರೆ. ಆ ದೂರನ್ನು ಸಂಸ್ಥೆಯ ಪಾಲುದಾರರ ಮತ್ತು ಮುಖ್ಯಸ್ಥರ ಗಮನಕ್ಕೆ ತರುವುದಾಗಿ ಸುಗತಾ ಶ್ರೀನಿವಾಸರಾಜುರವರು ಭರವಸೆ ಕೊಟ್ಟಿದ್ದಾರೆ.

ಹನುಮಕ್ಕನವರನನ್ನು ಆದಷ್ಟು ಬೇಗ ಸುವರ್ಣ ಸುದ್ದಿ ಚಾನೆಲ್‌ನಿಂದ ಒದ್ದೋಡಿಸಿದರೆ ಆ ಚಾನೆಲ್‌ಗೂ ಒಳ್ಳೆಯದು, ರಾಜ್ಯದ ಭವಿಷ್ಯಕ್ಕೂ ಒಳಿತು.

ಈ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದಿದೆ ನಿಜ. ಆದರೆ ಇನ್ನೂ ಹಲವಾರು ಸಮಸ್ಯೆಗಳಿಂದ ಈ ದೇಶದ ಜನರಿಗೆ ಆಜಾದಿ ಸಿಕ್ಕಿಲ್ಲ, ಕನ್ಹಯ್ಯ ಆಗ್ರಹಿಸಿದಂತೆ 'ಮನುವಾದದಿಂದ, ಬ್ರಾಹ್ಮಣ್ಯವಾದದಿಂದ, ಸಾಮ್ರಾಜ್ಯವಾದದಿಂದ, ಜಾತಿಪದ್ಧತಿಯಿಂದ, ಕೋಮುವಾದದಿಂದ, ಭಯೋತ್ಪಾದನೆಯಿಂದ, ಮನುವಾದದಿಂದ, ಬಂಡವಾಳಶಾಹಿಯಿಂದ, ಹಸಿವಿನಿಂದ, ಅನಕ್ಷರತೆಯಿಂದ, ನಿರುದ್ಯೋಗದಿಂದ ಆಜಾದಿ ಬೇಕು.' ಅವೆಲ್ಲವುಗಳ ಜೊತೆಗೆ ಹನುಮಕ್ಕನವರ ತರಹದ ಪೆದ್ದರಿಂದ, ಮೂಢರಿಂದ, ಕೋಮುವಾದಿಗಳಿಂದಲೂ ತುರ್ತಾಗಿ ಆಜಾದಿ ಬೇಕಿದೆ. ■

ಅರಸು ರಾಜಕೀಯಾಗಸದ ನಕ್ಷತ್ರ


ಕರ್ನಾಟಕದ ಇತಿಹಾಸದಲ್ಲಿ ಮೊದಲ ಬಾರಿಗೆ ಜಾತಿ ಮೂಲವಾದ ರಾಜಕಾರಣದ ಪ್ರಭುತ್ವ ಮುರಿದು, ಹಿಂದುಳಿದ ಜನಾಂಗದ ಪ್ರಾತಿನಿಧ್ಯದ ಸರಕಾರ ರಚಿಸಿದ ದೇವರಾಜ ಅರಸು ಮೈಸೂರು ರಾಜ್ಯವನ್ನು 'ಕರ್ನಾಟಕ'ವಾಗಿಸಿದರು. ನಂತರ, ಶೋಷಿತರ ಸಮಗ್ರ ಅಭಿವೃದ್ಧಿ ರೂಪಿಸಿದರು. ನೊಂದವರ ನಂದಾದೀಪವಾದರು. ಸಮಾಜ ಪರಿವರ್ತನೆ ಹರಿಕಾರನಾದ ಈ ವರ್ಣರಂಜಿತ ರಾಜ ನಡೆಸಿದ ಅಧಿಕಾರದ ಅವಧಿಯಿಂದ ಕರ್ನಾಟಕದ ಚಿತ್ರಣವೇ ಬದಲಾಗಿದೆ. ದೇಶ ಕಂಡ ಈ ಮಹಾನಾಯಕ ಗತಿಸಿ ಇಂದಿಗೆ 34 ವರ್ಷಗಳಾದವು. ಜನಿಸಿ ನೂರು ವರ್ಷಗಳಾದವು. ಕರ್ನಾಟಕದ ಮಟ್ಟಿಗೆ ಅರಸು ರಾಜಕೀಯಾಗಸದಲ್ಲಿ ಎಂದೆಂದಿಗೂ ಮಿನುಗುವ ನಕ್ಷತ್ರ ಇನ್ನುಳಿದವರೆಲ್ಲಾ ಗ್ರಹಗಳು.



ಇದೇ ತಿಂಗಳು 20ರಂದು ದೇವರಾಜ ಅರಸು ಜನ್ಮ ದಿನ. ಅದೇ ದಿನಾಂಕದಂದು 'ಅರಸು ಜನ್ಮ ಶತಮಾನೋತ್ಸವದ ಕಾರ್ಯಕ್ರಮದ ಸಮಾರೋಪ ಜರುಗಲಿದೆ. ಬಹುಶಃ ಈ ಸರಕಾರವಲ್ಲದೆ ಇನ್ನಾವುದೇ ಸರ್ಕಾರವಿದ್ದರೂ ಅರಸು ಬಗ್ಗೆ ಸೊಲ್ಲೆತ್ತದೆ ಸುಮ್ಮನಾಗುತ್ತಿತ್ತು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ, ಏಕೆಂದರೆ, ಸ್ಥಗಿತಗೊಂಡ ಸಮಾಜಕ್ಕೆ ಚಾಲನೆ ನೀಡಿದ ಮಹನೀಯರ ಬಗ್ಗೆ ಸ್ವಹಿತಾಶಕ್ತಿಗಳು ಮೊದಲಿಂದಲೂ ಒಂದು ಎಚ್ಚರದ ಮನಸ್ಥಿತಿಯನ್ನು ಕಾಯ್ದುಕೊಂಡು ಬಂದಿದೆ. ಉದಾಹರಣೆಗೆ ಅಂಬೇಡ್ಕರ್‌ರವರನ್ನು ವಿದೇಶಕ್ಕೆ ಓದಲು ಕಳುಹಿಸಿದ, ಆ ಮುಖಾಂತರ ಭಾರತಕ್ಕೆ ಒಬ್ಬ ಸಂವಿಧಾನ ಶಿಲ್ಪಿ ದೊರಕುವಂತೆ ಮಾಡಿದ ಕೊಲ್ಲಾಪುರದ ಶಾಹು ಮಹಾರಾಜರ ಬಗ್ಗೆ ನಮ್ಮ ಪುರೋಹಿತಶಾಹಿಗಳು ತಮ್ಮ ಬದುಕಿನುದ್ದಕ್ಕೂ ಚಕಾರವೆತ್ತುವುದಿಲ್ಲ.

ನಮ್ಮಲ್ಲಿಯೇ ಮೀಸಲಾತಿ ಕಾರಣಕ್ಕೆ ಪ್ರಖ್ಯಾತ ಇಂಜಿನಿಯರ್ ವಿಶ್ವೇಶ್ವರಯ್ಯನವರ ದಿವಾನಗಿರಿಯನ್ನೇ ಕಸಿದುಕೊಂಡ ಕೃಷ್ಣ ರಾಜೇಂದ್ರ ಒಡೆಯರ್ ಯಾರಿಗೂ ನೆನಪಾಗುವುದಿಲ್ಲ ದಿವಾನಗಿರಿ ಕಸಿದುಕೊಂಡಿದ್ದಲ್ಲ; ಅವರ ಮನೋಭಿಪ್ರಾಯವನ್ನು ಗೌರವಿಸಿ, "ತಾವು ಆ ಸ್ಥಾನ ಬಿಡುವುದಾದರೆ ಒಂದು ತಿಂಗಳು ಆಡಳಿತ ಸುಗಮವಾಗಿ ಕೆಲಸ ಮಾಡುವಂತೆ ಮಾಡಿ ದಯಮಾಡಿಸಿ" ಎಂದು ಕೇಳಿಕೊಂಡರು. ಇಂತಹ ಮಹಾರಾಜ ಗಾಂಧೀಜಿಗೆ ಮತ್ತು ಕುವೆಂಪುಗೂ ಪ್ರಿಯರಾಗಿದ್ದರು. ಆದರೇನು ಯಥಾಸ್ಥಿತಿ ವಾದಿಗಳು ಅವರ ಸೊಲ್ಲೆತ್ತುವುದಿಲ್ಲ, ತಮ್ಮ ವಿಕೃತ ಮನಸ್ಸಿನ ವಿರೋಧಿಗಳ ಬಗ್ಗೆ ಚಕಾರವೆತ್ತದೆ ಬದುಕುವುದೂ ಒಂದು ಕಲೆ.

ಇಂತಹ ಅಸಹನೆಯ ವರ್ಗವೊಂದು ಅರಸು ಯುಗದಲ್ಲಿ ಬದುಕಿತ್ತು, ಬಹಳ ವಿಜೃಂಭಣೆಯಿಂದಲೇ ಅರಸುರವರನ್ನು ಆಡಿಕೊಂಡು ಬದುಕಿದ್ದ ಆ ಸಮೂಹ ತನ್ನ ಸಂತತಿಯನ್ನೂ ಬಿಟ್ಟುಹೋದ ಫಲವಾಗಿ ಅವೂ ವಿರಾಟ್‌ರೂಪದಲ್ಲೇ ವಿಜೃಂಭಿಸುತ್ತಿವೆ. ಈಗ ನಮ್ಮಗಳ ಕೆಲಸವೇನೆಂದರೆ ಅರಸು ಬಗೆಗೆ ಹಬ್ಬಿಸಿದ ಸುಳ್ಳುಗಳನ್ನು ಅಲ್ಲಗಳೆದು, ಸತ್ಯಸಂಗತಿಗಳನ್ನು ಅನಾವರಣ ಮಾಡು ವುದು.



ಇದೇನು ಅಷ್ಟು ಸುಲಭದ ಕೆಲಸವಲ್ಲ, ಜನಗಳೆಷ್ಟು ನೀಚರಾಗಿ ಹೋಗಿದ್ದಾರೆಂದರೆ ತಾರುಣ್ಯದಲ್ಲಿ ತನ್ನ ಸಾಂಸಾರಿಕ ಸುಖವನ್ನು ಬದಿಗಿಟ್ಟು, ಕಾಗೋಡು ಚಳವಳಿಯಲ್ಲಿ ಸಕ್ರಿಯ ರಾಗಿದ್ದು, 1974 ರಲ್ಲಿ ಭೂಸುಧಾರಣೆ ಕಾಯ್ದೆ ಜಾರಿ ಗೊಂಡಾಗ ನಿಟ್ಟುಸಿರುಬಿಟ್ಟ ಕಾಗೋಡು ತಿಮ್ಮಪ್ಪನನ್ನು ಫಲಾನುಭವಿಗಳ ಮಕ್ಕಳು ಎರಡು ಬಾರಿ ಸೋಲಿಸಿದರು. ಅದಕ್ಕೂ ಮೊದಲು ಫಲಾನುಭವಿಗಳೇ 1978ರಲ್ಲಿ ಅವರನ್ನು ಸೋಲಿಸಿದ್ದರು. ಈ ಬಗ್ಗೆ ಗೋಪಾಲಗೌಡರೇ ಎಚ್ಚರಿಸಿದ್ದರಿಂದ ತಿಮ್ಮಪ್ಪನಿಗೆ ಆಘಾತವಾಗಲಿಲ್ಲ.

ಹಾಗೇ ದೇವರಾಜ ಅರಸು ಸ್ವಂತ ಶ್ರಮವನ್ನೆಲ್ಲಾ ಇಂದಿರಾಗಾಂಧಿ ಅಕೌಂಟಿಗೆ ಭರ್ತಿ ಮಾಡಿ, ಮತದಾರರಿಂದಲೇ ಮೋಸಗೊಂಡಾಗ, ಮುಂದೆ ಕ್ರಾಂತಿರಂಗ ಎಂಬ ತನ್ನದೇ ಅಕೌಂಟ್ ತೆರೆದು, ಅಧಿಕಾರಕ್ಕೆ ಬರಲು ತಯಾರಿ ನಡೆಸಿದ್ದಾಗಲೇ ಕಣ್ಮರೆಯಾದರು. ಬದುಕಿದ್ದರೆ ಖಂಡಿತ ಅಧಿಕಾರಕ್ಕೆ ಬರುತ್ತಿದ್ದರು. ಆದರೆ ಅವರ ನಂಬಿಕೆಗೆ ದ್ರೋಹ ಬಗೆದ ಬಂಗಾರಪ್ಪ ಕ್ರಾಂತಿರಂಗವನ್ನು ಕೈಲಿಡಿದು ಹೊರಟು, ಅದನ್ನು ಹೆಗಡೆ ಬಾಯಿಗೆ ಹಾಕಿ, ಅಲೆಮಾರಿ ರಾಜಕಾರಣ ಮಾಡಿ ಸ್ವಜಾತಿ ಜನರನ್ನೆಲ್ಲಾ ಅಟ್ಟಿಕೊಂಡು ಹೋಗಿ ಬಿಜೆಪಿ ದೊಡ್ಡಿಗೆ ತುಂಬಿದರು. ಅದರ ಫಲ ಅವರ ಮಗಳು ಲೋಕಸಭಾ ಚುನಾವಣೆಯಲ್ಲಿ ಮೂರನೇ ಸ್ಥಾನಕ್ಕಿಳಿದದ್ದು, ಇವೆಲ್ಲಾ ದೇವರಾಜ ಅರಸುಗೆ ಬಗೆದ ದ್ರೋಹದ ಫಲಗಳು.

ಅರಸು ಯುಗ

1970ರಲ್ಲಿ ದಿಢೀರನೆ ಅತ್ಯುತ್ಸಾಹದ ವೇಷದೊಂದಿಗೆ ಉದ್ಭವಿಸಿದ ದೇವರಾಜ ಅರಸು, ಅದಕ್ಕೂ ಮೊದಲು ಮೌನ ಮತ್ತು ದುಗುಡದಲ್ಲೇ ಕಾಲ ಹಾಕಿದ ಅತೃಪ್ತ ರಾಜಕಾರಣಿ. ಆದರೆ 70ರ ದಶಕದಲ್ಲಿ ಹೊಸ ಅವತಾರದೊಂದಿಗೆ ಇಂದಿರಾ ಗಾಂಧಿ ಎಂಬ ದೇವಿ ಮಹಾತ್ಮೆ ಆರಂಭವಾಗುವುದಕ್ಕೂ, ಅರಸು ಆಕೆಯ ಗರ್ಭಗುಡಿಯ ವಾರಸುದಾರರಾಗಿ ನೇಮಕಗೊಂಡಿದ್ದೂ ಯೋಗಾಯೋಗದಂತಿತ್ತು, ಆಗಲೇ ಅರಸು ಯುಗ ಆರಂಭಗೊಂಡಿದ್ದು, ಅದುವರೆಗೂ ಕರ್ನಾಟಕದ ವಿಧಾನಸಭೆ ಸ್ಥಗಿತಗೊಂಡ ಶ್ರೇಣೀಕೃತ ಸಮಾಜದ ಪ್ರತಿಬಿಂಬದಂತೆ ಕಾರ್ಯ ನಿರ್ವಹಿಸುತ್ತ ಬರುತ್ತಿತ್ತು, 223 ಮಂದಿ ಸದಸ್ಯರ ವಿಧಾನಸಭೆಗೆ ಆರಿಸಿ ಬರುವ ಅಭ್ಯರ್ಥಿಗಳ ಪಟ್ಟಿಯಲ್ಲಿ 153 ಮಂದಿ ಲಿಂಗಾಯತರು, ಬ್ರಾಹ್ಮಣರು, ಒಕ್ಕಲಿಗರೇ ಸಿಂಹಪಾಲಿನವರಿದ್ದರು. ಇನ್ನುಳಿದ 73 ಸ್ಥಾನಕ್ಕಾಗಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಅಲ್ಪಸಂಖ್ಯಾತರಿಗೆ ಅವಕಾಶ ಸಿಗುತ್ತಿತ್ತು, ಇದನ್ನು ನೋಡಿ ಯಾವಾಗಲೂ ದುಗುಡಗೊಂಡಂತಿದ್ದ ಅರಸುಗೆ ತಾನು ವಿಧಾನಸಭೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಆರಿಸಿ ತರುವ ಜವಾಬ್ದಾರಿಯೊಂದು ಪ್ರಾಪ್ತಿಯಾಯ್ತು, ಆಗ ಸ್ಥಗಿತಗೊಂಡ ಸಮಾಜದ ಪ್ರಭುತಿಗಳಿಗೆ ತಕ್ಕ ಉತ್ತರ ಕೊಟ್ಟಂತೆ 163 ಜನ ಪರಿಶಿಷ್ಟರು, ಅಲ್ಪಸಂಖ್ಯಾತರು, ಮತ್ತು ದುರ್ಬಲರಿಗೆ ಟಿಕೆಟ್ ಕೊಟ್ಟು, 92 ಮಂದಿ ಗೆದ್ದು ಬರುವಂತೆ ಮಾಡಿದರು. ಇದು ಅರಸು ಯುಗದ ಕಾರ್ಯಕ್ರಮಗಳಿಗೆ ಬುನಾದಿಯಾಯ್ತು.


ಮಾಧ್ಯಮದ ಹೀಗಳಿಕೆ

ಅರಸು ಕೈಹಾಕಿದ ಸಾಹಸಕ್ಕೆ ಮಾಧ್ಯಮದ ಬೃಹಸ್ಪತಿಗಳು ಗೇಲಿ ಮಾಡಿ ನಕ್ಕಿದ್ದರು. ವಿಧಾನಸಭೆಗೆ ಆರಿಸಿ ಬರಬೇಕಾದರೆ, ಆತ ತಮಗೆ ಪರಿಚಯವಿರಬೇಕು, ತಮ್ಮ ಸಲಹೆ ತೆಗೆದುಕೊಳ್ಳಬೇಕು, ಇದಾವುದಕ್ಕೂ ಅರ್ಹರಲ್ಲದ ಕಂಡುಕೇಳರಿಯದ ಜನಗಳನ್ನೆಲ್ಲಾ ನಿಲ್ಲಿಸಿ, ಕರ್ನಾಟಕದ ತುಂಬ ಜೋಗಿಯಂತೆ ಓಡಾಡುತ್ತಿರುವ ದೇವರಾಜ ಅರಸು ಬಗ್ಗೆ ಅಪಪ್ರಚಾರ ಶುರುಮಾಡಿದ ಮಾಧ್ಯಮದವರು, 'ಈತ ಮೇಲು ಜಾತಿಗಳ ವಿರೋಧಿ' ಎಂಬ ಕೂಗೆಬ್ಬಿಸಿ ದರು. ಆ ಸಮಯದಲ್ಲಿ ಮೇಲು ಜಾತಿಯ ಜನ ಅರಸು ಬಗ್ಗೆ ಅತ್ಯಂತ ಹೇಯವಾಗಿ ಮಾತನಾಡಿ ಕೊಳ್ಳುತ್ತಿದ್ದರು. ಆದರೆ, ಅರಸು ಮೇಲುಜಾತಿ ವಿರೋಧಿ ಎಂಬುದಕ್ಕೆ ಯಾವ ಪುರಾವೆಯೂ ಇರಲಿಲ್ಲ, ಈ ಸಮಾಜ ಎಲ್ಲರಿಗೂ ಸೇರಿದ್ದು, ಇಲ್ಲಿನ ಸಂಪತ್ತು ಎಲ್ಲರಿಗೂ ಸೇರಿದ್ದು, ಹಾಗೆಯೇ ಸಮಪಾಲಿನ ಬೇಡಿಕೆಯೂ ನ್ಯಾಯವಾದದ್ದು ಎಂದು ನಂಬಿದ ಎಲ್ಲ ಮೇಲ್ಜಾತಿ ಲೀಡರುಗಳು ಅರಸು ಬೆಂಬಲಿಗರಾಗಿದ್ದರು. ಭೂಸುಧಾರಣೆ ತಂದು ಬ್ರಾಹ್ಮಣರನ್ನೆಲ್ಲಾ ಬೀದಿಗೆ ಬಿಸಾಕಿದ ಎಂದು ದೂರುತ್ತಿದ್ದವರಿಗೆ ಶಿವಮೊಗ್ಗದ ಬದರಿ ನಾರಾಯಣ್, ಕೆ.ಎಚ್.ಶ್ರೀನಿವಾಸ್, ಶಿರ್ನಾಳಿ ಚಂದ್ರಶೇಖರ್ ಮತ್ತು ಗುಂಡೂರಾವ್, ರಮೇಶ್‌ಕುಮಾರ್ ಮುಂತಾದ ಗಣ್ಯ ರಾಜಕಾರಣಿಗಳು ಅರಸು ಜೊತೆ ಇದ್ದರು. ಅಲ್ಲದೆ ಕೆ.ಎಚ್. ಶ್ರೀನಿವಾಸ್ ಮುಖ್ಯಮಂತ್ರಿಗಳ ಕಾರ್ಯದರ್ಶಿ ಗಳಾಗಿದ್ದರು.

ಇನ್ನು ಒಕ್ಕಲಿಗರ ಪೈಕಿ ಒಂದು ಹಿಂಡು ನಾಯಕರಿದ್ದರು. ಮಂಡ್ಯ ಜಿಲ್ಲೆಯಲ್ಲೇ ಎಸ್.ಎಂ. ಕೃಷ್ಣ ತುಮಕೂರು ಜಿಲ್ಲೆಯಲ್ಲಿ ಹುಚ್ಚಮಾಸ್ತಿಗೌಡ, ಹಾಸನದ ಶ್ರೀಕಂಠಯ್ಯ ಚಿಕ್ಕಮಗಳೂರಿನ ಡಿ.ಬಿ. ಚಂದ್ರೇಗೌಡ ಇವರೆಲ್ಲಾ ಇದ್ದರು. ಲಿಂಗಾಯತರಲ್ಲೂ ಘಟಾನುಘಟಿ ನಾಯಕರಾದ ಸಿದ್ದವೀರಪ್ಪ ಚೆನ್ನಬಸಪ್ಪ ಅಲ್ಲದೆ ಉತ್ತರ ಕರ್ನಾಟಕದ ಆರ್.ಎಂ. ದೇಸಾಯಿ ಎಂಬ ನೂರಾರು ಎಕರೆ ಒಡೆಯ ಅರಸು ಬೆನ್ನಿಗಿದ್ದರು. ಇವರಂತೂ ಅರಸು ಶಾಸಕರಾಗಿದ್ದಾಗ ಅಂತಹ ವ್ಯಕ್ತಿ ಬಸ್ಸಿನಲ್ಲಿ ಓಡಾಡುವುದೇ ಎಂದು ತಮ್ಮ ಫಿಯೆಟ್ ಕಾರನ್ನು ಬಳುವಳಿಯಾಗಿ ಕೊಟ್ಟಿದ್ದರು. ಅದಕ್ಕೆ ಮಾಧ್ಯಮದವರು ದೊಡ್ಡ ಗುಲ್ಲೆಬ್ಬಿಸಿದ್ದರು. ಆದರೆ ಅದೇ ಅರಸು ನಿಜಲಿಂಗಪ್ಪನವರ ಸಂಪುಟದಲ್ಲಿ ಕಾರ್ಮಿಕ ಮಂತ್ರಿಯಾಗಿದ್ದಾಗ ನಿಂತುಹೋಗಿದ್ದ ಮಿನರ್ವ ಮಿಲ್ಲನ್ನು ಪುನರಾರಂಭಿಸಿ 3,000 ಕಾರ್ಮಿಕರಿಗೆ ಮರುಜೀವನ ಕೊಟ್ಟ ಬಗ್ಗೆ ಯಾರೂ ಬರೆಯುವುದಿಲ್ಲ. ಹೀಗೆ ಅರಸು ಆಡಳಿತದುದ್ದಕ್ಕೂ ಅವರ ಸಣ್ಣಪುಟ್ಟದನ್ನೇ ದೊಡ್ಡದಾಗಿ ಬಿಂಬಿಸಿ, ಬರೆದು ಅದನ್ನೇ ಚರ್ಚೆ ಮಾಡಿದ್ದರಿಂದ ಅರಸು ಆಡಳಿತಕ್ಕೆ ಸುಳ್ಳುಗಳು ಅಂಟಿವೆ. ಅವು ಮುಳ್ಳುಗಳಾಗಿ ಇನ್ನೂ ಹಾಗೇ ಇವೆ.

ಹಾವನೂರು ವರದಿ

ದೇವರಾಜು ಅರಸು ಆಡಳಿತ ಪ್ರಾರಂಭಿಸಿ ಇಟ್ಟ ಮೊದಲ ದಿಟ್ಟ ಹೆಜ್ಜೆ ಎಂದರೆ ಹಾವನೂರ್ ಕಮಿಷನ್ ನೇಮಕ ಮಾಡಿದ್ದು, ಅದಕ್ಕೂ ಮೊದಲು ಹಿಂದುಳಿದ ವರ್ಗಗಳ ಪ್ರಾತಿನಿಧ್ಯವನ್ನು ಶೇ.70ಕ್ಕಿಂತಲೂ ಹೆಚ್ಚಿಸಿ ಹೊಸ ಜನಾಂಗಕ್ಕೆ ಅವಕಾಶ ಕಲ್ಪಿಸಿದ್ದರು. ಇದರ ಮುಂದುವರಿದ ಕಾರ್ಯವಾಗಿ ಹಾವನೂರ್ ಕಮಿಷನ್ ನೇಮಕ ಮಾಡಿದಾಗ ಯಾವೊಬ್ಬ ಪತ್ರಕರ್ತನೂ ಹಾವನೂರ್ ಬಗ್ಗೆ ತಿಳಿದುಕೊಳ್ಳದ್ದೇ ಗೇಲಿ ಮಾಡಿದರು. ಅರಸು ಮೀಸಲಾತಿ ನೆಪದಲ್ಲಿ ಹಿಡಿದು ತರುತ್ತಿರುವ ಜನಗಳ ಬಗ್ಗೆ ಆಡಿಕೊಂಡು ಬಿದ್ದು ಬಿದ್ದು ನಕ್ಕರು. ಹಾವನೂರು ಕೆಲಸ ಆರಂಭಿಸಲು ಸಾಧ್ಯವಾಗಲಿಲ್ಲ, ಏಕೆಂದರೆ ಅಧಿಕಾರಿಗಳೂ ಕೂಡ ಪತ್ರಕರ್ತರಂತದ್ದೇ ಮನಸ್ಥಿತಿಯ ವರಾದ್ದರಿಂದ ಹಾವನೂರು ಕೇಳಿದ ಮಾಹಿತಿಗೆ ತಾತ್ಸಾರ ತೋರುತ್ತಿದ್ದರು. ಹುಲಿಯಂತಿದ್ದ ಹಾವನೂರು ಕೆರಳಿ, ಅರಸುಗೆ ದೂರಿದರು. ಆಗ ಅರಸು ಅಸಡ್ಡೆ ಮಾಡಿದ ಅಧಿಕಾರಿಗಳನ್ನು ಶಿಕ್ಷೆಗೆ ಗುರಿ ಮಾಡಬೇಕಾಗುತ್ತದೆಂದು ನ್ಯಾಯಾಂಗದ ಅಧಿಕಾರ ಪಡೆದ ಬಗ್ಗೆ ಎಚ್ಚರಿಸಿದರು.




ಕರ್ನಾಟಕದ ಅಂದಿನ ಅಧಿಕಾರಿಗಳು, ಅದರಲ್ಲೂ ಐಎಎಸ್-ಕೆಎಎಸ್ ಅಧಿಕಾರಿಗಳು, ಅರಸು ಮೀಸಲಾತಿಗೆ ಹೆದರಿ ಸಂಘ ಮಾಡಿಕೊಂಡರು. ಇಂದಿರುವ ಅವರ ಸಂಘ ಅರಸು ಆಡಳಿತದಲ್ಲಿ ರಚನೆಗೊಂಡಿದ್ದದ್ದು, ಅವರ ಇಂತಹ ತೀರ್ಮಾನದ ಹಿಂದೆ ಪಟ್ಟಭದ್ರ ಹಿತಾಸಕ್ತಿ ಪತ್ರಕರ್ತರ ಕುಮ್ಮಕ್ಕಿತ್ತು, ಆದರೂ ಅರಸು ಅವರ ಆಡಳಿತ ಕ್ರಮ ಮೆಚ್ಚಿದ ಅಧಿಕಾರಿ ವರ್ಗವೂ ಇತ್ತು, ಆ ಪೈಕಿ ಜೆ.ಸಿ. ಲಿನ್, ಚಿರಂಜೀವಿ ಸಿಂಗ್, ಲಕ್ಷ್ಮಣ್, ಬಿ.ಎನ್. ಗರುಡಾಚಾರ್ ಇಂದೂ ಕೂಡ ಅರಸು ಯುಗವನ್ನು ಕೊಂಡಾಡುತ್ತಾರೆ.

ಅರಸು ಸಾಧನೆಗಳು

ದೇವರಾಜು ಅರಸು ತಳ ಸಮುದಾಯವನ್ನು ಮೇಲೆತ್ತುವ ಸಂಕಲ್ಪ ಮಾಡಿದಾಗ ಸಮಸ್ಯೆಗಳ ಆಗರವೇ ಅವರ ಎದುರಿತ್ತು, ಅವರು ಉದ್ಧಾರ ಮಾಡಲು ಹೊರಟ ಜನ ನಿರ್ಗತಿಕರಾಗಿದ್ದರು. ಬಲಾಢ್ಯರ ಮನೆಯಲ್ಲಿ ಜೀ[...] ಗೇಣಿದಾರರಾಗಿದ್ದರು. ಸಾಲ ಮಾಡಿ ತೀರಿ[...] ಸ್ಥಿತಿಯಲ್ಲಿದ್ದರು. ತಮ್ಮಲ್ಲಿದ್ದ ಧನಕನಕ ವಸ್ತುಗಳ[...] ಇಟ್ಟು ಮರೆತುಬಿಟ್ಟಿದ್ದರು. ಇದೆಲ್ಲಕ್ಕಿಂತ ಅ[...] ವಾದಂತಹ ಮಲಹೊರುವ ಪದ್ಧತಿಯಿತ್ತು, ಇಂತ[...] ಪದ್ಧತಿ ವಿರುದ್ಧ ಸಮರ ಸಾರಿದ್ದ ಬಿ. ಬಸವಲಿಂಗಪ್ಪ [...] ಅರಸು' ಎಂದು ಕರೆಯುವಷ್ಟು ಸಲುಗೆಯಿಂದಿ[...]

ಅರಸು ಕಾರ್ಯಕ್ರಮಗಳನ್ನು ಮೆಚ್ಚಿ ಬೆಂ[...] ಸಚಿವಸಂಪುಟ ಪಡೆಯಿತ್ತು, ಇವರನ್ನು ಕಟ್ಟಿ[...] ಕರ್ನಾಟಕದ ಹಿಂದುಳಿದ ವರ್ಗದ ಅಭಿವೃದ್ಧಿಗೆ ಕೆ[...] ಅರಸುಗೆ, ಇಂದಿರಾಗಾಂಧಿ ದೇಶದ ಮೇಲೆ [...] ಪರಿಸ್ಥಿತಿ ಹೇರಿ 20 ಅಂಶದ ಕಾರ್ಯಕ್ರಮದ ಅ[...] ಜಾರಿ ಮಾಡಬೇಕೆಂಬ ಆಜ್ಞೆ ಹೊರಡಿಸಿದಾಗ ಅದು[...] ಸಂಕಲ್ಪಕ್ಕೆ ವರದಾನವಾಯ್ತು. 20 ಅ[...] ಕಾರ್ಯಕ್ರಮಗಳನ್ನು ಪರಿಪೂರ್ಣವಾಗಿ ಜಾರಿ ಮಾಡಿ[...] ಈ ಕಾರ್ಯಕ್ರಮ ಸಂಪೂರ್ಣ ಜಾರಿಯಾಗಿದ್ದು[...] ದೇಶದಲ್ಲಿ ಕರ್ನಾಟಕದಲ್ಲಿ ಮಾತ್ರ. ಆ ಸಮ[...] ಕರ್ನಾಟಕದಲ್ಲಿ 65 ಸಾವಿರ ಜೀತದಾಳ[...]



ಬಿಡುಗಡೆಗೊಳಿಸಲಾಗಿತ್ತು, ಹಿಂದುಳಿದ ವರ್ಗದ ಅ[...] ನಿಗಮ ಸ್ಥಾಪನೆಯಾಯ್ತು, ವಿದ್ಯಾರ್ಥಿಗಳಿಗಾಗಿ [...] ಶಾಲೆ, ಮಹಿಳಾ ಕಲ್ಯಾಣ ಶಾಲೆ ಆರಂಭಗೊಂಡಿದ್ದು[...] ಕಾನೂನು ಪದವೀಧರರಿಗೆ ಶಿಷ್ಯವೇತನ, ಪದ[...] ನಿರುದ್ಯೋಗಿಗಳಿಗೆ ಮಾಸಾಶನ, ವೃದ್ಧರಿಗೆ, ಅಂಗವಿ[...] ಮಾಸಾಶನ. ಈ ಎಲ್ಲ ಕಾರ್ಯಕ್ರಮ ಸಮರೋಪಾ[...] ನಡೆಯತೊಡಗಿದವು. ಯಾವ ಪತ್ರಿಕೆಯವರು[...] ಕಾರ್ಯಕ್ರಮಗಳಿಗೆ ಪ್ರಚಾರ ಕೊಡಲಿಲ್ಲ, [...] ಇಲಾಖೆಯಿಂದ ನೇರ ಫಲಾನುಭವಿಗಳಿಗೆ ತಲುಪಿ[...] ಕಾರ್ಯಕ್ರಮಗಳ ದೆಸೆಯಿಂದ ದೇವರಾಜ [...] 1978ರಲ್ಲಿ ನಡೆದ ವಿಧಾನಸಭಾ ಚುನಾವಣೆಯ[...] ಅಧಿಕಾರಕ್ಕೆ ಬಂದರು. ಆದರೆ ಪತ್ರಿಕೆಯವರು ನಿರಿ[...] ದೇವೇಗೌಡರ ಸರ್ಕಾರವನ್ನ, ದೇವೇಗೌಡರು ಕೂಡ ಜ[...] "ಇನ್ನು ಕೆಲವೇ ದಿನ ಕಾಯಿರಿ ಬರುತ್ತಿದ್ದೇನೆ, [...] ಸಮಸ್ಯೆಗಳನ್ನು ಸಂಪೂರ್ಣ ಬಗೆಹರಿಸುತ್ತೇನೆ" ಎನ್ನು[...] ಅಂತ ಗೌಡರ ಜನತಾ ಪಾರ್ಟಿ 65 ಸೀಟ[...] ನಿಂತುಹೋದರೆ, ರೆಡ್ಡಿ ಕಾಂಗ್ರೆಸ್ ಸಂಪ[...] ನಿರ್ನಾಮವಾಗಿತ್ತು. ಅರಸು [...] ನಿರೀಕ್ಷಿಸಿದ್ದ ಪತ್ರಕರ್ತರು ನಿಬ್ಬೆರಗಾ[...] ಅರಸು ಮತ್ತೆ ಮುಖ್ಯಮಂತ್ರಿಯ[...]

ಭ್ರಷ್ಟತೆಯ ಆಪಾದ[...]

ದೇವರಾಜ ಅರಸು ಎರಡ[...] ಗೆದ್ದು ಮುಖ್ಯ ಮಂತ್ರಿಯಾದಾ[...] ಪತ್ರಕರ್ತರೇನು ತಮ್ಮ ಅಭಿ[...] ಗಳನ್ನು ತಿದ್ದಿಕೊಳ್ಳಲಿಲ್ಲ, ಅರಸು [...] ಇವರಿಗೆ ಕೇರ್ ಮಾಡಲಿಲ್ಲ. [...] ಸಹೋದರ ಕೆಂಪರಾಜ ಅರಸುರ[...] ಕರೆತಂದು ಫಿಲಂ ಚೇಂಬರ್ ಅಧ್ಯಕ್ಷನನ್ನಾಗಿ ಮಾ[...] ಕೆಂಪರಾಜ ಅರಸು ಬಗ್ಗೆ ಕೆಟ್ಟದಾಗಿ ಬರೆದು ಅವ[...] ಭಯಾನಕ ವ್ಯಕ್ತಿ ಎನ್ನುವಂತೆ ಚಿತ್ರಿಸಿದರು. ಆಗಿನ [...] ಮದ್ರಾಸಿಗೆ ಹೋಗಿ 'ವಿಕ್ರಮಾದಿತ್ಯ' ಸಿನಿಮಾದ ಹಿ[...] ಆಗಿದ್ದ ಕೆಂಪರಾಜ ಅರಸು ತುಂಬ ಓದಿಕೊಂಡ, ತಿ[...] ಇರುವ ಸಭ್ಯ ನಾಗರಿಕ ಎಂಬುದು ಪತ್ರಕರ್ತರಿಗೆ ಬೇ[...]

ಇನ್ನ ಅವರ ಅಳಿಯ ಎಂ.ಡಿ. ನಟರಾಜನ ಬಗ್[...] ವಿಕೃತ ಸುದ್ದಿಗಳನ್ನೇ ಹಬ್ಬಿಸಿದರು. ಎಲ್ಲಾ ಮುಖ್ಯಮ[...] ಅಳಿಯನಂತೆ ಅವನೂ ಇದ್ದ, ಹಿಂದುಳಿದ ವರ್ಗದ[...] ಮುಂದೆ ತರಲು ಒಂದಿಷ್ಟು ತೋಳು ಬಲವೂ ಬೇ[...] ಗ್ರಹಿಸಿದ್ದ. ಈಗಿನವರಂತೆ ಹಣ ಬಲದ ಕಡೆ ಹೊರ[...] ಆದರೂ ಬೆಂಗಳೂರು ಭೂಗತ ಲೋಕದ [...] ನಟರಾಜ್ ಎನ್ನುವಂತೆ ಬರೆದು ಬಿಸಾಕಿದರು. [...] ಖ್ಯಾತಿಯನ್ನು ದೇವರಾಜ ಅರಸುಗೂ ಅಂಟಿಸಿ, [...] ಗೂಂಡಾಗಿರಿಯ ಉದ್ಘಾಟಕ ಎನ್ನುವಂತೆ ಚಿತ್ರಿ[...] ಈಗಲೂ ಕೂಡ ಅರಸು ಪ್ರಸ್ತಾಪ ಬಂದರೆ



ತ್ತು ಗೂಂಡಾಗಿರಿ ಉದ್ಘಾಟಕ ಅರಸು' ಎಂದು ಖಲಿಸುತ್ತಾರೆ. ಅದರಲ್ಲೂ ಅರಸುರವರಷ್ಟು ಭ್ರಷ್ಟ ನ್ನಾರೂ ಇಲ್ಲ ಎಂಬಂತೆ ಬಿಂಬಿಸುತ್ತಾರೆ.


ದೇವರಾಜ ಅರಸು ತಮ್ಮ ಭ್ರಷ್ಟತೆಗೆ ಕಾರಣ ಟ್ಟಿದ್ದಾರೆ. ಹಿಂದುಳಿದ ವರ್ಗಗಳ ಕಾರ್ಯಕ್ರಮದ ನುಷ್ಠಾನಕ್ಕೆ ತನ್ನ ಸರಕಾರವಿರಬೇಕು, ಸರಕಾರವಿರಬೇಕಾದರೆ ಸಕರನ್ನು ಸಾಕಬೇಕು, ಸಾಕಲು ಹಣ ಬೇಕು, ಹೀಗಾಗಿ ಕಡೆ ತೆಗೆದು ಆ ಕಡೆ ಕೊಟ್ಟ ಅರಸು ಬರಿಗೈಯಾಗಿದ್ದು ತಿಹಾಸದಲ್ಲಿ ದಾಖಲಾಗಿದೆ. ಅಧಿಕಾರ ಹೋದನಂತರ ಹಲಿಗೆ ಹೋಗಲೂ ಕಾಸಿಲ್ಲದೆ ಹರಿಖೋಡೆ ಅಂಗಲಾ ದ್ದು ದಾಖಲಾಗಿದೆ. ಅರಸು ನಂತರ ಅವರ ಕುಟುಂಬ ಇದ್ದ ಮನೆಯನ್ನೇ ಶ್ಯಾಮನೂರು ಶಿವಶಂಕರಪ್ಪನವರಿಗೆ ಾರಿದರು. ಅವರ ಮಗಳೊಬ್ಬಳು ಮಾಡಿದ ಸಾಲ ರಿಸಲಾಗದೆ ಜೈಲು ಪಾಲಾಗಿದ್ದರು. ಇಷ್ಟಿದ್ದರೂ ಅರಸು ಷ್ಟ!

ನಿರ್ಗತಿಕರಾಗಿದ್ದವರು, ಮುಖ್ಯಮಂತ್ರಿಗಳಾದ ನಂತರ ಎರಾರು ಕೋಟಿ ಒಡೆಯರಾದದ್ದು ನಮ್ಮ ಕಣ್ಣ ಮುಂದಿದೆ. ವರುಗಳ ಆಸ್ತಿ ಬಗ್ಗೆ ಒಂದು ಸಣ್ಣ ತನಿಖಾ ಲೇಖನ ರೆಯಲಾಗದ ಪತ್ರಕರ್ತರು, ಅರಸುರವರನ್ನು ಭ್ರಷ್ಟ ಎಂದು ಯುವುದನ್ನು ಇನ್ನೂ ಬಿಟ್ಟಿಲ್ಲ. ನಮ್ಮ ನಡುವೆ ನಿಷ್ಠೂರ ಾತಿನ ಪತ್ರಕರ್ತರಾಗಿದ್ದ ವಡ್ಡರ್ಸೆ ರಘುರಾಮ ಶೆಟ್ಟರು, ರಸುರವರನ್ನು ಅಳೆದು ತೂಗಿ ಅವರ ಹತ್ತಿರ ೋಗಿದ್ದವರು. ದೇವರಾಜ ಅರಸು ಒಬ್ಬ ಅಸಾಮಾನ್ಯ ಯಕ. ಹಿಂದುಳಿದ ಜನಗಳ ಕಲ್ಯಾಣದಲ್ಲಿ ಅವರೆಷ್ಟು ಳುಗಿದ್ದರೆಂದರೆ ತಮ್ಮ ಮನೆ, ಆಸ್ತಿ, ಕುಟುಂಬದ ಗ್ಗೆ ಕೂಡ ತಲೆಕೆಡಿಸಿಕೊಳ್ಳದೆ ನಿರ್ಲಿಪ್ತರಾಗಿದ್ದರು.

ಅವರಿಗೆ ಭ್ರಷ್ಟತೆಯ ಪಟ್ಟಕಟ್ಟಿದ ಜನ ಕಲ್ಲಹಳ್ಳಿಗೆ ೋಗಿ, ಕಣ್ಣಾರೆ ಕಂಡು, ತಾವು ವಿಕೃತಗೊಳಿಸಿ ದಾಖಲಿಸಿದ ಹಾನಾಯಕನ ನಿಜಚಿತ್ರ ಬಿಡಿಸುವುದು ಅವರು ಾಡಿಕೊಳ್ಳಬಹುದಾದ ಪ್ರಾಯಶ್ಚಿತ್ತವೆಂಬಂತೆ ವಡ್ಡರ್ಸೆ ರೆದಿದ್ದಾರೆ. ಆದರೇನು, ಅರಸು ಕಾಲದ ಪತ್ರಕರ್ತರು ತಹ ಪ್ರಾಯಶ್ಚಿತ್ತಕ್ಕೆ ತುತ್ತಾಗದೆ ಕಾಲವಾಗಿ ಹೋದರು.

ಅರಸು ಅವರಿಗೆ ಪತ್ರಕರ್ತರು ಯಾಕಿಷ್ಟು ಪೂರ್ವಗ್ರಹ ಡಿತರಾಗಿದ್ದಾರೆ ಎಂಬುದು ಗೊತ್ತಿತ್ತು. ಆದರೂ ತಾವು ಾಡಿರುವ ಕೆಲಸಗಳನ್ನಾದರೂ ವಸ್ತುನಿಷ್ಠತೆಯಿಂದ ವರದಿ ಾಡಬಹುದಲ್ಲಾ ಎಂದುಕೊಂಡರು. ಪತ್ರಿಕಾರಂಗದಲ್ಲಿ ಮಾರು 90 ಪರ್ಸೆಂಟ್ ಬ್ರಾಹ್ಮಣರೇ ತುಂಬಿದ್ದರಿಂದ ವರಿಂದ ಮೆಚ್ಚುಗೆ ನಿರೀಕ್ಷಿಸುವುದು ಸರಿಯಲ್ಲ ಅನ್ನಿಸಿತ್ತು. ನ್ನುಳಿದ ಹತ್ತು ಪರ್ಸೆಂಟ್ ಶೂದ್ರ ಪತ್ರಕರ್ತರಿಗೆ, ಅರಸು ಡಳಿತ ಶೈಲಿ ಖುಷಿ ಕೊಟ್ಟರೂ ಅವರೇನೂ ಮಾಡು ತಿರಲಿಲ್ಲ. ಆದ್ದರಿಂದ ಪರಿವರ್ತನೆಯ ಒಂದು ದಶಕ ರ್ನಾಟಕದ ಪತ್ರಕರ್ತರ ಕಿಡಿಗೇಡಿತನಕ್ಕೆ ಕುಹಕದಿಂದ ಡಿದ ವರದಿಗಳಿಗೆ ತುತ್ತಾಗಿಹೋಯ್ತು. ಆ ನಂತರ ಕೆ. ಜಾಗೀರ್‌ದಾರ್, ವಡ್ಡರ್ಸೆ ರಘುರಾಮ ಶೆಟ್ಟರು, ಣಂದೂರು ವೆಂಕಟಪ್ಪ ಗೌಡ, ಡಿ.ಕೆ. ನಾಯ್ಕರ್ ಅರಸುಗೆ ಯ ಒದಗಿಸಿದರೂ ಆಗ ಅರಸು ಬದುಕಿರಲಿಲ್ಲ.

ಸಮರ್ಥ ವಿರೋಧಿ ನಾಯಕ



ಅರಸು ಆಡಳಿತದಲ್ಲಿ ಅವರಿಗೆ ಸಾಟಿಯಾಗಿ ವಿರೋಧ ಪಕ್ಷದ ಯಕನ ಕರ್ತವ್ಯ ನಿರ್ವಹಿಸಿದವರು ವೇಗೌಡರು. ಅರಸು ಆಡಳಿತದ ನತೆಗಳ ಬಗ್ಗೆ ಸತತ ಮೂರು ಗಂಟೆ ಾದನೆ ಮಾಡಿದ ದೇವೇಗೌಡರಿಗೆ, ಉತ್ತರಗಳನ್ನು ನಾಲ್ಕು ಗಂಟೆ ನೀಡಿದ ಸು ವಿಧಾನಮಂಡಲದಲ್ಲಿ ಒಂದು ಖಲೆಯನ್ನೇ ನಿರ್ಮಿಸಿದರು. ಸುರವರ ಭ್ರಷ್ಟತೆ ಬಗ್ಗೆ ಬಹುದೊಡ್ಡ ಷಣವೊಂದನ್ನು ತರೀಕೆರೆಯ ರಂಗ ಸಭೆಯಲ್ಲಿ ಮಾಡಿದ ದೇವೇಗೌಡರು "ಭ್ರಷ್ಟತೆಗೆ ಕ ರತ್ನ ಕೊಡುವುದಿದ್ದರೆ, ಅದು ಅರಸುಗೆ ಸಲ್ಲಬೇಕು" ಿದ್ದರು.

ದೇವೇಗೌಡರು ಅರಸು ಆಡಳಿತವನ್ನೆಂದೂ ಮೆಚ್ಚಲಿಲ್ಲ, ಸು ಮೆಚ್ಚಿದ್ದು ಗುಂಡೂರಾಯರನ್ನ, ಅಂತ ಅನಿವಾರ್ಯತೆ


ಕೂಡ ಅವರಿಗೆ ಬಂದೊದಗಿತ್ತು, ಆದರೆ ಮುಂದೆ ಅಧಿಕಾರಕ್ಕೆ ಬಂದ ದೇವೇಗೌಡರ ಬಗ್ಗೆ ಪ್ರೊ. ವೆಂಕಟಗಿರಿ ಗೌಡರು 'ಕಿಂಗ್ ಆಫ್ ಕರಪ್ಷನ್' ಎಂಬ ಪುಸ್ತಕ ಹೊರತಂದರು. ಆ ಪುಸ್ತಕವಿನ್ನು ದೇವೇಗೌಡರ ವಿರೋಧಿಗಳ ಬಳಿ ಇದೆ. ಗೌಡರೇನೂ ಅದಕ್ಕೆ ಉತ್ತರಿಸಲಿಲ್ಲ, ತಲೆ ಕೆಡಿಸಿಕೊಳ್ಳಲಿಲ್ಲ.

ಕೋಣಂದೂರು ವೆಂಕಟಪ್ಪಗೌಡರು ತಂದ 'ಪರಿವರ್ತನೆ ಹರಿಕಾರ' ಎಂಬ ಪುಸ್ತಕಕ್ಕೆ ಲೇಖನ ಬರೆದಿರುವ ಗೌಡರು, ಅರಸು ಆಡಳಿತದ ಬಗ್ಗೆ ಒಂದೇ ಒಂದು ಸಮಾಧಾನಕರ ಮಾತನ್ನು ದಾಖಲಿಸದೆ ಸಾರಾಸಗಟು ಖಂಡಿಸಿದ್ದಾರೆ. ಆದರೆ ಈಚೆಗೆ ವಾರ್ತಾ ಭಾರತಿ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ "ಅರಸು ಮಹಾ ಮಾನವತಾವಾದಿ, ತನ್ನ ಸಾಲ ತೀರಿಸಿದ ಹೃದಯವಂತ" ಎಂದು ಅತ್ತು ಬಿಟ್ಟಿದ್ದಾರೆ. ಇದರಲ್ಲಿ ಯಾವುದು ಸತ್ಯವೆಂಬುದು ತಿಳಿಯುತ್ತಿಲ್ಲ.

ಗೌಡರು ಹೊಲ ಉತ್ತಿದ್ದು, ಕುಂಟೆ ಹೊಡೆದದ್ದು ಮತ್ತು ಕೆಸರುಗದ್ದೆಯಿಂದ ಎತ್ತುಗಳೊಂದಿಗೆ ನಡೆದು ಬಂದದ್ದನ್ನು ಯಾರೂ ನೋಡಿಲ್ಲ. ಆದರೆ ದೇವರಾಜ ಅರಸು ದೈತ್ಯ ಎತ್ತುಗಳೊಂದಿಗೆ ಬೇಸಾಯ ಮಾಡಿ, ಬೆಳೆ ಬೆಳೆದದ್ದು, ಹಸುಗಳನ್ನು ಕಟ್ಟಿ ಹಾಲು ಮಾರಿದ್ದನ್ನು ನೋಡಿದವರಿದ್ದಾರೆ. ಮಂತ್ರಿಗಿರಿ ಹೋದನಂತರವೂ ಬೆಂಗಳೂರಿನ ಮಲ್ಲೇಶ್ವರದಲ್ಲಿ ಹಸು ಕಟ್ಟಿ ಹಾಲು ಮಾರಿದ್ದರು. ಸುಂದರವಾದ ಎತ್ತುಗಳು ಬರುವ ಚುಂಚನಕಟ್ಟೆ ಜಾತ್ರೆಗೆ ಬಂದು ದನಗಳನ್ನು ನೋಡಿ ಹೋಗುತ್ತಿದ್ದರು. ಮಲಗುವ ಮುನ್ನ ದನಗಳ ಮೈ ಸವರಿ ಮುದ್ದಿಸಿ ಹೋಗುತ್ತಿದ್ದರು. ಆದರೂ ಅರಸು ಎಂದೂ ಮಣ್ಣಿನ ಮಗನಾಗಿ ಮಾಧ್ಯಮದವರಿಗೆ ಕಾಣಲೇ ಇಲ್ಲ.

ರೈತಾಪಿ ಕೆಲಸವನ್ನು ತಮ್ಮನಿಗೆ ವಹಿಸಿ, ಒಂದಿಷ್ಟು ಓದಿ, ಕೆಲ ದಿನ ಮೇಷ್ಟ್ರರಾಗಿ, ನಂತರ ಸಬ್ಕೊರ್ಸಿಯಾಗಿ ಕಂಟ್ರಾಕ್ಟ್ ಮಾಡಿಸುತ್ತಲೇ ರಾಜಕಾರಣಕ್ಕೆ ಬಂದು, ಶಾಸಕರಾಗಿ ಮಂತ್ರಿ, ಮುಖ್ಯಮಂತ್ರಿ ಕಡೆಗೆ ಪ್ರಧಾನಮಂತ್ರಿಯೂ ಆದ ದೇವೇಗೌಡರೇ ಇವತ್ತಿಗೂ ಮಣ್ಣಿನ ಮಗ. ಇದೊಂದು ರೀತಿ ಮೂಢ ನಂಬಿಕೆಯಿದ್ದಂತೆ.

ಅರಸು ದುರ್ದಿನಗಳು



ಇಂದಿರಾ ಗಾಂಧಿ ಸೋತು, ಜನತಾ ಪಕ್ಷದವರು ತನ್ನನ್ನು ಜೈಲಿಗೆ ಹಾಕುವ ಮುನ್ನ ಈ ದೇಶದಿಂದಲೇ ಪರಾರಿಯಾಗಬೇಕೆಂದು ಆಕೆ ಯೋಚಿಸು ತ್ತಿರುವ ಸಮಯದಲ್ಲಿ ಅರಸು ತಮ್ಮ ಆಪ್ತ ಬಳಗದ ಒಂದಿಬ್ಬರೊಂದಿಗೆ ದೆಹಲಿಗೆ ಹೋದರು. ಇಂದಿರಾ ಗಾಂಧಿ ಮನೆಯ ಹತ್ತಿರ ಹೋಗಿ ನೋಡಿದಾಗ ಅರಸು ದಂಗುಬಡಿದು ನಿಂತುಬಿಟ್ಟರು. ಏಕೆಂದರೆ ಇಂದಿರಾ ಗಾಂಧಿ ರಾಹುಲ್ ಗಾಂಧಿ ಎಂಬ ಪುಟ್ಟ ಮಗುವಿನ ಅಂಡು ತೊಳೆಯುತ್ತ ಸಾಮಾನ್ಯ ಹೆಂಗಸಿನಂತೆ ಕಂಡುಬಿಟ್ಟರು. ತಮ್ಮ ಆಘಾತವನ್ನು ತೋರಿಸಿಕೊಳ್ಳದೆ, ಮಾತನಾಡಿಸಿದ ಅರಸುಗೆ ಇಂದಿರಾ ಗಾಂಧಿ ಹೆದರಿದ ಮಹಿಳೆ ತನ್ನ ಅಸಹಾಯಕತೆ ತೋಡಿಕೊಳ್ಳುವಂತೆ, ಜನತಾ ಪಕ್ಷದ ನಾಯಕರು ತನ್ನ ಬಗ್ಗೆ ನಡೆಸುತ್ತಿರುವ ಮಸಲತ್ತಿನ ವಿವರ ಹೇಳಿದರು. ಆಗ ಅರಸು, "ಹೆದರಬೇಡಿ ಮೇಡಂ. ಕರ್ನಾಟಕಕ್ಕೆ ಬನ್ನಿ. ನಿಮ್ಮನ್ನು ಗೆಲ್ಲಿಸಿ ಪಾರ್ಲಿಮೆಂಟಿಗೆ ಕಳಿಸೊ ಜವಾಬ್ದಾರಿ ನನ್ನದು" ಎಂದು ಹುರಿದುಂಬಿಸಿದರು.

ಅನುಮಾನದಿಂದಲೇ ಒಪ್ಪಿಕೊಂಡು ಕರ್ನಾಟಕಕ್ಕೆ ಬಂದ ಇಂದಿರಾ ಗಾಂಧಿ ಚಿಕ್ಕಮಗಳೂರಿಗೆ ಹೋಗುವ ಮಾರ್ಗ ಮಧ್ಯದ ಉದ್ದೇಬೋರನ ಹಳ್ಳಿ ಹಂಪ್‌ನಲ್ಲಿ ಕಾರು ಕೆಟ್ಟು ನಿಂತಿತು. ಆಗ ಇಂದಿರಾ ಗಾಂಧಿ "ತಿನ್ನಲು ಏನಾದರೂ ಇದೆಯೇ" ಎಂದರು. ಕಾರಿನಲ್ಲಿದ್ದ ಒಣ ಸೇಬನ್ನು ಯಾರೋ ನೀಡಿದರು. ಅದನ್ನು ಇಂದಿರಾ ಗಾಂಧಿ ಕಡಿದು ತಿನ್ನುವುದನ್ನು ನೋಡಿದ ಅರಸುಗೆ ಎಂದೂ ಬರದ ಅಳು ಬಂದುಬಿಟ್ಟಿತು. ಡಿ.ಬಿ. ಚಂದ್ರೇಗೌಡರು ಸಮಾಧಾನ ಮಾಡಿದರೂ ಅವರ ಕಣ್ಣೀರು ನಿಲ್ಲಲಿಲ್ಲ. "ಈ ದೇಶವನ್ನಾಳಿದ ಮಹಾ ನಾಯಕಿಗೆ ಇಂತಹ ಸ್ಥಿತಿಯೇ! ಆಕೆಗೆ ಹಸಿವಾದಾಗ ಕೊಡಲು ನಮ್ಮ ಬಳಿ ಏನೂ ಇಲ್ಲದೆ ಒಣಸೇಬು ತಿನ್ನುವ ಸ್ಥಿತಿ ಬಂತೆ?" ಎಂಬುದೇ ಅರಸು ಕಣ್ಣೀರಿಗೆ ಕಾರಣವಾಗಿತ್ತು.

ಅಂದು ನಡೆದ ಚುನಾವಣೆಯಲ್ಲಿ ಜನತಾ ಪಕ್ಷದ ವೀರೇಂದ್ರ ಪಾಟೀಲ್ ವಿರುದ್ಧ ಇಂದಿರಾ ಗಾಂಧಿ ಗೆದ್ದರು. ಆದರೆ ಮಾಧ್ಯಮದವರು ಹಿಂದಿನಂತೆ ಅರಸುರವರನ್ನು ಇಂತಹ ಅವಾಂತರ ಸೃಷ್ಟಿ ಮಾಡಿದ ಬ್ರಹ್ಮರಾಕ್ಷಸನಂತೆ ಚಿತ್ರಿಸಿ, ಅವರ ಭಾಷಣಗಳನ್ನೆಲ್ಲ ತಿರುಚಿ, ಜಾತಿಜಗಳ ಹಚ್ಚುವ ಕ್ಷುದ್ರ ರಾಜಕಾರಣಿಯಂತೆ ಬರೆದರು. ನಿಜಕ್ಕೂ ಅರಸು ಮಾಡಿದ ಭಾಷಣದಲ್ಲಿ ವರ್ಗ ಸಮರವಿತ್ತಷ್ಟೇ.

ಇಂದಿರಾ ಗಾಂಧಿ ಗೆದ್ದು ಹೋಗಿ ಮಗ ಸಂಜಯ ಗಾಂಧಿ ಜೊತೆ ಸೇರಿ ಸಂಚು ಮಾಡಿ ಜನತಾ ಸರ್ಕಾರ ಕೆಡವಿ, ಚರಣ್ ಸಿಂಗ್ ಪ್ರಧಾನಿಯಾಗುವಂತೆ ಮಾಡಿದರು. ಇತ್ತ ಕರ್ನಾಟಕದಿಂದ ಇಂದಿರಾ ಗಾಂಧಿಯವನ್ನು ಗೆಲ್ಲಿಸಿಕೊಂಡು ಹೋದ ಅರಸು ರಾಷ್ಟ್ರನಾಯಕರ ಘನತೆಯಿಂದ ಬೀಗುತ್ತಿದ್ದರು. ಆಗ ದೆಹಲಿಯಲ್ಲಿ ನಡೆದ ಒಂದು ಕಾಂಗ್ರೆಸ್ ಸಭೆಯಲ್ಲಿ "ಸಂಜಯ ಗಾಂಧಿ ರಾಜ್ಯದ ರಾಜಕಾರಣದಲ್ಲಿ ತಲೆ ತೂರಿಸಿ ಆಡಳಿತದ ಬಗ್ಗೆ ನಿರ್ದೇಶನ ಕೊಡುವುದನ್ನು ನಿಲ್ಲಿಸಬೇಕು" ಎಂದು ಅರಸು ಹೇಳಿದರು. ಸಭೆ ಒಂದುಕ್ಷಣ ಸ್ತಬ್ಧವಾಯಿತು. ಅರಸು ಮಾತಿನಿಂದ ಸಿಟ್ಟುಗೊಂಡ ತಾಯಿ-ಮಗ, ಅಂದೇ ಅರಸರನ್ನು ಬದಲಾಯಿಸಿ ತಮ್ಮ ಕೈಗೊಂಬೆಯೊಂದನ್ನು ಸ್ಥಾಪಿಸಲು ತೀರ್ಮಾನಿಸಿದರು. ಅದರಂತೆ ಕರ್ನಾಟಕದ ಮೇಲೆ ಗುಂಡೂರಾಯರನ್ನು ಹೇರಿದರು.

ಅರಸು ಅಧಿಕಾರ ಕಳೆದುಕೊಂಡನಂತರ, ತಾವು ಬೆಳೆಸಿದ ಹಿಂದುಳಿದ ವರ್ಗದ ನಾಯಕರೆಲ್ಲಾ ಗುಂಪಾಗಿ ಹೋಗಿ ಗುಂಡೂರಾಯರ ಪಾಳಯ ಸೇರಿದರು. "ನಮಗೆ ಮಾನಸಿಕವಾದ ಕೂಲಿಯ ಅಗತ್ಯವಿಲ್ಲ. ನಿಮ್ಮ ಆಳಾಗಿರುತ್ತೇವೆ" ಎಂದು ಸಾಲಾಗಿ ನಿಂತು ಸಹಿ ಮಾಡಿದರು. ಆಗ ಅರ್ಧ ರಾತ್ರಿಯಲ್ಲಿ ಅರಸುರವರನ್ನು ಬಿಟ್ಟು ಚಂದ್ರೇಗೌಡ ಹೊರಟಾಗ ಅರಸು ಕಣ್ಣಲ್ಲಿ ನೀರು ಬಂದವು. ತಾವು ಬೆಳೆಸಿ ಎಂ.ಪಿ. ಮಾಡಿ, ಮಂತ್ರಿ ಮಾಡಿದ ಹುಡುಗ ಅರಸರ ಹೆಂಗರುಳಿನ ಅರಿವಿದ್ದರೂ ಹೊರಟುಹೋದದ್ದು ಆಘಾತ ನೀಡಿತ್ತು.


ದೆಹಲಿ ರಾಜಕಾರಣ ಮನರಂಜನೆ ನೀಡತೊಡಗಿತ್ತು. ಆಗ ಪ್ರಜಾವಾಣಿಯಲ್ಲಿ ಕಾಲಂ ಬರೆಯುತ್ತಿದ್ದ ಲಂಕೇಶರು, "ಛೇರ್ಮನ್ ಚರಣಪ್ಪ ಉತ್ತರಳ್ಳಿ ಇಂದಿರವ್ವ" ಎಂಬ ತಲೆಬರಹದ ಲೇಖನ ಬರೆದರು. ಅದರಲ್ಲಿ ದೇಶದ ರಾಜಕಾರಣವನ್ನು ಪಂಚಾಯ್ತಿ ರಾಜಕಾರಣದ ಮಟ್ಟಕ್ಕೆ ಇಳಿಸಿದ ಅಣಕ ತಮಾಷೆಯ ಚರ್ಚೆಯನ್ನು ಹುಟ್ಟುಹಾಕಿತ್ತು. ಆ ಕಾಲಂ ಓದಿದ ಅರಸು, ವಡ್ಡರ್ಸೆ ರಘುರಾಮ ಶೆಟ್ಟರನ್ನು ಕರೆದು "ಯಾರ್ರಿ ಈ ಲಂಕೇಶ್? ತುಂಬಾ ಚೆನ್ನಾಗಿ ಬರೀತಾರೆ" ಎಂದರು. "ಲಂಕೇಶ್ ಗೊತ್ತಿಲವಾ ಸಾರ್? ಕರಕೊಂಡು ಬರ್ತಿನಿರಿ" ಎಂದ ಶೆಟ್ಟರು ಅದೇ ದಿನ ಅರಸು ಮತ್ತು ಲಂಕೇಶರನ್ನು ಭೇಟಿ ಮಾಡಿಸಿದರು. ಅರಸರಲ್ಲಿನ ಮಾನವೀಯ ಗುಣವನ್ನು ಗ್ರಹಿಸಿದ ಲಂಕೇಶರು, ಆ ವಾರ ಅರಸರ ಮಾನವೀಯ ಗುಣಗಳ ಬಗ್ಗೆ ಲೇಖನ ಬರೆದರು. ಅದು ಪ್ರಕಟವಾದ ನಂತರ ಅರಸು ವಿರುದ್ಧವಿದ್ದ ಪ್ರಜಾವಾಣಿ ಮಾಲೀಕರು ಸಿಟ್ಟುಗೊಂಡು ಮುಂದಿನ ವಾರದಿಂದ ಅಂಕಣ ನಿಲ್ಲಿಸಿದರು. ಸಿಟ್ಟುಗೊಂಡ ಲಂಕೇಶ್ ಮೂರೇ ತಿಂಗಳಲ್ಲಿ ತಮ್ಮ ಪತ್ರಿಕೆ ತೆರೆದರೆ, ಆ ತಿಂಗಳೇ ಸಂಜಯಗಾಂಧಿ ವಿಮಾನದ ಸಮೇತ ನೆಲಕ್ಕಪ್ಪಳಿಸಿದರು. ಅತ್ತ ಮಗನನ್ನು ಕಳೆದುಕೊಂಡ ಇಂದಿರಾ ಗಾಂಧಿ ಇತ್ತ ಪ್ರೀತಿಯ ಮಗಳನ್ನು ಕಳೆದುಕೊಂಡ ಅರಸು ಸಮಾನ ದುಃಖಿಗಳಾದರು.

ಯಮ ಧೈರ್ಯದ ದೇವರಾಜ ಅರಸು ಯಾವುದಕ್ಕೂ ಎದೆಗುಂದಲಿಲ್ಲ, ಸ್ಥಗಿತಗೊಂಡಿದ್ದ ವ್ಯವಸ್ಥೆಗೆ ಚಾಲನೆ ಕೊಟ್ಟಿದ್ದರು. ಭವಿಷ್ಯದಲ್ಲಿ ಅದರ ಫಲವನ್ನು ಗ್ರಹಿಸಿ, ತೃಪ್ತ ಭಾವನೆಯಲ್ಲದ್ದರೂ ಅವರನ್ನು ಇಂದಿರಾ ಗಾಂಧಿ ನಡೆಸಿಕೊಂಡ ಬಗ್ಗೆ ವ್ಯಗ್ರಗೊಂಡಿದ್ದರು. ಅದರ ಫಲವೇ ಕ್ರಾಂತಿರಂಗದ ಉದಯ. ಅದರ ಚಾಲನೆಗೆ ಸಾಥ್ ಕೊಟ್ಟವರು ಜೆ.ಎಚ್. ಪಟೇಲರು. ಅರಸು ಮುಖ್ಯಮಂತ್ರಿಯಾಗಿದ್ದಾಗ ವಿರೋಧಿ ನಾಯಕರಾಗಿ ಕೆಲಸ ಮಾಡಿದ ಪಟೇಲರು "ಸೋಷಲಿಸ್ಟರು ಮಾಡೋ ಕೆಲಸನೆಲ್ಲ ಅರಸು ಮಾಡಿದ ಮೇಲೆ ನಮಗಿಲ್ಲೇನು ಕೆಲಸ ?" ಎಂದು ಅರಸು ಪಾಳಯ ಸೇರಿದರು. ಇದರಿಂದ ಉತ್ತೇಜನಗೊಂಡ ಅರಸು, "ಹೋಗೋರೆಲ್ಲಾ ಹೋಗಲಿ. ನನ್ನ ಜೊತೆ ಪಟೇಲರವ್ರೆ" ಎಂದು ಠೇಂಕರಿಸಿದ್ದರು. ಪಟೇಲರು ಅರಸು ಜೊತೆ ಹೋಗಿ ನಿಂತಿದ್ದು ಅರಸು ಆಡಳಿತಕ್ಕೆ ಪ್ರಜ್ಞಾವಂತ ಸಮಾಜ ಕೊಟ್ಟ ಬಿರುದಾಗಿತ್ತು. ಮುಂದೆ ಅರಸರಿಂದ ದೂರ ಹೋಗಿದ್ದ ಮೊಯ್ಲಿ, ಬಂಗಾರಪ್ಪ ಧರಂಸಿಂಗ್ ಇವರೆಲ್ಲಾ ಮುಖ್ಯಮಂತ್ರಿಗಳಾದರು. ಈಗಿನ ಸಿದ್ದರಾಮಯ್ಯ ಕೂಡ ಅರಸು ರಾಜಕಾರಣದ ಫಲವೇ. ಅರಸು ಇಲ್ಲದಿದ್ದರೆ ಯಡಿಯೂರಪ್ಪನ ಕಾಲದಲ್ಲಾದಂತೆ ನಾನಾದ ಮೇಲೆ ನೀನು ಎನ್ನುವಂತಾಗು ತ್ತಿತ್ತು. ದೇವರಾಜ ಅರಸುಗಿಂತ ಮೊದಲು ಆರು ಜನ ಮುಖ್ಯಮಂತ್ರಿಗಳಾದರು. ಆನಂತರ ಹದಿನೈದು ಜನ ಬಂದುಹೋಗಿದ್ದಾರೆ. ಆದರೆ, ಯಾರಿಂದಲೂ ಅರಸು ಸಾಧನೆ ಸಾಧ್ಯವಾಗಿಲ್ಲ, ಮುಂದೂ ಕೂಡ ಸಾಧ್ಯವಿಲ್ಲ. ಏಕೆಂದರೆ ಅರಸು ಯುದ್ಧ ಗೆದ್ದು ದೇಶ ಕಟ್ಟಿ ಆಳುವ ಕನಸಿನೊಂದಿಗೆ ಬಂದಿದ್ದರು. ಅಧಿಕಾರ ಸಿಕ್ಕ ಕೂಡಲೇ ಎಲ್ಲಾ ಬಾಣಗಳನ್ನು ಒಂದೊಂದೇ ಪ್ರಯೋಗಿಸಿ ಯಶಸ್ಸು ಕಂಡ ಚಕ್ರವರ್ತಿಯಾದರು. ಅರಸು ಯುಗದ ಕಡೆ ನಮ್ಮ ಪೂರ್ವಗ್ರಹಗಳನ್ನು ಬದಿಗೊತ್ತಿ ಬಿಡುಗಣ್ಣಾಗಿ ನೋಡಿದ್ದಾದರೆ, ಕರ್ನಾಟಕದ ರಾಜಕೀಯಾಗಸದಲ್ಲಿ ಅರಸು ಎಂದೂ ಹೊಳೆಯುವ ನಕ್ಷತ್ರವಾಗಿದ್ದರೆ, ಇನ್ನುಳಿದವು ಮತ್ತೀಗ ಬದುಕಿರುವವರೆಲ್ಲಾ ಬರೀ ಗ್ರಹಗಳು.

■ ಬಿ. ಚಂದ್ರೇಗೌಡ

ಗ್ರಂಥ ಋಣ: 'ಬಹುರೂಪಿ ಅರಸು' ವಡ್ಡರ್ಸೆ ರಘುರಾಮ ಶೆಟ್ಟಿ, ಕೋಣಂದೂರು ವೆಂಕಪ್ಪ ಗೌಡ 'ಪರಿವರ್ತನೆ ಹರಿಕಾರ'

ಧೀಮಂತ ನಾಯಕ



ಧೀಮಂತ ನಾಯಕ
ಧೀಮಂತ ನಾಯಕ
ಕನ್ನಡಮ್ಮನ ಬಸಿರಿನಲಿ
ಹುಟ್ಟಬೇಕು
ನಿನ್ನಂತಹ ನಾಯಕ

ಈ ನೆಲಕೆ
ನೀನಿಟ್ಟ ಹೆಸರು
ಕರ್ನಾಟಕ
ಇಂದಿಗೆ ಮುಗಿಯಿತೇ
ನಿನ್ನ ಜೀವನ ನಾಟಕ
ಧೀಮಂತ ನಾಯಕ

ಬಡವ ಬಲ್ಲಿದರನ್ನು
ನೀ ಕರೆದೆ
ಅಲ್ಪಸಂಖ್ಯಾತರೆಂದು
ನಿನ್ನ ಸಾಧನೆಯ ಪಟ್ಟಿ
ಅಸಂಖ್ಯಾತವೆಂದೂ

ಸಾಮಾಜಿಕ ನ್ಯಾಯದ ಹರಿಕಾರ
ನೀ ಕಷ್ಟದಲ್ಲಿದ್ದಾಗ
ಯಾರು ಕೊಡಲಿಲ್ಲ
ನಿನಗೆ ಸಹಕಾರ

ನಿನ್ನ ಎರಡು ವರ್ಷಗಳ
ರಾಜಕೀಯ ಸೆರೆವಾಸ
ಮುಗಿಯಿತೇ ಇಂದಿಗೆ
ಈ ಜಗದ ಸಹವಾಸ

ತಾಳ್ಮೆ ತನ್ಮಯಗಳ
ಚಿನ್ಮಯ ಮೂರ್ತಿ
ಕರ್ನಾಟಕದಿಂದ
ಕಾಶ್ಮೀರದವರೆಗೆ
ಲಭಿಸಲಿ ಕೀರ್ತಿ


ರಾಜಕೀಯ ಬಾಂದಳದಲ್ಲಿ
ನಿನ್ನದು ಅವಿಶ್ರಾಂತ ಸೇವೆ
ಇದರೊಳಗೆ ನಿನ್ನ ಬಾಳೆಲ್ಲಾ
ಬರೀ ನೋವೆ

ಎಲ್ಲಾ ಮರೆತು
ಮರೆಯಾದ ನಾಯಕ
ಧೀಮಂತ ನಾಯಕ



■ ಡಾ. ಡಿ.ಸಿ. ರಾಜಪ್ಪ ಐ.ಪಿ.ಎಸ್.,
ಪೊಲೀಸ್ ಅಧೀಕ್ಷಕರು,
ಆಡಳಿತ, ಸಿಐಡಿ, ಬೆಂಗಳೂರು.

ಕೆಎಎಸ್ ಖದೀಮನ ಕನ್ಯಾ ಶಿಕಾರಿ


ಕೀಚಕ ನಿರಂಜನ್ ಬಾಬು


ಬಲಿಯಾದ ಚೈತ್ರಾ

ಸರ್ಕಾರಿ ಅಧಿಕಾರಿಯೊಬ್ಬ ಕೆಡಲು ನಿಂತನೆಂದರೆ ಅದೆಷ್ಟು ದುಷ್ಟನಾಗಲು ಸಾಧ್ಯ?

ಬಂಗಾರಪ್ಪ ಕಾಲದ ಅಲೆಗ್ಸಾಂಡರ್, ಪಟೇಲ್ ಪೀರಿಯಡ್ಡಿನ ಬಿ.ಎಸ್. ಪಾಟೀಲ್. ಮೊನ್ನೆಯಷ್ಟೇ ಬೆಂಗಳೂರು ನಗರ ಡಿಸಿಯಾಗಿ ಜೈಲುಕಂಡ ಅಯ್ಯಪ್ಪ ಅಥವಾ ತೆಲಗಿ ಕೇಸಲ್ಲಿ ತಾನೇ ಕಾಯುತ್ತಿದ್ದ ಜೈಲಿಗೆ ಕೈದಿಯಾಗಬೇಕಾದ ಜಯಸಿಂಹ? ಭ್ರಷ್ಟಾಚಾರದ ಆರೋಪದಲ್ಲಿ ಜೈಲುಪಾಲಾದ ಅದೆಷ್ಟು ಅಧಿಕಾರಿಗಳಿಲ್ಲ? ಪೊಲೀಸ್ ಇಲಾಖೆಯಲ್ಲಿದ್ದೇ ದರೋಡೆ ಮಾಡಿ ಜೈಲುಪಾಲಾದವರಿಲ್ಲವೇ?

ಈ ಎಲ್ಲಾ ಅಧಿಕಾರಿಗಳದ್ದು ಕೆಲವೇ ಅಥವಾ ನೂರು ಕೋಟಿಗಳ ಭ್ರಷ್ಟಾಚಾರ ತಾನೆ?

ಆದರೆ ಈತ ಈ ಎಲ್ಲಾ ಭ್ರಷ್ಟರಿಗಿಂತಲೂ ಬೇರೆಯದೇ ಹಾದಿ ಹಿಡಿದ ದುಷ್ಟ. ಅರ್ಹತೆಯಿಂದಷ್ಟೇ ಕೆಎಎಸ್ ಅಧಿಕಾರಿ ನಿಜ. ಆದರೆ ಯಾವ ಹುದ್ದೆಗೆ ನೇಮಕಗೊಂಡರೂ ಮೂರು ತಿಂಗಳ ಮೇಲಲ್ಲಿ ಉಳಿಯಲಾರ. ಹಾಗೊಮ್ಮೆ ಉಳಿದರೂ ಜನ ಅಟ್ಟಾಡಿಸಿ ಹೊಡೆಯುವ ತನಕ ಹಾವಳಿ ಬಿಡಲಾರ. ಯಾವುದೋ ತಾಲ್ಲೂಕೊಂದಕ್ಕೆ ತಹಸೀಲ್ದಾರ್ ಆಗಿ ಬಂದನೆಂದರೆ ಆತನ ಕಚೇರಿಯ ಯಾವೊಬ್ಬ ಹೆಂಗಸೂ ನೆಮ್ಮದಿಯಿಂದಿರಲು ಸಾಧ್ಯವೇ ಇಲ್ಲ, ತಾನು ಅಧಿಕಾರಿಯಾಗಿ ದ್ದಲ್ಲೆಡೆ ಒಂದಲ್ಲ ಒಂದು ಹೆಣ್ಣನ್ನು ಪೀಡಿಸದಿದ್ದರೆ ಈತನಿಗೆ ಉಂಡ ಅನ್ನ ಅರಗುವುದಿಲ್ಲ, ಕೇವಲ ಹೆಣ್ಣುಬಾಕನಷ್ಟೇ ಮಿಕ್ಕಂತೆ ಪರವಾಗಿಲ್ಲ ಎನ್ನುವುದಕ್ಕೂ ಈತ ಅವಕಾಶ ನೀಡುವುದಿಲ್ಲ.

ಕನಿಷ್ಠ ಸಾವಿರ ರೂಪಾಯಿ ಕಂಡರೂ ದೋಚದೆ ಬಿಡುವವನಲ್ಲ ಮತ್ತು ಲಂಚ ಕೊಟ್ಟರೆ ಸಾಕು ಯಾವುದಕ್ಕೂ ಹೇಸುವವನಲ್ಲ. ಈತನ ಇಪ್ಪತ್ತೂ ವರ್ಷಗಳ ಸರ್ಕಾರಿ ಅಧಿಕಾರಿಗಿರಿಯೆಂದರೆ ಅದು ಡಜನ್ನುಗಟ್ಟಲೇ ಮಹಿಳಾ ಉದ್ಯೋಗಿಗಳ ಬಾಳಿಗೆ ಬಿದ್ದ ಬೆಂಕಿಯಂತೆ ಈತನ ದುಷ್ಟತನಕ್ಕೆ ಬಲಿಯಾದವರ ಹಿಡಿಶಾಪದಂತೆ ಮತ್ತು ಈತ ಕಾಲಿಟ್ಟ ನಾನಾ ಸರ್ಕಾರದ ಇಲಾಖೆಗಳ ಕರ್ಮಾವಶೇಷದಂತೆ!

ಇಂಥಾ ಕೇಡಿ ಕೆಎಎಸ್ ಅಧಿಕಾರಿಯೇ ಈಗ ಮುಗ್ಧ ಬಾಲೆಯೊಬ್ಬಳನ್ನು ಬಲಿಪಡೆದು ಪರಾರಿಯಾದ ನಿರಂಜನ ಬಾಬು!

ಚೈತ್ರಾ ಎಂಬ ಮುಗ್ಧೆ

ಎಂ.ಎಸ್. ನಿರಂಜನಬಾಬು ಸದ್ಯ ಪೊಲೀಸರಿಂದ ತಲೆಮರೆಸಿಕೊಂಡು ಅದ್ಯಾವ ಹುತ್ತದಲ್ಲಿ ಅವಿತು ಕುಳಿತಿದ್ದಾನೋ? ಬಲಿಯಾದವಳು ಇಪ್ಪತ್ತೊಂದರ ಯುವತಿ ಚೈತ್ರಾ. ಕೆಎಎಸ್ ಅಧಿಕಾರಿಯ ಪತ್ನಿಯ ಆತ್ಮಹತ್ಯೆಯೆಂದೋ, ಬಿಡಿಎ ಅಧಿಕಾರಿಯ ಪತ್ನಿ ನೇಣಿಗೆ ಶರಣೆಂದೋ, ಪತ್ನಿ ಆತ್ಮಹತ್ಯೆ ಅಧಿಕಾರಿ ಪರಾರಿಯೆಂದೋ ಪತ್ರಿಕೆಗಳು ಸುದ್ದಿ ಪ್ರಕಟಿಸುತ್ತಲೇ ಇವೆ. ಕೆಲ ಪತ್ರಿಕೆಗಳು ನೇಣು ಹಾಕಿಕೊಂಡ ಯುವತಿ ಪರಾರಿಯಾದ ಅಧಿಕಾರಿಯ ಪ್ರೇಯಸಿಯೆಂದಿವೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಭೂಸ್ವಾಧೀನ ವಿಭಾಗದ ಅಸಿಸ್ಟೆಂಟ್ ಕಮೀಷನರ್ ಆಗಿದ್ದ ನಿರಂಜನಬಾಬುವಿನ ಪಾಪದ ಫಲವೆಂಬಂತೆ ಆತ್ಮಹತ್ಯೆ ಮಾಡಿಕೊಂಡ ಜಿ. ಚೈತ್ರಾ ಎಂಬ ಯುವತಿಯ ದುರಂತವೊಂದೇ ಕರ್ನಾಟಕ ಸರ್ಕಾರದ ಪರಮ ವಿಕಾರಿ, ಭ್ರಷ್ಟ, ಮಹಾದುಷ್ಟ ಅಧಿಕಾರಿಯೊಬ್ಬನ 'ಅಟ್ಟಹಾಸ' ಗಾಥೆಯೊಂದನ್ನು ತೆರೆದಿಡುತ್ತದೆ.

ಸದ್ಯ ಬಿಡಿಎನ ಭೂಸ್ವಾಧೀನಾಕಾರಿಯಾಗಿದ್ದ ನಿರಂಜನಬಾಬು ಅದ್ಯಾವ ಕಾರಣಕ್ಕೆ ಲೋಕಾಯುಕ್ತರ ಕಣ್ಣಿಗೆ ಬೀಳಲಿಲ್ಲವೊ ಗೊತ್ತಿಲ್ಲ, ಆದರೆ ಈತ ಕಾಲಿಟ್ಟ ಯಾವೊಂದು ಇಲಾಖೆಗೂ ಆಪತ್ತು ತಾರದೇ ಬಿಟ್ಟವನಲ್ಲ, ಯಾರದೋ ಸೊತ್ತನ್ನು ಇನ್ಯಾರದೋ ಹೆಸರಿಗೆ ಖಾತೆ ವರ್ಗಾಯಿಸಿ ದುಡ್ಡು ಹೊಡೆದ. ಕೆಎಎಸ್ ಅಧಿಕಾರಿಯಾದ ಮೂರೇ ತಿಂಗಳಲ್ಲಿ ಆಹಾರ ನಿರೀಕ್ಷಕಿಯೊಬ್ಬಳನ್ನು ಪೀಡಿಸಿ ಆಕೆಯ ಗಂಡನಿಂದ ಒದೆ ತಿಂದ. ಅಲ್ಲಿಂದ ಎತ್ತಂಗಡಿಯಾದರೆ ನಂತರ ಇನ್ನೆಲ್ಲೋ ಗುಮಾಸ್ತೆಯೊಬ್ಬಳ ಸೆರಗಿಗೆ ಕೈಯಿಟ್ಟ. ಅಲ್ಲಿಂದಲೂ ಒದ್ದೋಡಿಸಿದರೆ ಮುಂದೆ ವಕ್ಕರಿಸಿದ ಹುದ್ದೆಯಲ್ಲೂ ಬೇಕಾಬಿಟ್ಟಿ ಲೂಟಿಗೈದ. ಸದ್ಯ ಬಿಡಿಎನ ಅಸಿಸ್ಟೆಂಟ್ ಕಮೀಷನರ್ ಹುದ್ದೆಯಲ್ಲಿದ್ದಾಗಲೇ ಅಲ್ಲಿನ ಸಹಾಯಕಿಯೊಬ್ಬಳನ್ನು ಪಟಾಯಿಸದೇ ಹೋಗಿದ್ದರೆ ಚೈತ್ರಾ ಎಂಬ ಯುವತಿ ನೇಣಿಗೆ ಬೀಳುತ್ತಿರಲಿಲ್ಲವೇನೋ. ಅಷ್ಟಕ್ಕೂ ಆತ್ಮಹತ್ಯೆ ಮಾಡಿಕೊಂಡ ಇಪ್ಪತ್ತೊಂದರ ಯುವತಿ ಚೈತ್ರ ಈ ಹಿಂದೆ ನಿರಂಜನ್ ಬಾಬು ಉಗ್ರಾಣ ನಿಗಮದ ಎಂಡಿಯಾಗಿದ್ದಾಗ ಆತನ ಕೈಕೆಳಗೆ ಟೈಪಿಸ್ಟ್ ಆಗಿದ್ದಾಕೆ!

ಚೈತ್ರಳ ತಂದೆ ಜಯಕುಮಾರ್ ನಿರಂಜನ್‌ಬಾಬು ಮುಖ್ಯಾಧಿಕಾರಿಯಾಗಿದ್ದ ಉಗ್ರಾಣ ನಿಗಮದಲ್ಲಿ ಪೀವನ್ ಆಗಿದ್ದು ತನ್ನ ಕಣ್ಣಾರೆ ತನ್ನ ಮಗಳನ್ನು ಮುಖ್ಯಾಧಿಕಾರಿಯೇ ಮುಕ್ಕಿದ್ದನ್ನು ಕಂಡೂ ಪ್ರತಿಭಟಿಸಲಾಗದ ನೋವುಂಡ ನತದೃಷ್ಟ!

ಗುಬ್ಬಿಯಲ್ಲಿ ಅಟ್ಟಾಡಿಸಿ....!

ಇಷ್ಟೆಲ್ಲಾ ದುರಾಚಾರದ ಮೂರ್ತರೂಪಿ ಎಂ.ಎಸ್. ನಿರಂಜನ್‌ಬಾಬು ಮೂಲತಃ ತುಮಕೂರು ಜಿಲ್ಲೆ ತಿಪಟೂರಿನವನು. ಈತನ ತಂದೆ ಸಣ್ಣದೊಡ್ಡಯ್ಯ ತಾಯಿ ಶಾಂತಲಕ್ಷ್ಮಮ್ಮ. ಪ್ರಾರಂಭದಲ್ಲಿ ತಿಪಟೂರು ಆರೋಗ್ಯ ಇಲಾಖೆಯಲ್ಲಿ ಗುಮಾಸ್ತನಾಗಿದ್ದ ನಿರಂಜನ್‌ಬಾಬು 1999ರಲ್ಲಿ ಕೆಎಎಸ್ ಪರೀಕ್ಷೆ [illegible] ಪಾಸು ಆದ. ತರಬೇತಿ ಪ್ರೊಬೇಷನರಿ ಎಂದೆಲ್ಲ ಮುಗಿಸಿ ಕುಣಿಗಲ್‌ಗೆ ಆತ ತಹಸೀಲ್ದಾರ್ ಆಗುವ ಹೊತ್ತಿಗೆ ಇಸವಿ 2005. ಅಲ್ಲಿಯತನಕ ಈತನ ಕೀಚಕ ಬುದ್ಧಿ ಹೊರ ಜಗತ್ತಿಗೆ ಗೊತ್ತಾಗಿರಲಿಲ್ಲವೋ ಅಥವಾ ಈತನ ಗ್ರಹಚಾರ ನೆಟ್ಟಗಿತ್ತೋ ಗೊತ್ತಿಲ್ಲ, 2007ರಲ್ಲಿ ನಿರಂಜನ್ ಬಾಬು ಗುಬ್ಬಿಗೆ ತಹಸೀಲ್ದಾರ್ ಆಗಿ ಬಂದದ್ದೇ ಮೂರೇ ತಿಂಗಳಲ್ಲಿ ತನ್ನ ಹುಟ್ಟುಗುಣ ತೋರಿಸಿಬಿಟ್ಟ. ಆಗ ಗುಬ್ಬಿಯಲ್ಲಿ ಆಹಾರ ಇಲಾಖೆಯ ಇನ್ಸ್‌ಪೆಕ್ಟರ್ ಆಗಿದ್ದದ್ದು ಉಷಾ ಎಂಬ ವಿವಾಹಿತ ಮಹಿಳೆ.

ನಿರಂಜನ್ ಬಾಬು ಆಕೆಗೆ ಅದ್ಯಾವ ಪರಿ ಲೈಂಗಿಕ ಕಿರುಕುಳ ಶುರುವಿಟ್ಟನೆಂದರೆ ರೋಸತ್ತ ಆಕೆಯ ಪತಿ ತಹಸೀಲ್ದಾರ್ ಕಚೇರಿಗೇ ನುಗ್ಗಿ ಈತನನ್ನು ಅಟ್ಟಾಡಿಸಿ ಬಡಿದ. ಇದು ಊರೆಲ್ಲಾ ಪುಕಾರಾಗಿ ಇನ್ನೆಲ್ಲಿ ಜನ ಈತನನ್ನು ಅಟ್ಟಾಡಿಸುತ್ತಾರೋ ಎಂದು ಹುಷಾರಾದ ಜಿಲ್ಲಾಧಿಕಾರಿಗಳು ಮೂರೇ ತಿಂಗಳಿಗೆ ಈತನನ್ನು ಎತ್ತಂಗಡಿ ಮಾಡಿಬಿಟ್ಟರು. ಒಮ್ಮೆ ಒದೆ ತಿಂದಮೇಲೆ ಮತ್ತೆ ಆ ಊರಲ್ಲಿ ಮುಖ ಎತ್ತುವುದುಂಟೆ? ತದನಂತರ ಮದ್ದೂರಿಗೆ ತಹಸೀಲ್ದಾರ್ ಆಗಿ ವಕ್ಕರಿಸಿದ ನಿರಂಜನ್ ಬಾಬು ಅಲ್ಲೂ ತನ್ನ ಬುದ್ಧಿ ಬಿಡಲಿಲ್ಲ, ಮಂಡ್ಯದಿಂದ ಬರುತ್ತಿದ್ದ ಸಹಾಯಕಿಯೊಬ್ಬಳನ್ನು ಸಿಕ್ಕಾಪಟ್ಟೆ ಪೀಡಿಸಲಾರಂಭಿಸಿದ. ಅದು ಎಂಥಾ ವಿಕೋಪಕ್ಕೆ ಹೋಯಿತೆಂದರೆ ಅದೊಂದು ದಿನ ಆ ಸಹಾಯಕಿ ತನ್ನ ಕಚೇರಿಯಲ್ಲೇ ನಿದ್ರೆ ಮಾತ್ರೆಗಳನ್ನು ನುಂಗಿ ಆತ್ಮಹತ್ಯೆಗೆ ಯತ್ನಿಸಿದಳು. ತನಗೆ ನಿರಂಜನ್‌ಬಾಬು ಲೈಂಗಿಕ ಕಿರುಕುಳ ನೀಡುತ್ತಿದ್ದದ್ದೇ ಆತ್ಮಹತ್ಯೆಗೆ ಕಾರಣವೆಂದು ಆಕೆ ಡೆತ್‌ನೋಟ್ ಕೂಡ ಬರೆದಿಟ್ಟಿದ್ದಳು.

ಅವತ್ತೇನಾದರೂ ಹೆಚ್ಚೂಕಮ್ಮಿಯಾಗಿದ್ದರೆ ನಿರಂಜನ್ ಬಾಬು ಅವತ್ತೇ ಜೈಲು ಪಾಲಾಗುತ್ತಿದ್ದ. ಆವತ್ತು ಮದ್ದೂರಿನಿಂದ ರಾತ್ರೋರಾತ್ರಿ ಪರಾರಿಯಾದ ಬಾಬು 2008ರಲ್ಲಿ ಕುಣಿಗಲ್‌ನ ತಹಸೀಲ್ದಾರ್ ಆಗಿ ಪ್ರತ್ಯಕ್ಷನಾದ. ಇಲ್ಲೂ ಅದೇ ಚಾಳಿ ಜೊತೆಗೆ ಕಂಡೋರ ಸೊತ್ತಿಗೆ ವಕ್ಕರಿಸುವ ಬುದ್ಧಿ, ದಲಿತನೊಬ್ಬನ ಆಸ್ತಿಯನ್ನು ಕಾನೂನುಬಾಹಿರವಾಗಿ ಪುಢಾರಿಯೊಬ್ಬನಿಗೆ ಖಾತೆ ಮಾಡಿ. ರೆಡ್‌ಹ್ಯಾಂಡಾಗಿ ಸಿಕ್ಕಬಿದ್ದ. ಮೂರೇ ತಿಂಗಳಿಗೆ ಕುಣಿಗಲ್‌ನಿಂದ ಕೂಡ್ಲಿಗಿಗೆ ಎತ್ತಂಗಡಿಯಾಯ್ತು, 2008ರ ಏಪ್ರಿಲ್‌ನಲ್ಲಿ ಕೂಡ್ಲಿಗಿಗೆ ವಕ್ಕರಿಸಿದ್ದ ಈತನನ್ನು ಅದೇ ವರ್ಷದ ಅಕ್ಟೋಬರ್‌ನಲ್ಲಿ ಅಂದರೆ ಅದೇ ತಿಂಗಳಲ್ಲಿ ರಾಮನಗರದ ವಿಶೇಷ ಚುನಾವಣಾಧಿಕಾರಿ ಹುದ್ದೆಗೆ ಬದಲಾಯಿಸಲಾಯ್ತು, ಅಲ್ಲಿ ಖಮಾಯಿ ಇಲ್ಲವಲ್ಲ, ಅದ್ಯಾರೋ ಪುಢಾರಿಗೆ ರೊಕ್ಕ ತಿನ್ನಿಸಿದ್ದೇ ಮೂರೇ ತಿಂಗಳಲ್ಲಿ ಮಾಗಡಿಗೆ ತಹಸೀಲ್ದಾರ್ ಆಗಿಬಂದಿದ್ದ.


ಮಾಗಡಿಯ ಕ್ವಾರಿ ಲೂಟಿ

ಮಾಗಡಿ ಹೇಳಿಕೇಳಿ ಕಲ್ಲುಕ್ವಾರಿಗಳ ಜಾತ್ರೆಯಿದ್ದಂತೆ. ವೆಂಗಳಪ್ಪನ ಹಳ್ಳಿ, ತಾವರೆಕೆರೆ, ತಿಪ್ಪಗೊಂಡನಹಳ್ಳಿ, ಹೊನ್ನಗನಹಟ್ಟಿ ಮುಂತಾದ ಹಳ್ಳಿಗಳ ಕಲ್ಲು ಕ್ವಾರಿಗಳ ವಿರುದ್ಧ ಶುರುವಿನಲ್ಲೇ ವೀರಾವೇಶದ ದಾಳಿ, ಕ್ರಷರ್‌ಗಳ ಜಪ್ತಿ, ಕ್ವಾರಿ ಮಾಲಿಕರ ವಿರುದ್ಧ ಕೇಸುಗಳು ಇತ್ಯಾದಿ ಖಡಕ್ ದಾಳಿಗಳನ್ನು ಮಾಡಿ ಬೇಕಾಬಿಟ್ಟಿ ಪ್ರಚಾರ ಗಿಟ್ಟಿಸಿಬಿಟ್ಟ. ಆದರೆ ಎರಡೇ ತಿಂಗಳಲ್ಲಿ ನಿರಂಜನ್ ಬಾಬುನ ಅಸಲೀಯತ್ತು ಬಯಲಾಗಿತ್ತು. ತಾವರೆಕೆರೆ ಹೋಬಳಿಯ ತಿಪ್ಪಗೊಂಡನಹಳ್ಳಿ ಸುತ್ತಮುತ್ತಲ ಐವತ್ತಕ್ಕೂ ಅಧಿಕ ಕ್ವಾರಿಗಳಿಂದ ಕೋಟಿ ಮೊತ್ತದಲ್ಲೇ ಮಾಮೂಲಿ ಸಂದಾಯವಾಗಿತ್ತು, ಆ ದುಡ್ಡಲ್ಲೇ ತುಮಕೂರಿನ ಮಾರುತಿನಗರದಲ್ಲಿ 60x40 ವಿಸ್ತೀರ್ಣದ ಭರ್ಜರಿ ಸೈಟು ಖರೀದಿಸಿದ. ಅದೂ ತಾಯಿ ಶಾಂತಲಕ್ಷ್ಮಮ್ಮನ ಹೆಸರಲ್ಲಿ, ಮೂರೇ ತಿಂಗಳಲ್ಲಿ ಅದಂಥ ಭರ್ಜರಿ ಬಂಗಲೆಯನ್ನೆಬ್ಬಿಸಿ ದನೆಂದರೆ. ಅದಕ್ಕೆ ಮಾಗಡಿಯ ದೊಮ್ಮರಹಟ್ಟಿ ಬಂಡೆ ಖಂದ ಎಂಟು ಲೋಡು ಬೋಡ್ರರ್ಸ್ ಮತ್ತು ಹತ್ತು ಸಾವಿರ ಸೈಜುಗಲ್ಲನ್ನು ಕ್ವಾರಿ ಮಾಲಿಕನನ್ನು ಬೆದರಿಸಿ ಸಾಗಿಸಿದ್ದ.

ಬಂಗಲೆಯೇನೋ ಎದ್ದು ನಿಂತಿತು. ಆದರೆ ಬಂಗಲೆಯ ಒಡೆತನಕ್ಕೆ ಸಂಬಂಧಪಟ್ಟಂತೆ ವಿಚಿತ್ರ ಕೈಚಳಕವೊಂದನ್ನು ನಿರಂಜನ್‌ಬಾಬು ಮೆರೆದಿದ್ದ. 2009 ಜನವರಿ 12ರಂದು ತಾಯಿ ಶಾಂತಲಕ್ಷ್ಮಮ್ಮನ ಹೆಸರಲ್ಲಿ ಖರೀದಿಸಿದ್ದ ಮಾರುತಿನಗರದ ಸೊತ್ತನ್ನು ಇದಾಗಿ ಮೂರೇ ತಿಂಗಳಿಗೆ ಅಂದರೆ 2009ರ ಏಪ್ರಿಲ್ 3ರಂದು ವಾಪಸ್ಸು ದಾನಪತ್ರದ ಮೂಲಕ ತಾಯಿಯಿಂದ ಕಿತ್ತುಕೊಂಡು ತನ್ನ ಹೆಸರಿಗೆ ಮಾಡಿಕೊಂಡಿದ್ದ!

ಯಾವ ಆದಾಯವೂ ಇಲ್ಲದ ತಾಯಿಗೆ ಒಂದೂವರೆ ಕೋಟಿಯ ಬಂಗಲೆ ಬಂದಿದ್ದಾದರೂ ಎಲ್ಲಿಂದ?

ಅಂದರೆ ತಾಯಿಯ ಹೆಸರಲ್ಲಿ ತಾನೇ ಖರೀದಿಸಿ ವಾಪಸ್ಸು ದಾನಪತ್ರ ಬರೆದು ಕೊಟ್ಟಂತೆ ಮಾಡಿ ಮತ್ತೆ ತನ್ನ ಖಾಸಗಿ ಸೊತ್ತನ್ನಾಗಿ ಮಾಡಿಕೊಳ್ಳುವುದು ಈತನ ಹುನ್ನಾರವಾಗಿತ್ತು, ಮಾಗಡಿಯಲ್ಲಿ ಮಾಡಿದ ಲೂಟಿಯಲ್ಲೇ ತುಮಕೂರಿನ ಎಸ್‌ಐಟಿ ಬಡಾವಣೆಯಲ್ಲಿ ರಿಂಗ್‌ರಸ್ತೆಗೆ ಹೊಂದಿಕೊಂಡಂತೆ 60x40 ಅಳತೆಯ ಇನ್ನೆರಡು ಸೈಟುಗಳನ್ನು ಖರೀದಿಸಿದ. ತಲಾ ಸೈಟಿನ ಬೆಲೆಯೇ 40 ಲಕ್ಷ. ತಿಪಟೂರಿನಲ್ಲಿ ಹತ್ತೆಕರೆ ತೋಟವನ್ನೂ ಖರೀದಿಸಿದ್ದ. ತುಮಕೂರು, ಮಾಗಡಿಗಳಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ವಿವಿಧ ಶಾಖೆಗಳಲ್ಲಿ ಮೂರು ರಹಸ್ಯ ಅಕೌಂಟುಗಳನ್ನು ತೆರೆದಿದ್ದ. ತುಮಕೂರಿನ ಮಂಡಿಪೇಟೆ ಎಸ್‌ಬಿಎಂ ಶಾಖೆಯೊಂದರಲ್ಲೇ ನಲವತ್ತು ಲಕ್ಷದ ಠೇವಣಿಯಿಟ್ಟರೆ ಮಿಕ್ಕೆರಡು ಶಾಖೆಗಳಲ್ಲಿ ಕಮ್ಮಿಯೆಂದರೂ ತಲಾ ಹತ್ತು ಲಕ್ಷದ ಡಿಪಾಸಿಟ್ ಇಟ್ಟಿದ್ದ. ಇದು ಮಾಗಡಿಗೆ ವಕ್ಕರಿಸಿದ ಮೇಲೆ ನಿರಂಜನ್ ಬಾಬುನ ಕೇವಲ ಒಂದು ವರ್ಷ ಖಮಾಯಿಯಷ್ಟೆ.


ಅವಾಂತರಗಳು!
ಎಂ.ಎಸ್. ನಿರಂಜನ್ ಬಾಬು ಹಿನ್ನೆಲೆ
ಪಾದರಸ

2009ರಲ್ಲೇ ಮಾಗಡಿಯ ಪತ್ರಿಕೆಯೊಂದರಲ್ಲಿ ಬಾಬು ದುರಾಚಾರದ ವರದಿ, ಮಾಗಡಿಯ ಪಾದರಸ ಪತ್ರಿಕೆಯಲ್ಲಿ ಬಂದ ನಿರಂಜನ್‌ಬಾಬು ಡಿಂಗ್‌ಡಾಂಗ್

ಬಿಇಓ ಜೊತೆ ಡಿಂಗ್‌ಡಾಂಗ್!

ಆಗ ಮಾಗಡಿಗೆ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿದ್ದವಳು ಕೋಮಲಾಂಗಿ ಗೀತಾ. ಬಂದ ಒಂದೇ ತಿಂಗಳಲ್ಲಿ ಅದೇನು ಬೂದಿ ಎರಚಿದನೋ ಹೊತ್ತೂಗೊತ್ತಿಲ್ಲದೆ ಜೋಡಿಹಕ್ಕಿಗಳಂತೆ ಇಬ್ಬರೂ ಸುತ್ತಾಡಿದ್ದೇ ಸುತ್ತಾಡಿದ್ದು. ನಿರಂಜನ ಬಾಬುವಿನ ಕೀಚಕ ಚೇಷ್ಟೆ ಕೊನೆಕೊನೆಗೆ ಯಾವ ಮಟ್ಟ ಮುಟ್ಟಿತೆಂದರೆ ಮಾಗಡಿಯ ಕೆಲ ಲೋಕಲ್ ಪತ್ರಿಕೆಗಳು 'ಬಿಇಓ+ತಹಸೀಲ್ದಾರ್=ಡಿಂಗ್‌ಡಾಂಗ್?' ಎಂದು ಮುಖಪುಟದ ವಿಡಂಬನೆ ಪ್ರಕಟಿಸಿದ್ದವು. ಆ ಹೊತ್ತಿಗಾಗಲೇ ಬಾಬು ಮದುವೆಯಾಗಿ ಹನ್ನೆರಡು ವರ್ಷವಾಗಿತ್ತು ತುಮಕೂರಿನ ನಿವೃತ್ತ ಅಧಿಕಾರಿಯೊಬ್ಬರ ಮಗಳು ಸುಜಾತಾರನ್ನು 1996ರಲ್ಲೇ ಮದುವೆಯಾಗಿದ್ದ ಬಾಬು ಆಕೆಗೆ ಇಬ್ಬರು ಮಕ್ಕಳನ್ನು ದಯಪಾಲಿಸಿದ್ದ ಅದೇನು ವಿಕಟವೋ ತನ್ನ ಮೊದಲ ಮಗನಿಗೆ 'ಶೌರ್ಯ' ಎಂಬ ಮಾರ್ಮಿಕವಾದ ಹೆಸರಿಟ್ಟಿದ್ದ!

ಯಾವತ್ತು ಬಿಇಓ-ತಹಸೀಲ್ದಾರ್ ಚಕ್ಕಂದ ಮಾಗಡಿಯ ತುಂಬಾ ರಾಡಿಯೆದ್ದಿತೋ ಬಿಇಓ ಗಂಡ ರೊಚ್ಚಿಗೆದ್ದವನೇ ತನ್ನ ಪತ್ನಿಯನ್ನು ಮಾಗಡಿಯಿಂದ ಎತ್ತಂಗಡಿ ಮಾಡಿಸಿಕೊಂಡರೆ ಇತ್ತ ನಿರಂಜನ್‌ಬಾಬುಗಿದು ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಯಿತು. ತಹಸೀಲ್ದಾರ್ ಕಚೇರಿಯ ಕ್ಲರ್ಕ್ ರಾಜೇಶ್ವರಿಯನ್ನು ಪಟಾಯಿಸಿಕೊಂಡ. ಒಂದೆಡೆ ಭ್ರಷ್ಟಗಾಥೆ ಮತ್ತೊಂದೆಡೆ ಕಾಮಯಾತ್ರೆ ಇನ್ನೇನು ಮಾಗಡಿಯೇ ರೊಚ್ಚಿಗೆದ್ದು ಅಟ್ಟಾಡಿಸುತ್ತದೆ ಎನ್ನುವಷ್ಟು ಹಾವಳಿಯಿಟ್ಟ ನಿರಂಜನ್ ಬಾಬು 2010ರ ಹೊತ್ತಿಗೆ ಮಂಡ್ಯಕ್ಕೆ ಉಪವಿಭಾಗಾಧಿಕಾರಿಯಾಗಿ ಜಾಗ ಖಾಲಿ ಮಾಡಿದ್ದ.

ಮಂಡ್ಯದಲ್ಲೂ ಇದೇ ಚಾಳಿ. ಅಲ್ಲಿಯೂ ಕಚೇರಿ ಸಹಾಯಕಿಯೊಬ್ಬಳ ಮೇಲೆ ಕಣ್ಣಿಟ್ಟು ಯಾಪಾಟಿ ಕಿರುಕುಳ ಕೊಟ್ಟನೆಂದರೆ ರೋಸತ್ತ ಆಕೆ ಕೆಲಸಕ್ಕೆ ರಾಜೀನಾಮೆಯಿತ್ತು ಮನೆ ಸೇರಿಕೊಂಡಳು!

ಇದು ಕೀಚಕ ನಿರಂಜನ್ ಬಾಬುವಿನ ಪಟುವಾ[illegible] ಕೆಲ ಸ್ಯಾಂಪಲ್ಲುಗಳಷ್ಟೆ. ಇಂಥವನು ಉಗ್ರಾಣ ನಿ[illegible] ವಕ್ಕರಿಸಿದ್ದು 2013ರಲ್ಲಿ, ಆ ಹೊತ್ತಿಗೆ ಬಾಬು[illegible] ಏನಿಲ್ಲವೆಂದರೂ ವಯಸ್ಸು ನಲವತ್ತೆರಡು. ಉ[illegible] ನಿಗಮದಲ್ಲಿ ಗ್ರೂಪ್ 'ಡಿ'ಯಾಗಿದ್ದ ಜಯಕುಮಾರ[illegible] ಮಗಳು ಚೈತ್ರಾಳನ್ನು ಅಲ್ಲೇ ಟೈಪಿಸ್ಟ್ ಕೆಲಸಕ್ಕೆ ಸೇ[illegible] ಅದೇನು ಕೇಡುಗಾಲವೋ ಮಾರಿಕಣ್ಣು [illegible] ಮೇಲೆಂಬಂತೆ ಉಗ್ರಾಣ ನಿಗಮದ ಎಂಡಿ ಛೇಂ[illegible] ಚೈತ್ರಾ ಪದೇ ಪದೆ ಹೋಗಿ ಬರಲಾರಂಭಿಸಿದಳು. [illegible] ಮದುವೆಯಾಗಿದ್ದರೂ ಡೈವೋರ್ಸ್ ಆಗಿದೆಯೆಂದೂ [illegible] ಏಕಾಂಗಿಯೆಂದೂ ಮದುವೆಗೆ ಹೆಣ್ಣು ನೋಡುತ್ತಿದ್ದೇನೆ[illegible] ಬಾಬು ನಂಬಿಸಿದ್ದ, ತನಗೆ ಅಷ್ಟೆಲ್ಲಾ ಆಸ್ತಿಯಿದೆ [illegible] ವ್ಯವಹಾರವಿದೆಯೆಂದೂ ಕತೆ ಹೊಡೆದ. ತಂದೆ[illegible] ಬೇಕಂತಲೇ ಯಾವ್ಯಾವುದೋ ನೆಪವೊಡ್ಡಿ ಹೊರಕ್ಕೆ[illegible] ಮಗಳನ್ನು ಟೈಪಿಂಗ್‌ಗೆಂದು ಛೇಂಬರಿಗೆ ಕರೆಸುತ್ತಿ[illegible]

ಬಲಿಯಾದಳು ಬಾಲೆ

ಕೊನೆಗದು ಯಾವ ಮಟ್ಟಕ್ಕೆ ಬಂತೆಂದರೆ ಉ[illegible] ನಿಗಮದಿಂದ ಇತ್ತೀಚೆಗೆ ಬಾಬು ಬಿಡಿಎಗೆ ಭೂಸ್ವಾಧೀ[illegible] ಕಾರಿಯಾಗಿ ಬಂದನಂತರವೂ ಚೈತ್ರಾ ಕೆಲಸಕ್ಕೆ ಚಕ್ಕರ್ ಹಾ[illegible] ತನಕ ಬಂತು. ಇಲ್ಲಿಗೆ ಎಂಟು ತಿಂಗಳ ಹಿಂದೆ ಚೈತ್ರಾ[illegible] ತಂದೆತಾಯಂದಿರನ್ನು ನಿಲ್ಲಿಸಿಕೊಂಡು ತಾನು [illegible] ನಿರಂಜನ್‌ಬಾಬು ತಿರುಪತಿಯಲ್ಲಿ ಮದುವೆಯಾಗಿದ್ದೇವೆ[illegible] ತಾನೀಗ ಅವರ ಪತ್ನಿಯೆಂದೂ ಹೇಳಿ[illegible] ಕುಸಿದುಬೀಳುವುದೊಂದೇ ಬಾಕಿ. ಬಾಬು ಮತ್ತು [illegible] ನಡುವೆ ಕಮ್ಮಿಯೆಂದರೂ ಇಪ್ಪತ್ತು ವರ್ಷಗಳ ಅಂತರ[illegible] ಏನೇ ಬುದ್ಧಿ ಹೇಳಿದರೂ ತಲೆಗೆ ಹತ್ತಬೇ[illegible] ತಂದೆತಾಯಂದಿರನ್ನು ಧಿಕ್ಕರಿಸಿಯೇ ಚೈತ್ರಾ ಬಾಬು[illegible] ಜಯನಗರದ ಮನೆ ಸೇರಿಕೊಂಡಳು. ಮೊದಮೊದಲು [illegible] ಸ್ವಂತ ಮನೆಯೆಂದಿದ್ದ ಬಾಬು ಕಾಲಕ್ರಮೇಣ ಫ್ಲೇಟು ಬ[illegible] ಅದು ಭೋಗ್ಯದ್ದು ಎಂದ. ಬರುಬರುತ್ತ ಮನೆಗೆ ಬರುವು[illegible] ಕಮ್ಮಿ ಮಾಡಿಬಿಟ್ಟ. ಕೇಳಿದ್ದಕ್ಕೆ ಸ್ಪೆಷಲ್ ಡ್ಯೂಟಿ ಎನ್[illegible] ಸರಿ, ಮದುವೆಯಾದರೂ ಅಧಿಕೃತವಾಗಿ ಮಾಡಿಕೋ [illegible] ತನ್ನ ಪತ್ನಿಯ ಡಿವೋರ್ಸ್ ಇನ್ನೂ ಕೋರ್ಟ್‌ನಲ್ಲೇ ಇದೆಯೆ[illegible] ಹೊಸರಾಗ ತೆಗೆದ. ಆದರೆ ಚೈತ್ರಾ ಫ್ಯಾಮಿಲಿ ಕೋ[illegible] ಹೋಗಿ ವಿಚಾರಿಸಿದರೆ ಅಲ್ಲಿ ಈತನ ಹೆಸರಲ್ಲಿ ವಿಚ್ಛೇ[illegible] ಕೇಸೇ ಇರಲಿಲ್ಲ!

ಇದೇನು ಮೋಸ ಎಂದು ಕೇಳಿದರೆ ಇಲ್ಲಲ್ಲ ತುಮಕೂ[illegible] ಎಂದ. ತುಮಕೂರಿನಲ್ಲೂ ವಿಚಾರಿಸಿದರೆ ಅದನ್ನು ತಿಪಟೂ[illegible] ವರ್ಗಾಯಿಸಿದ್ದಾರೆಂದ. ಆ ಹೊತ್ತಿಗೆ ಚೈತ್ರಾಳಿಗೆ ಅರ್ಥವಾಗಿ[illegible] ನಿರಂಜನ್ ಬಾಬು ತನ್ನ ಮೊದಲ ಪತ್ನಿಯ ಜೊತೆ ಧಿ[illegible] ಸಂಸಾರ ಸಾಗಿಸಿದ್ದ!

ಹಾಳಾಗಲಿ ತನಗಾದರೂ ನ್ಯಾಯ ಕಲ್ಪಿಸುತ್ತಾನಾ [illegible] ಕುಮಾರ ಸ್ವಾಮಿ ಬಡಾವಣೆಯಲ್ಲಿದ್ದ ತನ್ನ ಗೆಳೆಯನ[illegible] ಪತ್ನಿಯ ಜೊತೆಗೇ ಹೊಸ ಡ್ಯುಯೆಟ್ ಶುರುವಿಟ್ಟಿದ್ದ ಅದ[illegible] ತಾತ್ಕಾಲಿಕ ಅಫೇರ್ ಎಂದುಕೊಂಡು ಸುಮ್ಮನಾಗೋಣ[illegible] ಲೆಕ್ಕ ಹಾಕಿದ ಚೈತ್ರಳಿಗೆ ನಿರಂಜನ್ ಬಾಬುವಿಗೆ ಒ[illegible] ಇಬ್ಬರಲ್ಲ ಹತ್ತಾರು ಮಂದಿ ಪ್ರೇಯಸಿಯರಿದ್ದದ್ದನ್ನು ಮೊಬೈ[illegible] ಕಾಲ್ ಲಿಸ್ಟುಗಳೇ ಪುರಾವೆಯೊದಗಿಸಿದ್ದವು. ಇತ್ತ ಮನೆ[illegible] ಬಿಟ್ಟಾಯ್ತು, ಮದುವೆಯಾಗಿದೆಯೆಂದು ತಂದೆತಾಯಂದಿ[illegible] ನಂಬಿಸಿದ್ದಾಯ್ತು. ನಂಬಿದ ತಪ್ಪಿಗೆ ಬದುಕೇ ನರಕವಾ[illegible] ಇನ್ನು ತನ್ನ ಬಾಳಿನ ಬಾಗಿಲೆಲ್ಲ ಮುಚ್ಚಿದಂತೆಯೇ..... ಜೀ[illegible] ಇದ್ದ ಕೆಲಸವೂ ಹೋಯ್ತು.

ಇಂಥ ಹತಾಶೆಯಲ್ಲೇ ಬಾಬುವಿನ ಜಯನಗರದ [illegible] ತೊರೆದ ಚೈತ್ರಾ ಒಂದಷ್ಟು ದಿನ ನಾಗರಬಾವಿಯ ತಂ[illegible] ಮನೆಯಲ್ಲಿದ್ದು ಜುಲೈ 30 ರಂದು ಸಂಜಯ್‌ನಗರದ [illegible] ಸೇರಿಕೊಂಡಿದ್ದಾರೆ. ಇಷ್ಟಾದಾಗಲೂ ಬಾಬು ಆಕೆ[illegible] ಸಂತೈಸಲೆತ್ನಿಸಿಲ್ಲ, ಒಮ್ಮೆಯೂ ಕರೆ ಮಾಡಲಿಲ್ಲ, ಬ[illegible] ಇದ್ದ ದುಡ್ಡೆಲ್ಲ ಖಾಲಿಯಾಗಿರಬೇಕು. ಆಗಸ್ಟ್ 10 ರ ಬುಧ[illegible] ತನ್ನ ಪೇಯಿಂಗ್ ಗೆಸ್ಟ್ ನಿವಾಸದ ಕೊಠಡಿ ಸೇರಿಕೊಂ[illegible] ಮತ್ತೆ ಗೋಚರಿಸಿದ್ದು ನೇಣಿಗೆ ಬಿದ್ದ ಹೆಣವಾಗಿಯೇ!


ಅಧಿಕೃತವಾಗಿ ಚೈತ್ರ ನಿರಂಜನ್ ಬಾಬುನ ದುರಾ[illegible] ಮೊದಲ ಬಲಿಯಾದರೂ ಹೇಳಿಕೊಳ್ಳಲಾಗದೆ, ಸಾಯ[illegible] ಮನಸ್ಸು ಬಾರದೆ ನರಳಿದ ಹೆಣ್ಣುಮಕ್ಕಳು ಇನ್ನೆಷ್ಟೋ. ತಂ[illegible] ಕೊಲೆಯ ಅನುಕಂಪದ ಮೇಲೆ ಕೆಲಸ ಗಿಟ್ಟಿಸಿದ. ಕಾಲಿ[illegible] ಜನರನ್ನು ಸುಲಿದ, ಸರ್ಕಾರಕ್ಕೂ ಕನ್ನ ಕೊರೆದ. ಕಣ್ಣಿಗೆ [illegible] ಹೆಣ್ಣುಗಳನ್ನೆಲ್ಲ ಮುಕ್ಕಿ ಹಾಕಿದ. ಆತನ ಕೀಚಕ ಅಟ್ಟ[illegible] ಇಲ್ಲಿಗೆ ಎಂಟು ವರ್ಷದ ಹಿಂದೆಯೇ ಪತ್ರಿಕೆಗಳು ಪ್ರೋ[illegible] ಸಿಂತ ಮಾಡಿದ ವರದಿಯನ್ನಿಲ್ಲಿ ದಾಖಲೆಯಾಗಿ ನೀಡುತ್ತಿ[illegible] ಮಹಿಳಾ ಆಯೋಗದ ಅಧ್ಯಕ್ಷೆ ಮಂಜುಳಾ ಮಾನಸ[illegible] ಸವಾಲಾಗಿ ಕಾಣಿಸದಿರಬಹುದು. ಪೊಲೀಸ್ ಇಲಾಖೆ[illegible] ಈತನ ತಹಸೀಲ್ದಾರ್‌ಗಿರಿಗೆ ಬಲಿಯಾದ ಕರ್ನಾಟಕದ ಬೇರೆ[illegible] ಊರುಗಳ ಹೆಣ್ಣುಮಕ್ಕಳ ಕಣ್ಣೀರಿಗೆ ಕುರುಡಾಗಬಹುದು. [illegible] ಬಲಿಯಾದ ಚೈತ್ರಳ ಆತ್ಮವಿದೆಯಲ್ಲ–

ಶಾಪ ತಟ್ಟದಿರುತ್ತಾ? ಆಕೆಗೆ ನ್ಯಾಯ ನೀಡಲು ಕೆ[illegible] ಒಂದು ಕೇಸಷ್ಟೇ ಸಾಕೆ? ರಕ್ಕಸ ನಿರಂಜನಬಾಬುವಿಗೆ [illegible] ಹೆಣ್ಣು ಜೀವಿಗಳು ಬಲಿಯಾಗಬೇಕೆ?

(ಮಹಿಳೆಯರನ್ನು ರಕ್ಷಿಸಲು ಈ ವರದಿ[illegible] ನೀಡಿರುವ ಎಲ್ಲಾ ಮಹಿಳೆಯರ ಹೆಸರುಗ[illegible] ಬದಲಾಯಿಸಲಾ[illegible]

■ ರಾ.ಸೋಮನಾ[illegible]

ಹೊಳಲ್ಕೆರೆ: ಯಡ್ಡಿ ಶಿಷ್ಯ ಚಂದ್ರಪ್ಪನಿಗೆ ಸ್ತ್ರೀ ಕಂಟಕ


ಚಂದ್ರಪ್ಪ

ಯಡ್ಡಿ 'ಮಹಾತ್ಮೆ'ಗೆ ರಾಜ್ಯ ಬಿಜೆಪಿಯೊಳಗೇ ಗುನ್ನ ಬೀಳುತ್ತಿದ್ದರೆ ಇತ್ತ ಹೊಳಲ್ಕೆರೆಯಲ್ಲಿ ಯಡಿಯೂರಪ್ಪನ ಶಿಷ್ಯ ಚಂದ್ರಪ್ಪನಿಗೂ ಅದೇ ಗತಿ ದಿನದಿಂದ ದಿನಕ್ಕೆ ಖಾತ್ರಿಯಾಗುತ್ತಾ ಬರುತ್ತಿದೆ. ಹಾಲಿ ಶಾಸಕ ಕಂ ಸಮಾಜ ಕಲ್ಯಾಣ ಸಚಿವ ಎಚ್.ಆಂಜನೇಯ ಅಭಿವೃದ್ಧಿಗಳನ್ನು ಓವರ್‌ಟೇಕ್ ಮಾಡಿ ಮತದಾರರನ್ನು ತಲುಪುವ ಹೆಣಗಾಟ ಒಂದುಕಡೆಯಾದರೆ ಮತ್ತೊಂದೆಡೆ ಬಿಜೆಪಿಯೊಳಗೇ ಚಂದ್ರಪ್ಪನ ವಿರುದ್ಧ ನಡೆಯುತ್ತಿರುವ ಮಸಲತ್ತುಗಳು ಆತನನ್ನು ಸುಸ್ತಾಗಿಸುತ್ತಿವೆ. ಹೊಳಲ್ಕೆರೆ ಹೇಳಿಕೇಳಿ ಸಿರಿಗೆರೆ ಮಠದ ಹುಕುಂ ಫರ್ಮಾನಿಗೆ ಬಿಗಿದುಕೊಂಡ ಕ್ಷೇತ್ರ. ಸ್ವಯಂ ಘೋಷಿತ ಜಗದ್ಗುರುಗಳು ಯಡಿಯೂರಪ್ಪನ ಬಗ್ಗೆ ಸಿಕ್ಕಾಪಟ್ಟೆ ಸಾಫ್ಟ್ ಕಾರ್ನರ್ ಹೊಂದಿರೋದು ರಹಸ್ಯವೇನೂ ಅಲ್ಲ. ಇಂಥಾ ಹೊಳಲ್ಕೆರೆಯಲ್ಲಿ ಯಡಿಯೂರಪ್ಪ, ಸಿರಿಗೆರೆ ಮಠ ಈ ಎರಡೂ ಫ್ಯಾಕ್ಟರ್‌ಗಳ ಹೊರತಾಗಿಯೂ ಚಂದ್ರಪ್ಪ ಅತಂತ್ರನಾಗುವ ಭವಿಷ್ಯವೇ ದಟ್ಟವಾಗಿದೆ. ಅದಕ್ಕೆಲ್ಲ ಮುಖ್ಯಕಾರಣ ಚಂದ್ರಪ್ಪನ ದೌಲತ್ತು, ದುರಹಂಕಾರಗಳು ಅನ್ನೋದೇ ಹೈಲೈಟು!

ಅಸಲಿಗೆ 2013ರ ಚುನಾವಣೆಯಲ್ಲಿ ಚಂದ್ರಪ್ಪ ಸೋತಾಗ ಕೆಜೆಪಿಯಿಂದ ಸ್ಪರ್ಧಿಸಿದ್ದ. ಬಿಜೆಪಿ-ಕೆಜೆಪಿ ನಡುವೆ ಲಿಂಗಾಯತ ಮತಗಳು ಹಂಚಿಹೋಗಿ ಚಂದ್ರಪ್ಪ ಸೋತ ಅಂತಲೇ ಆ ಸೋಲನ್ನು ಬಿಂಬಿಸಲಾಗಿತ್ತು. ನಿಜ ಸಂಗತಿಯೇನೆಂದರೆ, ಒಂದೊಮ್ಮೆ ಬಿಜೆಪಿಯೊಳಗೆ ಎಲ್ಲವೂ



ಮಾಜಿ ಶಾಸಕ ಶಿವಪುರ ರಮೇಶ್ ಬಿಜೆಪಿ ಕಾರ್ಯಕರ್ತರ ನಡುವೆ

ಚೆಟ್ಟಗಿದ್ದು ಆ ಚುನಾವಣೆಯಲ್ಲಿ ಚಂದ್ರಪ್ಪ ಕಮಲ ಪಾಳೆಯದಿಂದ ಯಡಿಯೂರಪ್ಪನ ಬಲದೊಂದಿಗೆ ಸ್ಪರ್ಧಿಸಿದ್ದರೂ ಅವನಿಗೆ ಸೋಲು ತಪ್ಪುತ್ತಿರಲಿಲ್ಲ. ತನ್ನ ಐದು ವರ್ಷದ ಅಧಿಕಾರಾವಧಿಯಲ್ಲಿ ಆ ಪರಿ ದರ್ಪದಿಂದ ಆತ ಮೆರೆದಾಡಿದ್ದ. ಓಟು ಹಾಕಿದ ಮತದಾರನ ಮಾತು ಹತ್ತಟ್ಟಿರಲಿ ಅವನ ಗೆಲುವಿಗೆ ಹೆಗಲು ಕೊಟ್ಟಿದ್ದ ಬಿಜೆಪಿಯ ಲೋಕಲ್ ಲೀಡರ್‌ಗಳನ್ನೇ ಚಂದ್ರಪ್ಪ ಕ್ಯಾರೆ ಅಂದಿರಲಿಲ್ಲ. ಇಷ್ಟು ಅವನ ಅವಧಿಯಲ್ಲಿ ಸ್ವತಃ ಬಿಜೆಪಿಯೇ ಅಧಿಕಾರದಲ್ಲಿದ್ದರು ಹೊಳಲ್ಕೆರೆ ಹೇಳಿಕೊಳ್ಳುವಂತಹ ಯಾವ ಅಭಿವೃದ್ಧಿಯನ್ನೂ ಕಾಣಲಿಲ್ಲ. ತಾನು ಎಂಎಲ್‌ಎ ಆಗಿದ್ದಾಗ ಕ್ಷೇತ್ರಕ್ಕೊಂದು 620 ಕೋಟಿ ಅನುದಾನ ಹೊತ್ತುತಂದೆನೆಂದು ಚಂದ್ರಪ್ಪ ಬೊಗಳೆ ಬಿಡುತ್ತಾನಾದರೂ ಅದಕ್ಕೆ ತಕ್ಕಂತೆ ಯಾವ ಅಭಿವೃದ್ಧಿಯ ಕುರುಹುಗಳೂ ಕಾಣಿಸುವುದಿಲ್ಲ. ಚಂದ್ರಪ್ಪನ ಎಂಎಲ್‌ಎ ಅವಧಿಯಲ್ಲಿ ವಿವಿಧ ಯೋಜನೆಯಡಿ 16 ಸಾವಿರ ಮನೆಗಳು ಮಂಜೂರಾಗಿ ಬಂದಿದ್ದರೂ ಹಂಚಿದ್ದು ಮಾತ್ರ 2,500 ಮಾತ್ರ. ಗ್ರಾಮಗಳಿಗೆ ಸಿಸಿ ರಸ್ತೆ ಹಾಕಿಸಿದ್ದೇ ನನ್ನ ಸಾಧನೆ ಅಂತ ಹೇಳಿಕೊಳ್ಳುತ್ತಾನಾದರೂ ಅವು ಸರ್ಕಾರದ ಸಹಜಕ್ರಿಯಾ ಯೋಜನೆಯ ಮತ್ತು ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯ ಕಾಮಗಾರಿಗಳು.

ಇಂಥಾ ಚಂದ್ರಪ್ಪ 2013ರಲ್ಲಿ ಸೋಲದೆ ಬೇರೆ ವಿಧಿಯೇ ಇರಲಿಲ್ಲ. ತನ್ನ ಅಸಮರ್ಥತೆಯನ್ನು ಮುಚ್ಚಿಕೊಳ್ಳಲು ಆತ ಬಿಜೆಪಿ-ಕೆಜೆಪಿಯ ನೆಪ ಬಳಸಿಕೊಳ್ಳುತ್ತಿದ್ದಾನಷ್ಟೆ. ದುರಂತವೆಂದರೆ ತನ್ನ ಹಳೆಯ ಸೋಲನ್ನು ತನ್ನಿಂದ ಕಳಚಿ ಬಿಸಾಕಲು ಯಾವ ಬಿಜೆಪಿ-ಕೆಜೆಪಿ ಅನ್ನೋ ಅಸ್ತ್ರ ಬಳಸುತ್ತಿದ್ದಾನೊ. ಅದೇ ಅಸ್ತ್ರ ಇವತ್ತು ಚಂದ್ರಪ್ಪನಿಗೆ ಮುಂಬರುವ ಚುನಾವಣೆಯಲ್ಲಿ ಟಿಕೆಟನ್ನೇ ತಪ್ಪಿಸುವ, ಟಿಕೆಟ್ ಸಿಕ್ಕರೂ ಶತಾಯಗತಾಯ ಸೋಲಿಸುವ ಪಣತೊಟ್ಟು ಪತರುಗುಡುತ್ತಿದೆ.

ವಲಸಿಗ ಚಂದ್ರಪ್ಪ

ರಾಜ್ಯ ಬಿಜೆಪಿಯಲ್ಲಿ ಇದೀಗ ಮೂಲ ಮತ್ತು ವಲಸಿಗ ಬಿಜೆಪಿಗಳು ಎಂಬ ದೊಡ್ಡ ಕದನವೇ ಶುರುವಾಗಿದೆ. ಕರ್ನಾಟಕದಲ್ಲಿ ಕೇಸರಿ ಪಾರ್ಟಿಯ ಅಸ್ತಿತ್ವದ ಬುಡದತ್ತ ಕಣ್ಣಾಡಿಸಿದರೆ ಅಲ್ಲಿ ಯಡಿಯೂರಪ್ಪನೆಂಬ ಭಸ್ಮಾಸುರನ ಹೆಜ್ಜೆ ಗುರುತುಗಳೇ ಢಾಳಾಗಿ ಕಾಣಸಿಗುತ್ತವೆ. ಅಂಥಾ ಯಡಿಯೂರಪ್ಪ ತನ್ನನ್ನು ಸಿಎಂ ಗಾದಿಯಿಂದ ಇಳಿಸಿದರು ಅನ್ನೋ ಕಾರಣಕ್ಕೆ ಕೆಜೆಪಿ ಕಟ್ಟಿಕೊಂಡು ಹೊರನಡೆದು, ಸೋತು ಸಣ್ಣಗಾಗಿ ವಾಪಾಸ್ ಬಚ್ಚಲುಮನೆ ಸೇರಿಕೊಂಡದ್ದು ಈಗ ಇತಿಹಾಸ. ಡಿಕ್ಟೇಟರ್ ಶೈಲಿಯ ಯಡಿಯೂರಪ್ಪನ ಪ್ರಭಾವಳಿಗೆ ಬೆದರಿದ ಈಶ್ವರಪ್ಪ, ಸಿ.ಟಿ.ರವಿಯಂಥಾ ಸೆಕೆಂಡ್‌ಲೈನ್ ಬಿಜೆಪಿಗರು ಈಗ ಯಡಿಯೂರಪ್ಪನನ್ನೇ ವಲಸಿಗ ಅಂತ ಬಿಂಬಿಸಿ ಸಿಕ್ಕಾಪಟ್ಟೆ ಸರ್ಕಸ್ ಮಾಡುತ್ತಿದ್ದಾರೆ. ಹೊಳಲ್ಕೆರೆ ಮಟ್ಟಿಗೆ ಚಂದ್ರಪ್ಪನನ್ನು ಕಂಡರಾಗದ ಬಿಜೆಪಿಗಳು ಸಹ ಆತನ ವಿರುದ್ಧ ಅದೇ ಮಂತ್ರ ಜಪಿಸುತ್ತಾ ಟಿಕೆಟ್ ತಪ್ಪಿಸುವ ಹುನ್ನಾರ ನಡೆಸುತ್ತಿದ್ದಾರೆ.


ಹನುಮಕ್ಕ



ಚಂದ್ರಪ್ಪ, ಯಡಿಯೂರಪ್ಪನ ಪರಮಾಪ್ತ ಅನುಯಾಯಿ. ಹಾಗಾಗಿಯೇ ಕಳೆದ ಸಾರಿ ಕೆಜೆಪಿ ಸೇರಿದ್ದ. ಅದೇ ಪರಮಾಪ್ತತೆ ಅವನನ್ನು ಮತ್ತೆ ಬಿಜೆಪಿಗೂ ಎಳೆದು ತಂದಿದೆ. ಚಂದ್ರಪ್ಪನ ದುರಹಂಕಾರ ಕಂಡಿದ್ದ ಸ್ಥಳೀಯ ಬಿಜೆಪಿಗರು "ಚಂದ್ರಪ್ಪ ಮೂಲ ಬಿಜೆಪಿಗನಲ್ಲ, ಕೆಜೆಪಿಯಿಂದ ವಲಸೆ ಬಂದವ. ಹಾಗಾಗಿ 2018ರ ಎಲೆಕ್ಷನ್‌ನಲ್ಲಿ ಅವನಿಗೆ ಟಿಕೆಟು ನೀಡಬಾರದು" ಅನ್ನೋ ಅಭಿಯಾನ ಶುರು ಮಾಡಿರೋದು ಚಂದ್ರಪ್ಪನ ನಿದ್ದೆಗೆಡಿಸಿದೆ. ಅಷ್ಟಕ್ಕೂ ಇಂತಹದ್ದೊಂದು ಅಭಿಯಾನದ ನೇತೃತ್ವ ವಹಿಸಿರೋದು ಮಾಜಿ ಶಾಸಕ ಶಿವಪುರದ ರಮೇಶ ಮತ್ತವನ ಮಗ ಜಿ.ಪಂ. ಮಾಜಿ ಅಧ್ಯಕ್ಷ ಶಿವು ಹಾಗೂ ಹೊಳಲ್ಕೆರೆಯವನೇ ಆದ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಸುರೇಶ್!

ಅಖಾಡಕ್ಕೆ ಬೋವಿ ಹನುಮಕ್ಕ


ಚಂದ್ರಪ್ಪನನ್ನು ವಿರೋಧಿಸುತ್ತಿರುವವರಿಗೆ ಆತ ಕೆಜೆಪಿ ವಲಸಿಗ ಎನ್ನುವ ಪಾಯಿಂಟ್ ಜೊತೆಗೆ ಆತ ಮೂಲತಃ ಹೊಳಲ್ಕೆರೆ ಕ್ಷೇತ್ರದವನೇ ಅಲ್ಲ, ಮೀಸಲಾತಿ ಅಧಿಕಾರಕ್ಕಾಗಿ ಬೇರೆಲ್ಲಿಂದಲೋ ಹಾರಿಬಂದವನು ಎನ್ನುವ ಅಂಶವೂ ಸಾಥ್ ನೀಡುತ್ತಿದೆ. ಹಾಗೆ ನೋಡಿದರೆ ಹಾಲಿ ಶಾಸಕ, ಮಂತ್ರಿ ಎಚ್.ಆಂಜನೇಯ ಕೂಡಾ ಹೊಳಲ್ಕೆರೆ ಕ್ಷೇತ್ರದವರಲ್ಲ. ದಾವಣಗೆರೆಯಿಂದ ಇಲ್ಲಿಗೆ ಬಂದು ಎಲೆಕ್ಷನ್‌ಗೆ ನಿಂತವರು. ಹಾಗಾಗಿ ಸ್ಥಳೀಯ ಪರಿಶಿಷ್ಟ ಜಾತಿಯ ಲೀಡರ್ ಒಬ್ಬರನ್ನು ಮುಂಚೂಣಿಯಲ್ಲಿ ಇಟ್ಟುಕೊಂಡರೆ ಸ್ಥಳೀಯ ಅಭ್ಯರ್ಥಿ ಅನ್ನೋ ಪ್ರಚಾರದ ಮೂಲಕವೇ ಆಂಜನೇಯರನ್ನು ಸುಲಭವಾಗಿ ಸೋಲಿಸಬಹುದು ಅಂತ ರಾಜ್ಯ ಬಿಜೆಪಿಗರ ತಲೆತುಂಬಿ ಚಂದ್ರಪ್ಪನಿಗೆ ಟಿಕೆಟ್ ತಪ್ಪಿಸುವ ಹಾದಿಯನ್ನು ಸುಲಭ ಮಾಡಿಕೊಳ್ಳಬೇಕೆನ್ನುವುದು ಇವರ ಇರಾದೆ. ಅದಕ್ಕೋಸ್ಕರ ಅವರು ಆಯ್ಕೆ ಮಾಡಿಕೊಂಡಿರೋದು ತಾಳ್ಯದ ಬೋವಿ ಜನಾಂಗದ ಹನುಮಕ್ಕನನ್ನು.

ತಾಳ್ಯದ ಹನುಮಕ್ಕ ಬಿಜೆಪಿ ಮಹಿಳಾ ಲೀಡರಾಗಿ ಗುರುತಿಸಿಕೊಂಡವರು. ತಾಳ್ಯ ಜಿ.ಪಂ. ಕ್ಷೇತ್ರದಿಂದ ಕಳೆದ ಬಾರಿ ಬಿಜೆಪಿಯಿಂದ ಗೆದ್ದು ಬಂದಿದ್ದರು. ದಿನೇದಿನೇ ಈಯಮ್ಮ ಪ್ರಚಾರಕ್ಕೆ ಬರುತ್ತಿರೋದು ಮತ್ತು ಆಕೆ ಹೊಳಲ್ಕೆರೆಗೆ ಮೀಸಲಾಗಿರುವ ಎಸ್‌ಸಿ ಸಮುದಾಯಕ್ಕೇ ಸೇರಿರೋದನ್ನೆಲ್ಲ ಲೆಕ್ಕಹಾಕಿದ ಚಂದ್ರಪ್ಪ 2016ರ ಜಿ.ಪಂ. ಚುನಾವಣೆಯಲ್ಲಿ ಆಕೆಗೆ ತಾಳ್ಯ ಕ್ಷೇತ್ರದಿಂದ ಬಿಜೆಪಿ ಟಿಕೇಟು ತಪ್ಪಿಸಿದ್ದ. ಮುಂದೆ ಆಕೆ ಎಂಎಲ್‌ಎ ಟಿಕೆಟ್‌ಗೆ ತನಗೆ ಪ್ರತಿಸ್ಪರ್ಧಿ ಯಾಗಬಾರದು ಅನ್ನೋ ಇರಾದೆ ಚಂದ್ರಪ್ಪನಿಗಿತ್ತಾದರೂ ಆ ಮೂಲಕ ಹನುಮಕ್ಕ ತನ್ನ ಪ್ರತಿಸ್ಪರ್ಧಿ ಎಂಬುದನ್ನು ಪರೋಕ್ಷವಾಗಿ ಸಾಬೀತುಪಡಿಸಿದ್ದ. ಚಂದ್ರಪ್ಪನ ಕುತಂತ್ರದಿಂದ ಟಿಕೆಟು ಕಳೆದುಕೊಂಡರೂ ಪಕ್ಷೇತರಳಾಗಿ ಸ್ಪರ್ಧಿಸಿದ್ದ ಹನುಮಕ್ಕ ಗೆಲ್ಲಲಿಲ್ಲ. ಈಗ ಅದೇ ಹನುಮಕ್ಕ, ಚಂದ್ರಪ್ಪ ವಿರೋಧಿ ಬಣದ ದಾಳವಾಗಿದ್ದಾಳೆ.

ಹನುಮಕ್ಕನ ಗಂಡ ಆಂಜನೇಯ ಎಂಬ ಆಸಾಮಿ ಹಿಂದೆ ಇದೇ ಹೊಳಲ್ಕೆರೆ ತಾಲ್ಲೂಕ್ ಪಂಚಾಯತಿಯ ಎಕ್ಸಿಕ್ಯೂಟಿವ್ ಆಫೀಸರ್ ಆಗಿದ್ದ. ಆಗಲೇ ಬಹಳಷ್ಟು ಆರ್ಥಿಕವಾಗಿ ದುಂಡಗಾಗಿದ್ದ. ಸದ್ಯ ರಾಯಚೂರಿನಲ್ಲಿರುವ ಆತ ಹೆಂಡತಿಗೋಸ್ಕರ ಭರ್ಜರಿ 'ಸಂಪನ್ಮೂಲ ಕ್ರೋಢೀಕರಣ'ದಲ್ಲಿ ತೊಡಗಿಸಿಕೊಂಡಿದ್ದಾನೆ. ಜಿಲ್ಲಾ ಪಂಚಾಯ್ತಿ ಎಲೆಕ್ಷನ್‌ನಲ್ಲಿ ಹನುಮಕ್ಕ ಪಕ್ಷೇತರಳಾಗಿ ಸ್ಪರ್ಧಿಸಿದ್ದೂ ಗಂಡನ ಈ ಹಡಬೆ ದುಡಿಮೆಯ ರೊಕ್ಕದ ಬಲದಿಂದಲೇ. ಜಾತಿ ಮತ್ತು ರೊಕ್ಕ ಎರಡರ ಜೊತೆಗೆ ಸ್ಥಳೀಯಳು ಎಂಬ ಫಾರ್ಮುಲದ ಮೇಲೆ ಕಣ್ಣಿಟ್ಟಿರುವ ಚಂದ್ರಪ್ಪ ವಿರೋಧಿ ಬಣ ಒಂದು ಕೈ ನೋಡೇ ಬಿಡಲು ರಣೋತ್ಸಾಹದಲ್ಲಿ ಮುನ್ನುಗ್ಗುತ್ತಿದೆ. ಆಕೆಯೇ ಮುಂದಿನ ಬಿಜೆಪಿ ಅಭ್ಯರ್ಥಿ ಅಂತ ಬಿಂಬಿಸುವ ಯತ್ನಗಳೂ ನಡೆಯುತ್ತಿವೆ.

ಮಂತ್ರಿ ಆಂಜನೇಯರಿಗೆ ಇದು ಎಚ್ಚರಿಕೆಯ ಗಂಟೆ

ಮೊದಲೇ ಹೇಳಿದಂತೆ ಹೊಳಲ್ಕೆರೆಯಲ್ಲಿ ಲಿಂಗಾಯತ ಮತಗಳು ಮತ್ತು ಆ ಮತಗಳು ಶಿರಸಾವಹಿಸಿ ಪಾಲಿಸುವ ಸಿರಿಗೆರೆ ಮಠದ ಫರ್ಮಾನೇ ನಿರ್ಣಾಯಕ. ಹಾಗಾಗಿ ಇಲ್ಲಿ ಕೇಸರಿ ಪಾರ್ಟಿ ಬಿಜೆಪಿ ಚೆನ್ನಾಗಿಯೇ ಚಿಗುರಿಕೊಳ್ಳುತ್ತಾ ಬಂದಿದೆ. 1989ರಲ್ಲಿ ಹೊಳಲ್ಕೆರೆ ಪುರಸಭೆಗೆ ಸ್ಪರ್ಧಿಸಿದ್ದ ಶ್ರೀನಿವಾಸ ಬೇಕರಿಯ ಅಯ್ಯಂಗಾರಿ ಹಾಗೂ



ಆಂಜನೇಯ

ಗುರುನಾಥಗುಪ್ತರೇ ಈ ಬಿಸಿಲ ನಾಡಲ್ಲಿ ಮೊದಲ ಬಾರಿಗೆ ಬಿಜೆಪಿ ಬಾವುಟ ಹಾರಿಸಿದ್ದು. ಅದಾದ ಮೇಲೆ ಇಲ್ಲಿ ಬಿಜೆಪಿ ಸಣ್ಣಗೆ ಬೇರು ಬಿಡುತ್ತಲೇ ಬಂದಿದೆ. ಅಡ್ವಾಣಿಯ ಕೋಮುರಥ ಯಾತ್ರೆಯ ನಂತರ ಬಿಜೆಪಿ ಮತ್ತಷ್ಟು ಬಲಿತುಕೊಂಡಿತು. 1992ರ ಪಾರ್ಲಿಮೆಂಟ್ ಚುನಾವಣೆಯಲ್ಲಿ ಚಿತ್ರದುರ್ಗದಿಂದ ಬಿಜೆಪಿ ಹುರಿಯಾಳಾಗಿ ಎಸ್.ಎ. ರವೀಂದ್ರನಾಥ ಸ್ಪರ್ಧಿಸಿ ಸೋತರೂ ಹೊಳಲ್ಕೆರೆ ವಿಧಾನಸಭಾ ಕ್ಷೇತ್ರದಿಂದ 33 ಸಾವಿರ ಮತ ಕೇಸರಿ ಪಾಳಯಕ್ಕೆ ಹರಿದುಹೋಗುವ ಮೂಲಕ ಬಿಜೆಪಿಯ ತಳ ಇಲ್ಲಿ ಗಟ್ಟಿಯಾಗಿರುವುದು ಸಾಬೀತಾಗಿತ್ತು. ಯಡಿಯೂರಪ್ಪ ಬಿಜೆಪಿಯಲ್ಲಿ ರಾರಾಜಿಸಲು ಶುರು ಮಾಡಿದ ನಂತರ ಸಿರಿಗೆರೆ ಮಠದ ಒಲವು, ಲಿಂಗಾಯತ ಮತಗಳು ಬಿಜೆಪಿಗೆ ಸಿಕ್ಕಿದ್ದವು. ಆ ಬಲದಿಂದಲೇ 2008ರಲ್ಲಿ ಚಂದ್ರಪ್ಪ ಗೆದ್ದು ಎಂಎಲ್‌ಎ ಆದದ್ದು.

ಹೊಳಲ್ಕೆರೆ ಎಸ್‌ಸಿ ಮೀಸಲು ಕ್ಷೇತ್ರವಾಗಿರುವುದರಿಂದ ಇಲ್ಲಿ ಆಯ್ಕೆಯಾದ ಬಹುತೇಕ ಶಾಸಕರು ಇನ್ನೆಲ್ಲಿಂದಲೋ ವಲಸೆ ಬಂದವರೇ ಆಗಿದ್ದಾರೆ. ಚಂದ್ರಪ್ಪನಿಗೆ ಟಿಕೆಟು ತಪ್ಪಿಸಲು ಹೊರಟಿರುವ ಬಿಜೆಪಿಯ ಬಿ ಟೀಮು ಸ್ಥಳೀಯ ಮತ್ತು ಹೊರಗಿನ ಅಭ್ಯರ್ಥಿ ಎನ್ನುವ ಹೊಸ ಅಸ್ತ್ರವನ್ನು ಬಳಸುತ್ತಿರೋದರಿಂದ ಅದು ಮಂತ್ರಿ ಆಂಜನೇಯರಿಗೂ ಕೊಂಚ ಏಟು ಕೊಡುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಒಂದೊಮ್ಮೆ ಬಿಜೆಪಿಯಿಂದ ಚಂದ್ರಪ್ಪನಿಗೇ ಟಿಕೆಟು ಸಿಕ್ಕರೆ ಆಂಜನೇಯ ಗೆಲ್ಲಲು ಹೆಚ್ಚೇನು ಶ್ರಮ ಪಡಬೇಕಿಲ್ಲ. ಯಾಕೆಂದರೆ ಚಂದ್ರಪ್ಪನಿಗೆ ಟಿಕೆಟು ತಪ್ಪಿಸಲು ಹೆಣಗಾಡುತ್ತಿರುವ ಬಿಜೆಪಿಗರೇ ಆತನ ಸೋಲಿಗೆ ಟೊಂಕಕಟ್ಟಿ ದುಡಿಯಲಿದ್ದಾರೆ. ಅಪ್ಪಿತಪ್ಪಿ ತಾಳ್ಯದ ಹನುಮಕ್ಕನಿಗೇನಾದರು ಟಿಕೆಟು ಸಿಕ್ಕರೆ ಆಂಜನೇಯ ಹೊರಗಿನ ಅಭ್ಯರ್ಥಿ ಅಂತ ಬಿಂಬಿಸಿ ಬಿಜೆಪಿಗಳು ಆಟ ಕಟ್ಟುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಅಲ್ಲದೇ ಕಳೆದ ಎಪಿಎಂಸಿ ಎಲೆಕ್ಷನ್‌ನಲ್ಲಿ ಹಾಗೂ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಚುನಾವಣೆಗಳಲ್ಲಿ ಆಂಜನೇಯ ಅಭಿವೃದ್ಧಿ ಕೆಲಸಗಳ ಹೊರತಾಗಿಯೂ ಹೊಳಲ್ಕೆರೆಯಲ್ಲಿ ಕಾಂಗ್ರೆಸ್‌ಗೆ ಹಿನ್ನಡೆಯಾಗಿದ್ದು ಕೂಡಾ ಆಂಜನೇಯ ಎರಡೆರಡು ಬಾರಿ ಯೋಚನೆ ಮಾಡುವಂತಹ ಸಂಗತಿಗಳು. ಎಲೆಕ್ಷನ್‌ಗೆ ಇನ್ನು ಒಂದೂವರೆ ವರ್ಷ ಕಾಲಾವಕಾಶವಿದೆ. ಅಷ್ಟರೊಳಗೆ ಆಂಜನೇಯ ತಮ್ಮ ತವರು ಕ್ಷೇತ್ರದತ್ತ ಮತ್ತಷ್ಟು ಆಸಕ್ತಿ ವಹಿಸುವುದು ಮುಖ್ಯ.

■ ಟಿ.ಎನ್. ಷಣ್ಮುಖ

ಕೊಡಗು: ಸಿಂಹನ ಖೆಡ



ಪಂಜಿನ ಮೆರವಣಿಗೆಗಳನ್ನು ಯಾವ ಉದ್ದೇಶದಿಂದ ಸಂಘ ಪರಿವಾರದವರು ಮಾಡುತ್ತಿದ್ದಾರೋ, ಅದರಲ್ಲಿ ಅವರು ಯಶಸ್ಸನ್ನು ಕಾಣುತ್ತಿದ್ದಾರೆ. ಶಾಂತಿಯುತವಾಗಿರುವ ಪ್ರದೇಶಗಳನ್ನು ಅಶಾಂತಿಯ ಗೂಡಾಗಿಸುತ್ತಿದ್ದಾರೆ. ಇದು ಕೊಡಗಿನ ದುರಂತವೇ ಸರಿ.

ಕೊಡಗು ಜಿಲ್ಲೆಯಲ್ಲಿ ಭಾರತೀಯ ಜನತಾ ಪಕ್ಷ ಹೊಸ ಅಧ್ಯಕ್ಷರ ನೇಮಕಾತಿಯೊಂದಿಗೆ ಛಿದ್ರವಾಗಿದೆ. ಬಹಿರಂಗವಾಗಿ ಕಚ್ಚಾಡುವುದು, ಪರಸ್ಪರರ ವಿರುದ್ಧ ಹೇಳಿಕೆಗಳನ್ನು ನೀಡುವುದು ನಡೆಯುತ್ತಿದೆ. ಶಾಸಕರುಗಳಾದ ಕೆ.ಜಿ. ಬೋಪಯ್ಯ ಹಾಗೂ ಅಪ್ಪಚ್ಚು ರಂಜನ್‌ರವರು ಪಕ್ಷದ ಮೇಲೆ ಇಲ್ಲಿಯವರೆಗೆ ಇದ್ದಂತಹ ನಿಯಂತ್ರಣವನ್ನು ಕಳೆದುಕೊಂಡಿದ್ದಾರೆ. "ಇಬ್ಬರೂ ಶಾಸಕರು ನಮಗೆ ಬೇಕಿಲ್ಲ, ನಾವು ಹೊಸಬರನ್ನು ಆಯ್ಕೆಮಾಡಿಕೊಳ್ಳುತ್ತೇವೆ" ಎನ್ನುವಷ್ಟರಮಟ್ಟಿಗೆ ಬಿಜೆಪಿ ಗುಂಪುಗಾರಿಕೆಯಿಂದ ತಲ್ಲಣಗೊಂಡಿದೆ. ಈ ಬೆಂಕಿಗೆ ನಿರಂತರವಾಗಿ ಎಣ್ಣೆ ಹಾಕಿ ಪೋಷಿಸುವ ಕೆಲಸವನ್ನು ಸಂಸದ ಪ್ರತಾಪ ಸಿಂಹ ಮಾಡುತ್ತಿದ್ದಾರೆ. ಮುಂದಿನ ವಿಧಾನಸಭಾ ಚುನಾವಣೆಯ ವೇಳೆಗೆ ಕೊಡಗು ಹಾಗೂ ಮೈಸೂರು ಜಿಲ್ಲೆಗಳಲ್ಲಿ ತನ್ನ ನಿಯಂತ್ರಣದಲ್ಲಿಯೇ ಪಕ್ಷ ಇರಬೇಕು ಎನ್ನುವ ತಂತ್ರಗಾರಿಕೆಗೆ ಪ್ರತಾಪ ಸಿಂಹ ಕೈಹಾಕಿದ್ದಾರೆ.

ಈಗ ಜಿಲ್ಲಾ ಪಂಚಾಯತಿಯ ಮಾಜಿ ಅಧ್ಯಕ್ಷ ಶಾಂತೆಯಂಡ ರವಿಕುಶಾಲಪ್ಪನೇ ವಿರಾಜಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಅಭ್ಯರ್ಥಿ ಎಂದು ಬಿಂಬಿಸುವ ಯತ್ನವನ್ನು ವ್ಯವಸ್ಥಿತವಾಗಿ ಪ್ರತಾಪ ಸಿಂಹ ಮಾಡುತ್ತಿದ್ದಾರೆ. ರವಿಕುಶಾಲಪ್ಪ ಸಂಘ ಪರಿವಾರದ ಜೊತೆಯಲ್ಲಿ ಉತ್ತಮ ಸಂಬಂಧಗಳನ್ನು ಇಟ್ಟುಕೊಂಡಿದ್ದು, ಇತ್ತೀಚಿನ ದಿನಗಳಲ್ಲಿ ಕೆ.ಜಿ. ಬೋಪಯ್ಯ ಸಂಘ ಪರಿವಾರದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಇಲ್ಲದೇ ಇರುವುದು ಇದಕ್ಕೆ ಪುಷ್ಠಿ ನೀಡಿದೆ. ವಿರಾಜಪೇಟೆ ಕ್ಷೇತ್ರಕ್ಕೆ ಕೊಡವ ಸಮುದಾಯದ ವ್ಯಕ್ತಿಯನ್ನು ತರುವ ಮತ್ತು ಸೋಮವಾರಪೇಟೆಗೆ ಗೌಡ ಸಮುದಾಯದ ವ್ಯಕ್ತಿಯನ್ನು ತರುವ ಕಾರ್ಯಕ್ಕೆ ಪ್ರತಾಪ ಸಿಂಹ ಸಜ್ಜಾಗಿದ್ದಾರೆ. ಒಂದುವೇಳೆ ರವಿ ಕುಶಾಲಪ್ಪರವರಿಗೆ ಸಿಗದಿದ್ದರೆ, ಮಾಚಿಮಾಡ ಎಂ. ರವೀಂದ್ರರವರನ್ನು ಬಿಂಬಿಸುವ ಉದ್ದೇಶವೂ ಅವರಲ್ಲಿ ಇದೆ. ಆದರೆ ಮಡಿಕೇರಿ ಕ್ಷೇತ್ರಕ್ಕೆ ಅಪ್ಪಚ್ಚು ರಂಜನ್‌ರವರ ಬದಲಿಗೆ ಯಾರು ಎಂಬುದು ಇನ್ನೂ ಚರ್ಚೆಗೆ ಬಂದಿಲ್ಲ, ಯುವಮೋರ್ಚಾದ ಮಾಜಿ ಅಧ್ಯಕ್ಷ ಬಿ.ಬಿ. ಭಾರತೀಶ್‌ರವರು ಅಪ್ಪಚ್ಚು ರಂಜನ್ ವಿರುದ್ಧ ಬಂಡಾಯದ ಬಾವುಟವನ್ನು ಪಕ್ಷದೊಳಗೆ ಹಾರಿಸಿದ್ದಾರೆ. ಭಾರತೀಶ್ ಗೌಡ ಜನಾಂಗಕ್ಕೆ ಸೇರಿದ್ದು ಹೊಸ ಮುಖವಾಗಿರುವ ಕಾರಣ ಪ್ರತಾಪ ಸಿಂಹ ಅವರನ್ನು ಬೆಂಬಲಿಸುವ ಸಾಧ್ಯತೆಗಳು ಇವೆ.

ಈ ರಾಜಕೀಯ ಹುಚ್ಚಾಟದಿಂದ ಜಿಲ್ಲಾ ಬಿಜೆಪಿ ಅಧ್ಯಕ್ಷ ಮನುಮುತ್ತಪ್ಪರವರಿಗೆ ಪಕ್ಷದ ಪದಾಧಿಕಾರಿಗಳನ್ನು ಆಯ್ಕೆಮಾಡುವುದೇ ತಲೆನೋವಿನ ಕೆಲಸವಾಗಿದೆ. ಮನುಮುತ್ತಪ್ಪ ಬೋಪಯ್ಯನವರ ಬೆಂಬಲಿಗ. ಜೊತೆಗೆ ಕೊಡಗು ಜಿಲ್ಲಾ ಪಂಚಾಯತಿಯ ಅಧ್ಯಕ್ಷರಾಗಿರುವ ಹರೀಶ್‌ರವರು ಸುಮಾರು 15 ವರ್ಷಗಳಿಂದ ಬೋಪಯ್ಯನವರ ಆಪ್ತ ಸಹಾಯಕರಾಗಿದ್ದವರು. ಹಾಗಾಗಿ ಬೋಪಯ್ಯನವರದೇ ಮೇಲುಗೈ ಪಕ್ಷದಲ್ಲಿ ಇದೆ ಎಂದು ಭಾವಿಸಲಾಗುತ್ತಿದೆ. ಇದನ್ನು ತಗ್ಗಿಸುವ ಯತ್ನವನ್ನು ಸಂಘ ಪರಿವಾರ ವ್ಯವಸ್ಥಿತವಾಗಿ ಮಾಡುತ್ತಿದೆ. ಇದಕ್ಕೆ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿರುವವರು ಪ್ರತಾಪ ಸಿಂಹ.


ದೇವಟ್‌ಪರಂಬು ವಿವಾದದಲ್ಲಿ ಬೋಪಯ್ಯನವರನ್ನು ವ್ಯವಸ್ಥಿತವಾಗಿ ಬಲಿ ಹಾಕುವ ಯತ್ನ ನಡೆದಿದೆ. ಅವರನ್ನು ಕೊಡವರು ಹಾಗೂ ಗೌಡ ಜನಾಂಗದವರು ದ್ವೇಷಿಸುವ ಮಟ್ಟಕ್ಕೆ ಅಪಪ್ರಚಾರಗಳು ನಡೆದಿವೆ. ಇದರಿಂದ ಹತಾಶರಾಗಿರುವ ಬೋಪಯ್ಯ ಮುಂದಿನ ಚುನಾವಣೆಯಲ್ಲಿ ತಾನು ಸ್ಪರ್ಧಿಸುವುದಿಲ್ಲ ಎಂದು ಬಹಿರಂಗವಾಗಿ ಹೇಳುತ್ತಿದ್ದಾರೆ.


ಮತ್ತೊಂದು ಕಡೆ ಅಪ್ಪಚ್ಚು ರಂಜನ್‌ರವರು ತಾನು ಮುಂದಿನ ಚುನಾವಣೆಯ ವೇಳೆಗೆ ಅಮೆರಿಕಕ್ಕೆ ತೆರಳಿ ತನ್ನ ಮಕ್ಕಳೊಂದಿಗೆ ನಿವೃತ್ತ ಜೀವನವನ್ನು ಸಾಗಿಸುತ್ತೇನೆ ಎಂಬ ಮಾತನ್ನು ಆಡುತ್ತಿದ್ದಾರೆ. ಈ ಇಬ್ಬರು ಶಾಸಕರ ಬುಡವನ್ನು ಪ್ರತಾಪ್ ಸಿಂಗ ಅಲುಗಾಡಿಸುತ್ತಿರುವುದರಿಂದ ಅವರಿಬ್ಬರೂ ಬಹಿರಂಗವಾಗಿ ಹೀಗೆ ಪ್ರತಿಕ್ರಿಯಿಸುತ್ತಿರುವುದು ಸ್ಪಷ್ಟವಾಗಿದೆ. ಆದರೆ ಬೋಪಯ್ಯನವರ ಜೊತೆಯಲ್ಲಿ ಗುರುತಿಸಿಕೊಂಡಂತಹ ಇತರ ಜನಾಂಗದ ವ್ಯಕ್ತಿಗಳು 'ನೀವು ಈ ಕುತಂತ್ರಕ್ಕೆ ಬಲಿಯಾಗಬಾರದು. ಕೊಡವ ಜನಾಂಗದವರನ್ನೇ ಬಿಂಬಿಸಿ, ಪಕ್ಷದೊಳಗೆ ಗೊಂದಲ ಉಂಟುಮಾಡುವ ಯತ್ನವನ್ನು ಮಾಡಿದಲ್ಲಿ ಇತರ ಜನಾಂಗದವರು ಪರ್ಯಾಯ ಶಕ್ತಿಯಾಗಿ ಶಕ್ತಿ ಪ್ರದರ್ಶನಕ್ಕೆ ಮುಂದಾಗಬೇಕು' ಎನ್ನುವಂತಹ ಚಟುವಟಿಕೆಗಳು ಕಂಡುಬರುತ್ತಿದೆ. ಇಂತಹ ಬಂಡಾಯ ಅವರಿಂದ ಸಾಧ್ಯವೇ ಎಂಬುದನ್ನು ಕಾಲವೇ ಹೇಳಬೇಕು.


ಪಕ್ಷದಲ್ಲಿ ಆಗುತ್ತಿರುವ ಈ ಬೆಳವಣಿಗೆಯಿಂದ ಪಕ್ಷದ ಕಾರ್ಯಕರ್ತರು ಭ್ರಮನಿರಸನರಾಗುತ್ತಿದ್ದಾರೆ ಎಂಬುದು ಸಂಘ ಪರಿವಾರದವರಿಗೆ ಚೆನ್ನಾಗಿ ತಿಳಿದಿದೆ. ಮುಂದಿನ ಚುನಾವಣೆಯ ವೇಳೆಗೆ ಪಕ್ಷ ಇದೇ ಹಾದಿಯಲ್ಲಿ ಹೋದರೆ ತಮ್ಮ ಎರಡೂ ಸ್ಥಾನಗಳನ್ನು ಕಳೆದುಕೊಳ್ಳಬೇಕಾಗಬಹುದು ಎನ್ನುವ ವಿಚಾರ ಸಂಘ ಪರಿವಾರಕ್ಕೆ ಮನದಟ್ಟಾಗಿದೆ. ಹಾಗಾಗಿ ಕೊಡಗಿನಲ್ಲಿ ಬಿಜೆಪಿಯ ಅಡಿಪಾಯಕ್ಕೆ ಅಪಾಯ ಆಗದಂತೆ ನೋಡಿಕೊಳ್ಳಲು ಹಲವಾರು ಷಡ್ಯಂತ್ರಗಳನ್ನು ಅವರು ಮಾಡುತ್ತಿದ್ದು ಈ ಪೈಕಿ ದೇವಟ್‌ಪರಂಬು ವಿವಾದವು ಒಂದಾಗಿದೆ.


ಆದರೆ ಈ ವಿವಾದದಲ್ಲಿ ಸಂಘ ಪರಿವಾರಕ್ಕೆ ಲಾಭಕ್ಕಿಂತಲೂ ಹೆಚ್ಚು ನಷ್ಟವೇ ಆಗಿದೆ. ಕಲ್ಲಡ್ಕ ಪ್ರಭಾಕರ ಭಟ್ಟ ಕೊಡಗಿಗೆ ಆಗಮಿಸಿ, ವಿಷಬೀಜವನ್ನು ಬಿತ್ತಿ ಜಿಲ್ಲೆಯಲ್ಲಿ ಕ್ಷೋಭೆ ಮೂಡಿಸಬೇಕೆಂದು ಯತ್ನಿಸಿ, ಅದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಆದರೂ ಕೆಳಗೆ ಬಿದ್ದರೂ ಜಟ್ಟಿಯ ಮೀಸೆ ಮಣ್ಣಾಗಿಲ್ಲ ಎನ್ನುವಂತೆ ವಾಟ್ಸಪ್‌ಗಳಲ್ಲಿ ಅವರ ಹಾಸ್ಯಾಸ್ಪದ ಸಂದೇಶಗಳು ಹರಿದಾಡುತ್ತಿವೆ.


ಅವರ ಒಂದು ವಾಟ್ಸಪ್ ಸಂದೇಶ ಈ ರೀತಿ ಇದೆ: 'ದೇವಟ್‌ಪರಂಬು ಅಸಮಾಧಾನ ಪರಿಹಾರಕ್ಕೆ ಆರ್.ಎಸ್.ಎಸ್. ನಡೆಸಿದ ಮೊದಲ ಸಭೆ ಯಶಸ್ಸು. ಕೊಡಗಿನ ದೇವಟ್‌ಪರಂಬು ವಿವಾದವನ್ನು ಶಾಂತಿಯುತವಾಗಿ ಬಗೆಹರಿಸುವ ನಿಟ್ಟನಲ್ಲಿ ಆರ್.ಎಸ್.ಎಸ್.ನ ಹಿರಿಯರು ನಿನ್ನೆ ಕರೆದ ಮೊದಲ ಸಭೆ ಅಭೂತ ಪೂರ್ವ ಯಶಸ್ಸು ಕಾಣುವುದರೊಂದಿಗೆ ಹಿಂದೂ ಸಮಾಜವನ್ನು ಜಾತಿ ಹೆಸರಿನಲ್ಲಿ ಅಸಂಘಟಿತಗೊಳಿಸಿ, ದ್ವೇಷದ ಕಿಚ್ಚನ್ನು ಹೊತ್ತಿಸಲೆತ್ನಿಸಿದವರಿಗೆ ತೀವ್ರ ಮುಖಭಂಗವಾಗಿದೆ. ನಿನ್ನೆ ಮೂರ್ನಾಡಿನ ದೇವಾಲಯದ ಸಭಾಂಗಣದಲ್ಲಿ ಕೊಡವ-ಗೌಡ ಜನಾಂಗದ ಪ್ರಮುಖರ ಸಮ್ಮುಖದಲ್ಲಿ ಆರ್.ಎಸ್.ಎಸ್.ನ ಪ್ರಮುಖರಾದ ಡಾ. ಕಲ್ಲಡ್ಕ ಪ್ರಭಾಕರ ಭಟ್-ಸಂಘಚಾಲಕ್ ಚೆಕ್ಕೇರ ಮನು, ಹಿಂದೂ ಜಾಗರಣಾ ವೇದಿಕೆಯ ಜಗದೀಶ ಕಾರಂತರ ನೇತೃತ್ವದಲ್ಲಿ ನಡೆದ ಸಭೆ, ಹಿಂದೂ ಸಮಾಜವನ್ನು ಜಾತಿ ಹೆಸರಿನಲ್ಲಿ ವಿಭಜಿಸಲೆತ್ನಿಸುವ ಶಕ್ತಿಗಳ ವಿರುದ್ಧ ಸಂಘಟಿತ ಹೋರಾಟಕ್ಕೆ ನಿರ್ಣಯಿಸಿದ್ದು, ಸಂಘ ಪರಿವಾರದ ನೇತೃತ್ವದಲ್ಲಿಯೇ ಸಮಸ್ಯೆ ಬಗೆಹರಿಸಲು ಒಕ್ಕೊರಲಿನ ತೀರ್ಮಾನ ಕೈಗೊಂಡಿತ್ತು, ಕೆಲವು ಪ್ರಮುಖರು ತುರ್ತು ಕೆಲಸ ನಿಮಿತ್ತ ಈ ಸಭೆಗೆ ಬರಲು ಅಸಾಧ್ಯ ಎಂದು ತಿಳಿಸಿರುವ ಕಾರಣ, ಅವರೆಲ್ಲರನ್ನೂ ಭೇಟಿ ಮಾಡಿ ಮುಂದಿನ ಸಭೆ ನಡೆಸಲು ಸರ್ವಾನುಮತ ಒಪ್ಪಿಗೆ ಸೂಚಿಸಲಾಯಿತು. ಸಭೆಯಲ್ಲಿ ಹಾಜರಿದ್ದವರೆಲ್ಲರೂ ಭಾರತಾಂಬೆಯ ಮಕ್ಕಳಾದ ನಾವೆಲ್ಲರೂ ಯಾರಿಗೂ ಅಸಮಾಧಾನವಾಗದ ರೀತಿಯಲ್ಲಿ ಒಗ್ಗಟ್ಟಾಗಿ ಮುಂದುವರೆಯಲು ಬದ್ಧರಾಗಿರುವುದಾಗಿ ಸಭೆಗೆ ಮನವರಿಕೆ ಮಾಡಿ, ಸಹೋದರಂತೆ ಮೆರೆದದ್ದು ಸಂಘ ಪರಿವಾರದ ಮುಖಂಡರಿಗೆ ಸಂತಸ ತಂದಿತ್ತು, ಸತ್ಯಮೇವ ಜಯತೆ. ಏನಂತೀರಿ?'














ಈ ಸಂದೇಶವನ್ನು ಓದಿದರೆ ಸಂಘ ಪರಿವಾರದವರು ಯಾವ ಪ್ರಮಾಣದಲ್ಲಿ ವಿಚಲಿತರಾಗಿದ್ದಾರೆ ಎಂಬುದು ತಿಳಿಯುತ್ತದೆ. ಈ ಸಭೆಗೆ ಕೆಲವರು ತುರ್ತು ಕೆಲಸದ ನಿಮಿತ್ತ ಬಂದಿಲ್ಲ ಎಂದು ಆತ್ಮವಂಚನೆಯನ್ನು ಮಾಡಿಕೊಂಡಿದ್ದಾರೆ. ಗೌಡ ಜನಾಂಗದಿಂದ ಬಂದವರು ಕೇವಲ ನಾಲ್ಕು ಮಂದಿ. ಅವರೆಲ್ಲರೂ ಸಂಘ ಪರಿವಾರದಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡು, ತಮಗೆ ಗೈರುಹಾಜರಾಗಲು ಅಸಾಧ್ಯ ಎನ್ನುವಂತಹವರು ಮಾತ್ರ. ಉಳಿದವರು ತಾವು ಸಭೆಗೆ ಬರುವುದಿಲ್ಲ ಎಂದು ಮುಖಕ್ಕೆ ರಾಚುವಂತೆ ಹೇಳಿದ್ದರು. ಇನ್ನು ಬಂದಿದ್ದ ಕೊಡವ ಜನಾಂಗದವರು ಅಲ್ಲಿ ಕೊಡವ ಸ್ಮಾರಕವೇ ಆಗಬೇಕು ಎಂದು ಪಟ್ಟು ಹಿಡಿದದ್ದರಿಂದ ಯಾವುದೇ ಪ್ರಯೋಜನವಾಗಲಿಲ್ಲ.

ಇವೆಲ್ಲವನ್ನೂ ಮುಚ್ಚಿ ಕೊಡಗು ಜಿಲ್ಲೆಯಲ್ಲಿ ಮತ್ತೆ ಸಂಘ ಪರಿವಾರಕ್ಕೆ ನೆಲೆಯನ್ನು ಕಂಡುಕೊಳ್ಳಲು ವಿಷಕಾರುವ ಭಾಷಣವನ್ನು ಮಾಡುವ ಜಗದೀಶ್ ಕಾರಂತ ಜಿಲ್ಲೆಯಾದ್ಯಂತ 'ಅಖಂಡಭಾರತ ಸಂಕಲ್ಪ ದಿನಾಚರಣೆ' ಮತ್ತು ಮೆರವಣಿಗೆ ಕಾರ್ಯಕ್ರಮಗಳನ್ನು ನಿರಂತರವಾಗಿ ಒಬ್ಬ ವ್ಯಕ್ತಿಯ ಸಾವಿಗೂ, ಮತ್ತೊಬ್ಬ ವ್ಯಕ್ತಿಗೆ ಇರಿತ ಪ್ರಕರಣ ನಡೆಯಲು ಕಾರಣೀಭೂತರಾಗಿ

ಕುಶಾಲನಗರದಲ್ಲಿ ಪ್ರಕ್ಷುಬ್ಧ ವಾತಾವ

'ಅಖಂಡ ಭಾರತದ ಸಂಕಲ್ಪ ದಿನಾಚರಣೆ' ಪಂಜಿನ ಮೆರವಣಿಗೆಗಳ ಉದ್ದೇಶವೇ ಗಲಭೆ ಮ ಮೂಲಕ ಯುವಕರನ್ನು ಪ್ರಚೋದಿಸಿ ಮತ್ತೆ ಅ ತಮ್ಮ ತೆಕ್ಕೆಗೆ ತೆಗೆದುಕೊಳ್ಳುವ ಯತ್ನ.

ಜಗದೀಶ ಕಾರಂತ ಈ ಎಲ್ಲಾ ಕಾರ್ಯಕ್ರಮ ಮುಖ್ಯ ಭಾಷಣಕಾರ. ಜಗದೀಶ ಕಾರಂತ ಕ ಕಾಲಿಟ್ಟಾಗಲೆಲ್ಲಾ ಏನಾದರೊಂದು ಅನಾಹುತ ನಡೆಯುತ್ತದೆ. ಯುವಕರಿಗೆ ನಶೆ ಏರಿಸಿ, ತಾನು ಜಾಗ ಖಾಲಿ ಮಾಡುವ ಕಾರ್ಯಕ್ರಮ ಕಾರಂ ಇದೇರೀತಿ ವಿರಾಜಪೇಟೆ, ಮಡಿಕೇರಿಯಲ್ಲಿ ಕಾಯ ಗಳನ್ನು ನಡೆಸಿ, ಅಲ್ಲಿ ಮಾಡಿದ ಪ್ರಚೋದನೆಯ ದಿಂದಾಗಿ ಕುಶಾಲನಗರದಲ್ಲಿ ಪ್ರಕ್ಷುಬ್ಧ ವಾತಾವಣ ನಿ ವಾಗಿದೆ.

ಪ್ರತಿಯೊಂದು ಕಾರ್ಯಕ್ರಮಕ್ಕೂ ತಮ್ಮ ನ ಕಾರ್ಯಕರ್ತರು ಎಂಬುದು ಈಗ ಸಂಘ ಪರಿ ಇಲ್ಲದಂತಾಗಿದೆ. ಹಾಗಾಗಿ ಅಮಾಯಕ ಕಾ ವಿದ್ಯಾರ್ಥಿಗಳನ್ನು ಎ.ಬಿ.ವಿ.ಪಿ. ಸಂಘಟನೆಯ ಹೆ

ಸಂಸದನ ಕೆಲಸ ಮರೆತ ಪ್ರತಾಪ ಸಿಂಹ

ವಿಷಕಾರುವ ಲೇಖನಗಳನ್ನು ಸಂಘ ಪರಿವಾರದ ಮತ್ತೊಂದು ಮುಖವಾಣಿ ಭಟ್ಟರ ವಿಶ್ವವಾಣಿಯಲ್ಲಿ ಹಾಗೂ ಮೈಸೂರಿನಿಂದ ಹೊರಡುವ ಮೈಸೂರು ಮಿತ್ರ ಪತ್ರಿಕೆಯಲ್ಲಿ ಬರೆಯುವ ಪ್ರತಾಪ ಸಿಂಹ "ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುವುದು ಬಿಡಲು ಸಾಧ್ಯವಿಲ್ಲ" ಎಂದಾಗಿದ್ದರೆ, ಸಂಸದನಾಗಿ ಏಕೆ ಇರಬೇಕು ಎಂಬುದು ಪ್ರಶ್ನೆಯಾಗಿದೆ.

ಸಂಸದನ ಕರ್ತವ್ಯವನ್ನೂ ಮಾಡಿಕೊಂಡು, ಬಿಡುವಿನ ವೇಳೆಯಲ್ಲಿ ಲೇಖನಗಳನ್ನು - ಅದೂ ಒಬ್ಬ ಸಂಸದನಾಗಿ ದೇಶ ಕಟ್ಟುವ, ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಲೇಖನಗಳನ್ನು - ಬರೆದರೆ, ಅಂತಹ ವ್ಯಕ್ತಿಯನ್ನು ಜವಾಬ್ದಾರಿಯುತ ಸಂಸದ ಎಂದು ಹೇಳಬಹುದು. ಆದರೆ ಪ್ರತಾಪ ಸಿಂಹ ಬರೆಯುವುದೆಲ್ಲಾ ಸಮಾಜದ ಸ್ವಾಸ್ಥ್ಯವನ್ನು ಕೆಡಿಸುವಂತಹ ಲೇಖನಗಳೇ.

ಇತ್ತೀಚೆಗೆ ಕೇಂದ್ರ ಪರಿಸರ ಮಂತ್ರಾಲಯದ ಸಚಿವರಾದ ಅನಿಲ್ ದಾವೆಯವರು ನವದೆಹಲಿಯಲ್ಲಿ ಪಶ್ಚಿಮಘಟ್ಟ ಪ್ರದೇಶದಲ್ಲಿ ಇರುವಂತಹ ಪ್ರದೇಶಗಳ ಸಂಸದರೊಂದಿಗೆ ಚರ್ಚೆಯನ್ನು ನಡೆಸಿದ್ದರು. ಮಾಧವ ಗಾಡ್ಗಿಲ್ ವರದಿ, ನಂತರ ಬಂದ ಕಸ್ತೂರಿರಂಗನ್ ವರದಿಯನ್ನು ಅನುಷ್ಠಾನಗೊಳಿಸುವಲ್ಲಿ ಬಂದಿರುವ ಎಡರುತೊಡರುಗಳ ಬಗ್ಗೆ ಚರ್ಚಿಸಲು ಈ ಸಭೆಯನ್ನು ಆಯೋಜಿಸಲಾಗಿತ್ತು, ಪಶ್ಚಿಮಘಟ್ಟದ ಸುಮಾರು 10 ಸಾವಿರ ಚದರ ಕಿ.ಮೀ. ವ್ಯಾಪ್ತಿಯಲ್ಲಿ ಬರುವ ಪ್ರದೇಶದಲ್ಲಿ ಈ ವರದಿಯನ್ನು ಅನುಷ್ಠಾನಗೊಳಿಸುವ ಬಗ್ಗೆ ಕರಡು ಅಧಿಸೂಚನೆಯನ್ನು ಸುಮಾರು ಎರಡೂವರೆ ವರ್ಷಗಳ ಹಿಂದೆ ಹೊರಡಿಸಿತ್ತು, ಇದಕ್ಕೆ ತಮಿಳುನಾಡು ಹೊರತುಪಡಿಸಿ, ಬೇರೆ ಎಲ್ಲಾ ರಾಜ್ಯಗಳು ಆಕ್ಷೇಪಣೆಯನ್ನು ಲಿಖಿತ ರೂಪದಲ್ಲಿ ಸಲ್ಲಿಸಿದ್ದವು.

ಪಶ್ಚಿಮಘಟ್ಟ ಪ್ರದೇಶದಲ್ಲಿ ವಾಸಿಸುವ 'ಹಿತಾಸಕ್ತ'ರಿಗೆ ಅನ್ಯಾಯ ಆಗುವುದೆಂಬ ಕಾರಣಕ್ಕಾಗಿ ಕೊಡಗಿನಲ್ಲಿ ಇದರ ವಿರುದ್ಧ ಭಾರೀ ಪ್ರತಿಭಟನಾ ಸಮಾವೇಶ ನಡೆದಿತ್ತು, ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ಸಂಪುಟ ಉಪಸಮಿತಿ ಮತ್ತು ಹಿರಿಯ ಅರಣ್ಯ ಅಧಿಕಾರಿಗಳ ಸಮಿತಿ ಕೊಡಗಿಗೆ ಭೇಟಿ ನೀಡಿ, ಸಾರ್ವಜನಿಕರಿಂದ ಹೇಳಿಕೆ ಪಡೆದು, ಕೇಂದ್ರ ಸರಕಾರಕ್ಕೆ ರವಾನೆಯನ್ನು ಮಾಡಿತ್ತು, ಆ ವೇಳೆಯಲ್ಲಿ ಸಂಸದ ಪ್ರ ಸಿಂಹ ಕೂಡ ಉಪಸ್ಥಿತರಿದ್ದರು.

ಅವರು ಸಂಸತ್ತಿಗೆ ಆಯ್ಕೆಯಾದ ಕೂಡಲೇ ಕೊಡಗಿನ ಜನತೆಗೆ ನೀಡಿದ ಅ "ಕಸ್ತೂರಿರಂಗನ್ ವರದಿಯ ವಿಚಾರವನ್ನು ನನ್ನ ಹೆಗಲಿಗೆ ಹಾಕಿ, ನಿಶ್ಚಿಂತೆಯಿಂದ ಎಂಬುದಾಗಿತ್ತು, ಕೊಡಗು ಹೇಳಿಕೇಳಿ ಬಿಜೆಪಿಗೆ ಮಣೆ ಹಾಕಿರುವ ಜಿಲ್ಲೆಯ ಹಾಗಾಗಿ ಪ್ರತಾಪ ಸಿಂಹನ ಬೆಣ್ಣೆಯ ಮಾತುಗಳಿಗೆ ಮರುಳಾಗಿ, ಕೊಡಗಿನ ವಿಭಾಗ ನಿಶ್ಚಿಂತೆಯಿಂದ ಇತ್ತು.

ಆಗಸ್ಟ್ 11ರಂದು ಅನಿಲ್ ದಾವೆಯವರು ಸಭೆ ನಡೆಸಿದಾಗ ಮಹಾ ತಮಿಳುನಾಡು ಹಾಗೂ ಕೇರಳ ರಾಜ್ಯಗಳಿಂದ ಕೇವಲ 7 ಮಂದಿ ಸಂಸದರು ಸಭೆಯಲ್ಲಿ ಭಾಗವಹಿಸಿದ್ದರು. ಸುಮಾರು ಎರಡು ಗಂಟೆಗಳ ಕಾಲ ನಡೆದ ಈ ಚರ್ಚೆ ಹಿರಿಯ ಮಾಜಿ ಸಚಿವ ಶರದ್ ಪವಾರ್ ಕೂಡ ಉಪಸ್ಥಿತರಿದ್ದರು. ಉಳಿದವರು ಶಶಿ ತರೂರ್, ಎ. ಸಂಪತ್, ಕೆ. ಸೋಮಪ್ರಸಾದ್, ಇ.ಕೆ. ಶ್ರೀಮಾಲಿ ಟ (ಎಲ್ಲರೂ ಕೇರಳದವರು). ತಿರುಚಿ ಶಿವ (ತಮಿಳುನಾಡು), ವಿನಾಯಕ್ ಚ ರಾವತ್ (ಮಹಾರಾಷ್ಟ್ರ) ಇವರುಗಳು ಸಭೆಯಲ್ಲಿ ಭಾಗವಹಿಸಿದ್ದರು. ಕರ್ನಾಟಕದ ಒಬ್ಬ ಸಂಸದ ಈ ಸಭೆಯಲ್ಲಿ ಭಾಗವಹಿಸಲಿಲ್ಲ. "ನನ್ನ ಹೆಗಲ ಮೇಲೆ ಹಾಕಿ ನಿಶ್ಚಿಂತೆ ಇರಿ" ಎಂದು ಹೇಳಿದ್ದ ಪ್ರತಾಪ ಸಿಂಹನಿಗೆ ಲೇಖನ ಬರೆಯುವುದರ ಮಧ್ಯೆ ಮರೆತು ಹೋಗಿತ್ತೋ ಏನೋ.

ಜನರ ಸಮಸ್ಯೆಗಳ ಪರಿಹಾರ ಇವರಿಗೆ ಬೇಕಾಗಿಲ್ಲ, ಇವರಿಗೆ ಬೇಕಾಗಿರು ದೇಶದ ನೆಮ್ಮದಿಯನ್ನು ಕೆಡಿಸುವ ಅನವಶ್ಯಕ ವಿಚಾರಗಳು ಮಾತ್ರ. 54 ಎದೆಯ ಮೋದಿಯ ಪಟ್ಟಾ ಶಿಷ್ಯ ತಾನು ಎಂದು ಹೇಳುವ ಪ್ರತಾಪ ಕಾರ್ಯವೈಖರಿ ಇದು.

ಕಂದಾಯ ಇಲಾಖೆಗೆ ಜೀವ ನೀಡಿದ ತಿಮ್ಮಪ್ಪ

ಕಂದಾಯ ಇಲಾಖೆಯ ಸಚಿವರಾದ ಕಾಗೋಡು ತಿಮ್ಮಪ್ಪನವರು ಅಧಿಕಾರಿಗಳಿಗೆ ಮತ್ತು ಸಾರ್ವಜನಿಕರಿಗೆ ...ಸುವ ಭಾಷೆಯ ಬಗ್ಗೆ ಶಿಷ್ಟಭಾಷೆಯ ಸೋಗಲಾಡಿಗಳು ...ಚಾರ ವಾಣಿಯಲ್ಲಿ ಬಹಳ ಚರ್ಚೆ ಮಾಡಿದ್ದಾರೆ. ಅಂತಹ ...ಊರ್ಖರಿಗೆ ತಿಮ್ಮಪ್ಪ ಇನ್ನೂ ಅರ್ಥವಾಗಿಲ್ಲ. ತಿಮ್ಮಪ್ಪನವರು ತಾವು ವಹಿಸಿಕೊಂಡ ಹುದ್ದೆ ಸಲುವಾಗಿ ಹೊಸ ಭಾಷೆಯನ್ನು ಅಳವಡಿಸಿಕೊಳ್ಳುವವರಲ್ಲ. ಅದು ...ವರು ಸ್ಪೀಕರ್ರಾಗಿ ಅಧಿಕಾರ ವಹಿಸಿಕೊಂಡಾಗಿನಿಂದ ...ದರಿಂದ ಮುಕ್ತಿ ಪಡೆಯುವವರೆಗೆ ಸಾಬೀತಾಗಿತ್ತು. ಈಚೆಗೆ ...ಾತೆ ಮತ್ತು ಮಂತ್ರಿ ಹೆಸರು ಜನಮನದಲ್ಲಿ ಉಳಿಯದ ...ರಣ ತಿಮ್ಮಪ್ಪನವರಿಗೂ ಮರೆತು ಹೋಗುತ್ತಿತ್ತೇನೋ. "ಏ ಅರಣ್ಯ ಉತ್ತರ ಕೊಡಯ್ಯ, ಹೇ ಆರೋಗ್ಯ ...ದಕೇನೇಳ್ತಿ" ಎನ್ನುತ್ತಿದ್ದರು.

ಇನ್ನು ವಿಧಾನಸೌಧದ ಹೊರಗಂತೂ ಅವರು ಅಪ್ಪಟ ...ಳ್ಳಿಗ.

ಎಸ್ಸೆಂ ಕೃಷ್ಣರ ಸರ್ಕಾರದಲ್ಲಿ ಅವರು ಸಚಿವರಾಗಿದ್ದಾಗ ...ಮ್ಮೆ ಸಾಗರದ ಐಬಿಯಲ್ಲಿ ಕುಳಿತಿದ್ದರು. ಆಗ ಮಹಿಳೆಯೊಬ್ಬರು ಬಂದು ತನ್ನ ಗಂಡ ಬೇರೊಬ್ಬಳ ...ಹವಾಸದಿಂದ ಮನೆಗೆ ಬರದಂತಾಗಿದ್ದಾನೆ ಎಂದು ...ೂರಿದಳು. ಈ ಕಡೆ ತಿರುಗಿ ಮಾರ್ಮಿಕವಾಗಿ ನಕ್ಕ ತಿಮ್ಮಪ್ಪನವರು "ಇಂಥ ಸಮಸ್ಯೆಗಳಿಗೆ ನಾವು ಉತ್ತರ ...ೊಡಕ್ಕೂ ಆಗಲ್ಲ. ಸಮಾಧಾನ ಹೇಳಕ್ಕೂ ಆಗಲ್ಲ" ಎಂದರು. ತಿಮ್ಮಪ್ಪನವರ ಖಾಸಗಿ ಬದುಕನ್ನು ಗ್ರಹಿಸಿದ್ದವರು ...ಳಗೊಳಗೇ ನಕ್ಕರು. ಆ ಹೆಣ್ಣುಮಗಳು ದೇವರಿಗೆ ಹರಕೆ ...ಪ್ಪಿಸಿದ ನೆಮ್ಮದಿಯಲ್ಲಿ ಹೋದಳು.

ನಂತರ ಯಾರೊ ಒಬ್ಬ ಬಂದು ಆಗಬೇಕಿದ್ದ ಕೆಲಸ ...ಗದೇ ಇರುವ ಬಗ್ಗೆ ತನ್ನ ಅಸಹಾಯಕತೆ ಹೇಳಿ "ಈಗ ...ನೇನು ಮಾಡ್ಲಿ" ಎಂದ. "ತರುಡು ಮಾಡು" ಎಂದರು ತಿಮ್ಮಪ್ಪ. ತಕ್ಷಣ ಪಕ್ಕದಲ್ಲಿ ಮಹಿಳೆಯರಿದ್ದುದು ಗಮನಕ್ಕೆ ...ಂದು ಅವರ ಕಡೆ ತಿರುಗಿ ಪಕಾರೆಂದು ನಗಾಡಿದರು. ಮಹಿಳೆಯರೂ ನಕ್ಕು ಅಶ್ಲೀಲ ಪದವನ್ನು ಹಾಸ್ಯವಾಗಿಸಿದರು.

ಈಚೆಗೆ ತಿಮ್ಮಪ್ಪ ಸಾಗರಕ್ಕೆ ಹೋಗಿದ್ದಾಗ ಗ್ರಂಥಾಲಯ ...ಲಾಖೆ ಅಧಿಕಾರಿ ತನ್ನ ಪರಿಚಯ ಹೇಳಿಕೊಂಡರು. "...ನು ಟ್ರಾನ್ಸ್‌ಫರಾ?" ಎಂದರು. "ಇಲ್ಲ ಸಾರ್. ಸಾಗರದ ...ಬ್ರರಿ ಕಟ್ಟಡಕ್ಕೆ ಒಂದು ಕೋಟಿ ರೂಪಾಯಿ ಮಂಜೂ...ಗಿದೆ" ಎಂದರು. "ಮಂಜೂರಾಗ್ಯದೆ ಅಂತ ಹೇಳದಲ್ಲ, ...ುಕುಳಿ ಹಿಡದು ಬೆನ್ನತ್ತಬೇಕು" ಎಂದು ಅಧಿಕಾರಿಯನ್ನು ...ುರುಗುಟ್ಟಿ ನೋಡಿದರು. ಗರಬಡಿದ ಅಧಿಕಾರಿ ತಿಮ್ಮಪ್ಪನವರಿಂದ ಇನ್ನಾವ ಪದ ಹೊರಡುವುದೋ ಎಂದು ...ದರಿ ಸುಮ್ಮನಾದರು. ಸರ್ಕಾರದಲ್ಲಿ ಮಂಜೂರಾದ ...ಲಸಗಳು ಅಲ್ಲೇ ಉಳಿದು ಹೋಗುವ ಬಗ್ಗೆ ಚೆನ್ನಾಗಿ ...ರಿತಿರುವ ತಿಮ್ಮಪ್ಪ ಸಿಟ್ಟಿನಿಂದ ಆ ಪದ ಬಳಸಿದ್ದರು. ...ುಕಳಿ ಹಿಡಿದು ಎಂದರೆ ಕೆಲಸ ಆಗುವವರೆಗೂ ...ಡಬಾರದು ಎಂದರ್ಥ.


ಮನುಷ್ಯ ತನ್ನ ಖಾಸಗಿ ವಿಷಯದಲ್ಲಿ, ಲೈಂಗಿಕ ...ಪೇಕ್ಷೆಯಲ್ಲಿ ಕೂಡ ಇಂತಹ ಹಠ ಹೊಂದಿದವನು. ಆದರೆ ತನ್ನ ಬದುಕಿಗೆ ಆಸರೆಯಾದ ಸರ್ಕಾರಿ ಕೆಲಸಗಳ ಅರ್ಜಿ ವಿಷಯದಲ್ಲಿ ಮಹಾ ಹೊಣೆಗೇಡಿಯಾಗಿದ್ದಾನೆ. ಈ ಹೊಣೆಗೇಡಿತನ ಅಧಿಕಾರಿಯ ಕಾರ್ಯವೈಖರಿ ನೋಡಿದ ಕೂಡಲೇ ತಿಮ್ಮಪ್ಪನ ಅರಿವಿಗೆ ಬರುತ್ತದೆ. ಆಗ ಸಹಜವಾಗಿ ಕಿವಿಗೆ ಹಿತವಾಗುವಂತಹ ಪದ ಅವರ ಬಾಯಿಂದ ಬರುತ್ತವೆ.

ಈಚೆಗೆ ಇಂಜಿನಿಯರೊಬ್ಬ ಶಿಸ್ತಿನ ವೇಷದೊಂದಿಗೆ ತಿಮ್ಮಪ್ಪನವರನ್ನು ಮೆಚ್ಚಿಸಲು ಏನೇನೋ ಮಾತನಾಡಿದ. ಕೂಡಲೇ ತಿಮ್ಮಪ್ಪ "ವಂಗಿದ್ದಂಗಿದ್ದಿಯಲ್ಲೋ, ಏನೋದಿದ್ದೀ?" ಎಂದರು. ತತ್ತರಿಸಿಹೋದ ಅಧಿಕಾರಿ ತೆಪ್ಪಗಾದ.

ತಿಮ್ಮಪ್ಪ ಆಡಳಿತಾತ್ಮಕವಾದ ವಿಷಯದಲ್ಲಿ ಯಾವ ಅಧಿಕಾರಿಯಿಂದಲೂ ವಿವರ ಕೇಳುವ ಸ್ಥಿತಿಯಲ್ಲಿಲ್ಲ. ಎಲ್ಲ ಅವರಿಗೆ ಗೊತ್ತಿದೆ. ಅವರು ಮಂತ್ರಿಯಾಗಿ ಪ್ರಥಮ ಬಾರಿ ಜಿಲ್ಲೆಗೆ ಬಂದ ಸಮಯದಲ್ಲಿ ಯಾವ ಅಧಿಕಾರಿಗಳಿಂದಲೂ ಸಬೂಬಿನಂತಹ ವಿವರ ಕೇಳದೆ ಒಂದು ಗಂಟೆ ಸತತವಾಗಿ ಈಗಿಂದೀಗಲೇ ತಾವು ಏನು ಮಾಡಬೇಕು ಎಂಬ ವಿವರ ಕೊಟ್ಟರು. ನಡುವೆ ಕಾಡಿನ ಇಲಾಖೆಯವರಿಗೆ "ಹುಚ್ಚ ಭಂಗಿ ತರ ಆಡಬ್ಯಾಡ್ರಿ" ಎಂದರು. ಮತ್ತೊಬ್ಬ ಅಧಿಕಾರಿಗೆ "ಕಾಮನ್‌ಸೆನ್ಸೇ ಇಲವಲ್ರೀ" ಎಂದರು. ಈ ಎಲ್ಲಾ ಮಾತುಗಳಿಗೆ ಅಧಿಕಾರಿಗಳು ಯೋಗ್ಯರಾಗಿದ್ದರು. ಪಕ್ಕದಲ್ಲಿ ಕುಳಿತಿದ್ದ ಯಡಿಯೂರಪ್ಪನವರು ಒಂದು ರೀತಿ ಡಮ್ಮಿ ನಾಯಕರಂತೆ ಕಂಡುಬಂದರು.

ಆ ದಿನ ತಿಮ್ಮಪ್ಪನವರ ಒಂದು ವಿರಾಟ್ ದರ್ಶನವಾಗಿ ಮೂರು ವರ್ಷಕ್ಕೂ ಮೊದಲೇ ಇವರು ರೆವಿನ್ಯೂ ಮಂತ್ರಿಯಾಗಿದ್ದರೆ ಎಷ್ಟು ಚೆನ್ನಾಗಿತ್ತು ಅನ್ನಿಸಿತು. ಏಕೆಂದರೆ ರೆವಿನ್ಯೂ ಇಲಾಖೆ ರೈತರನ್ನು ಹೈರಾಣಾಗಿಸಿರುವ ಇಲಾಖೆ. ಮಲೆನಾಡಿನಲ್ಲಿ ನೂರಾರು ವರ್ಷದಿಂದ ಅರಣ್ಯ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಹೊರ ಜಗತ್ತಿನ ಸಹವಾಸವೇ ಇಲ್ಲದ ಮುಗ್ಧ ರೈತರಿಗೆ ತಮ್ಮ ಭೂಮಿಯ ಹಕ್ಕು ಪತ್ರವೇ ಸಿಕ್ಕಿಲ್ಲ. ದೇಶದಲ್ಲಿ ಕೆಟ್ಟ ಸರ್ಕಾರಗಳು ಬಂದು ಯಾವಾಗಲಾದರೂ ಇವರನ್ನು ಒಕ್ಕಲೆಬ್ಬಿಸಬಹುದು. ಈಗಾಗಲೇ ಲಿಂಗನಮಕ್ಕಿ ಹಿನ್ನೀರಿನಿಂದ ಸಂತ್ರಸ್ತರಾದ ಜನಕ್ಕೆ ಇನ್ನೂ ನ್ಯಾಯ ಸಿಕ್ಕಿಲ್ಲ. ಈ ಎಲ್ಲಾ ದುಗುಡಗಳನ್ನು ಹೊಂದಿರುವ ತಿಮ್ಮಪ್ಪ ರೇಗುತ್ತಾರೆ. ಕೈತುಂಬ ಸಂಬಳ ತೆಗೆದುಕೊಂಡು ಸರ್ಕಾರಿ ಸವಲತ್ತಿನೊಂದಿಗೆ ಹೆಂಡತಿ ಮಕ್ಕಳೊಡನೆ ವಿಹಾರಾರ್ಥಿಗಳಂತೆ ಕಂಡುಬರುವ ಅಧಿಕಾರಿಗಳಿಗೆ ತಿಮ್ಮಪ್ಪನವರ ಕಾಳಜಿ ಮಿಶ್ರಿತ ಸಿಟ್ಟು ಅರ್ಥವಾಗದೆ ಇಲ್ಲಿಂದ ಕಾಲ್ಕೀಳಲು ಯೋಚಿಸುತ್ತಾರೆ.

ಸದ್ಯ ಶಿವಮೊಗ್ಗದಲ್ಲಿ ತಿಮ್ಮಪ್ಪನವರಿಗೆ ಸ್ಪಂದಿಸುವಲ್ಲಿ ಕೆಲವೇ ಕೆಲವು ಅಧಿಕಾರಿಗಳು ಶ್ರಮಿಸುತ್ತಿದ್ದಾರೆ. ದಕ್ಷ ಪೊಲೀಸ್ ಅಧಿಕಾರಿ ಡಿ. ರವಿ ಚನ್ನಣ್ಣನವರು, ಜಿಲ್ಲಾಧಿಕಾರಿ ಹಿಕ್ಕೇರಿ ಮತ್ತು ಎ.ಡಿ.ಸಿ. ಚೆನ್ನಬಸಪ್ಪನವರು ಮಾತ್ರ ತಿಮ್ಮಪ್ಪನವರನ್ನು ಪೂರ್ಣ ಅರ್ಥಮಾಡಿಕೊಂಡವರಂತೆ ತಮ್ಮ ಖಾಸಗಿ ಬದುಕಿನ ಸಮಯವನ್ನು ಲೆಕ್ಕಿಸದೆ ಶ್ರಮಿಸುತ್ತಿದ್ದಾರೆ. ಇನ್ನುಳಿದ ಮೈಗಳ್ಳರು ತಿಮ್ಮಪ್ಪನ



ಸಹವಾಸದಿಂದ ಪಾರಾಗುವುದು ಹೇಗೆಂದು ಯೋಚಿಸುತ್ತಿದ್ದಾರೆ. ಈ ಪೈಕಿ ಸಾಗರದ ವಿಭಾಗಾಧಿಕಾರಿ ತಿಮ್ಮಪ್ಪನಿಗೆ ಕಿರಿಕ್ ಮಾಡಿದರೆ ವರ್ಗವಾಗಬಹುದೆಂದು ಭಾವಿಸಿದಂತಿದೆ.

ತಿಮ್ಮಪ್ಪನವರು ಮಂತ್ರಿಯಾಗಿ ಬಂದಾಗ ಮುಖ್ಯಮಂತ್ರಿಯಾಗಿ ಬಂದರೇನೊ ಎಂಬಷ್ಟು ಅದ್ದೂರಿ ಸ್ವಾಗತ ದೊರೆಯಿತು. ಇದರಿಂದ ಉತ್ತೇಜನಗೊಂಡ ಅವರು ವಿಶ್ರಾಂತಿ ನಿದ್ರೆಯನ್ನು ಬದಿಗೊತ್ತಿ ಕೆಲಸ ಮಾಡುತ್ತಿದ್ದಾರೆ. ಏಕೆಂದರೆ ಡಿಸೆಂಬರ್ ಒಳಗೆ ಭೂಮಂಜೂರಾತಿ ಕೋರಿ ಬಂದಿರುವ 80 ಸಾವಿರ ಅರ್ಜಿಗಳಿಗೆ ನ್ಯಾಯ ಒದಗಿಸಬೇಕಿದೆ. ಅಂದರೆ ಇಡೀ ಮಲೆನಾಡು ಬಗರ್‌ಹುಕುಂ ಬೇಸಾಯದಲ್ಲಿ ಮುಳುಗಿದೆ ಎಂದರ್ಥ. ಈ ಜನಕ್ಕೆ ಭೂಮಿ ಹಕ್ಕು ಪತ್ರ ಕೊಡುವ ವಿಷಯ ಬಂದಾಗ ತಿಮ್ಮಪ್ಪ ಭಾವುಕರಾಗುತ್ತಾರೆ.

ಶಿವಮೊಗ್ಗದಲ್ಲಿ ನಡೆದ ಅರಸು ಜನ್ಮ ಶತಮಾನೋತ್ಸವದಲ್ಲೂ ದೇವರಾಜ ಅರಸು ಭಾವಚಿತ್ರಕ್ಕೆ ಕೈಮುಗಿದು "ನಮಗೆ ಮುಕ್ತಿ ಕೊಟ್ಟ ಮಹಾನಾಯಕ" ಎಂದು ಭಾವುಕರಾದರು. ಅದಕ್ಕೂ ಕಾರಣವಿದೆ. ಕಾಗೋಡು ತಿಮ್ಮಪ್ಪ ಅರಸರ ಅವಧಿಯಲ್ಲಿ ವಿರೋಧ ಪಕ್ಷದಲ್ಲಿದ್ದರು. ಯಾರಿಗೂ ಕೇರ್ ಮಾಡದ ಅರಸು ಕಾಗೋಡು ತಿಮ್ಮಪ್ಪ, ಕೊಣಂದೂರು ಲಿಂಗಪ್ಪ ಮತ್ತು ಬಂಗಾರಪ್ಪನವರ ಅರ್ಥಪೂರ್ಣ ವಿರೋಧ ಎದುರಿಸಲು ತಯಾರಾಗಿ ಸದನಕ್ಕೆ ಬರುತ್ತಿದ್ದರು. ಅಂತಹ ಅರಸು ಕ್ರಮೇಣ ಕಾಗೋಡು ತಿಮ್ಮಪ್ಪ ತನ್ನ ಸರ್ಕಾರದಲ್ಲಿದ್ದರೆ ತನಗೆ ಆನೆ ಬಲ ಬಂದಂತೆ ಎಂದು ಭಾವಿಸಿ ತಿಮ್ಮಪ್ಪನವರನ್ನು ತಮ್ಮ ಪಾರ್ಟಿಗೆ ಬರಮಾಡಿಕೊಳ್ಳಲು ಬಹುದೊಡ್ಡ ಸಭೆಯನ್ನೇ ಸೇರಿಸಿದರು. ಆದರೆ ಆಗಿನ ಸಂದರ್ಭದಲ್ಲಿ ಡೋಲಾಯಮಾನದಲ್ಲಿದ್ದ ಕಾಗೋಡು ತಿಮ್ಮಪ್ಪ ಅರಸು ಪಾರ್ಟಿ ಸೇರಲಿಲ್ಲ. ಬದಲಿಗೆ ಬಂಗಾರಪ್ಪ ಸೇರಿದರು. ಇದರಿಂದ ಅರಸು ಅನುಭವಿಸಿದ ಯಾತನೆ ಈಗ ಇತಿಹಾಸ. ಆದರೆ ಈಗ ಅರಸು ಕೆಲಸವನ್ನು ಬದುಕಿನ ಸಾರ್ಥಕತೆಯ ಕ್ಷಣವೆಂದು ಭಾವಿಸಿ ನಿರ್ವಹಿಸುತ್ತಿರುವ ತಿಮ್ಮಪ್ಪನವರು ರೆವಿನ್ಯೂ ಇಲಾಖೆಗೆ ಅಕ್ಷರಶಃ ಜೀವ ನೀಡಿದ್ದಾರೆ.

ಈ ಹಿಂದೆ ರೋಗಗ್ರಸ್ತವಾಗಿ ಮಾತ್ರ ಇಂಜಕ್ಷನ್ನಿನಲ್ಲೇ ಕಾಲ ಹಾಕುತ್ತಿದ್ದ ಇಲಾಖೆ ಹೊಸ ಚೈತನ್ಯ ಪಡೆದು ಕಡೆಗಳಿಗೆಯಲ್ಲಿ ಸಿದ್ದರಾಮಯ್ಯನ ಸರ್ಕಾರಕ್ಕೆ ನ್ಯಾಯ ಒದಗಿಸಿದೆ. ತಿಮ್ಮಪ್ಪನಂತೆ ಹತ್ತು ಜನ ಮಂತ್ರಿಗಳು ಕೆಲಸ ಮಾಡಿದರೂ ಸಾಕು ಈ ಸರ್ಕಾರಕ್ಕೆ ಮರುಜೀವ ಪ್ರಾಪ್ತಿಯಾಗಬಹುದು.

ವರ್ಗಾವಣೆಯೇ ದಂಧೆಯಾಗಿರುವ ಈ ಸಮಯದಲ್ಲಿ ತಮ್ಮ ಮೇಲಧಿಕಾರಿಯ ಬಗ್ಗೆ ದೂರು ಹೇಳಲು ಇಬ್ಬರು ಪೊಲೀಸರು ಬಂದರು. ಅವರಿಗೆ ಸ್ವಜಾತಿಯ ತಿಮ್ಮಪ್ಪನವರಿಗೆ ಸಲೀಸಾಗಿ ಚಾಡಿ ಹೇಳಬಹುದೆಂಬ ವಿಶ್ವಾಸವಿತ್ತೇನೋ. ಸಾಗರದ ಇನ್ಸ್‌ಪೆಕ್ಟರ್ ಬಗ್ಗೆ ದೂರು ಹೇಳುತ್ತ "ಆ ಇನ್ಸ್‌ಪೆಕ್ಟರು ಜಾತಿ ತಾರತಮ್ಯ ಮಾಡ್ತರೆ ಸಾರ್. ನಾವು ಈಡಿಗರು ಅಂತ ನಮ್ಮನ್ನು ಕೆಟ್ಟದಾಗಿ ನಡೆಸಿಕೊಳ್ತಾರೆ" ಎಂದು ಸರಿಯಾದ ಬಾಣ ಬಿಟ್ಟ ತೃಪ್ತಿಯಿಂದ ತಿಮ್ಮಪ್ಪನವರ ಪ್ರತಿಕ್ರಿಯೆಗೆ ಕಾದರು. ತಿಮ್ಮಪ್ಪನವರು "ಎಲ್ಲಿ ಆ ಇನ್ಸ್‌ಪೆಕ್ಟರಿಗೆ ಫೋನ್ ತಗೊ" ಎಂದರು. ಪಿ.ಎ. ತೆಗೆದುಕೊಂಡ. "ರೀ ಇನ್ಸ್‌ಪೆಕ್ಟರೆ, ಅದೇನ್ರಿ ಒಂದೇ ಜಾತಿ ಜನನ ಅಲ್ಲಿಟ್ಟುಗೊಂಡಿದ್ದಿರಿ? ಇಲ್ಲೊಂದಿಬ್ರು ಬಂದವ್ರೆ ಅವ್ರನ್ನ ತಗದು ದೂರಕ್ಕೆಲಾರ ಹಾಕಿ" ಎಂದು ದುರುಗುಟ್ಟಿ ನೋಡಿದರು. ದೂರು ಹೇಳಲು ಬಂದವರು ವರ್ಗಾವಣೆಯ ಆರ್ಡರ್ ಹಿಡಿದು ಹೊರಟಂತಾಯ್ತು. ಆ ದಿನ ನೋಡಿದ ಪಿ.ಸಿ.ಗಳ ಮುಖ ವರ್ಣಿಸಲಸದಳ ರಂಗಾಯಣ ರಘು ಮಾತ್ರ ಅಭಿನಯಿಸಬಲ್ಲ. ಹೀಗಾಗಿ ವರ್ಗಾವಣೆಯ ಜನ ತಿಮ್ಮಪ್ಪನ ಬಳಿ ಸುಳಿಯುವುದು ಕಷ್ಟ.

ಒಳ್ಳೆ ಕೆಲಸಗಾರರಾದರೆ ಅವರೆ ಹಾಕಿಸಿಕೊಳ್ಳುತ್ತಾರೆ. ಇದರ ಅರಿವಿರದ ಮಹಾಗುಂಡನೊಬ್ಬ ತನ್ನ ಹೆಂಡತಿ ವರ್ಗಾವಣೆ ಕೋರಿ ಓಡಿಬಂದ. "ಹೆಂಡತಿ ಬೆಂಗಳೂರಲ್ಲವ್ಳೆ ಸಾರ್. ಬಸರಿ ಆಗಿದಾಳೆ. ಇಲ್ಲಿಗೆ ಕರಿಸಿಕೊಬೇಕು. ವರ್ಗ ಮಾಡಿಸಿಕೊಡಿ" ಎಂದ. "ಬಸರಿಯಾಗಿದಾಳೆ ಅಂದ್ರೆ ಮಾಡಿದ್ದಿ ಆಗ್ಯವ್ಳೆ. ಅದಕ್ಕೆ ನಾವೇನು ಮಾಡಬೇಕು ಹೋಗು" ಎಂದರು. ಹೆಂಡತಿಯನ್ನು ಗರ್ಭಿಣಿ ಮಾಡಿ ಸನಿಹದಲ್ಲೇ ಡಿಲೆವರಿ ಮಾಡಿಸಿಕೊಳ್ಳಲು ಸಂಭ್ರಮಗೊಂಡು ಬಂದಿದ್ದ ವ್ಯಕ್ತಿ ಸುಮ್ಮನೆ ಹೋದ. ನಿಜಕ್ಕೂ ಪ್ರಜ್ಞಾವಂತ ರಾಜಕಾರಣಿ ವರ್ಗಾವಣೆ ದಂಧೆಯ ಅಧಿಕಾರಿಗಳನ್ನು ಹತ್ತಿರ ಸೇರಿಸುವುದಿಲ್ಲ. ಇವರೇನು ಕಾಶ್ಮೀರ, ಅಸ್ಸಾಂಗಳಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ. ಇಲ್ಲೇ ನಮ್ಮ ಕನ್ನಡನಾಡಿನಲ್ಲೇ ಇರಲಾಗದ ಈ ಜನ ಎಲ್ಲಿದ್ದರೂ ಕೆಲಸ ಮಾಡುವುದಿಲ್ಲ ಎಂಬುದು ತಿಮ್ಮಪ್ಪನವರ ತೀರ್ಮಾನ.

ಸ್ವತಂತ್ರ ದಿನಾಚರಣೆಯೆಂದು ಸ್ವಾತಂತ್ರ್ಯೋತ್ತರ ಸಂದೇಶ ಓದುತ್ತ ಸಹಜವಾಗಿ ರೈತರ ಬಗ್ಗೆ ಪ್ರಸ್ತಾಪ ಬಂದಾಗ ಭಾವುಕರಾಗಿ ಕುಸಿದ ತಿಮ್ಮಪ್ಪನವರು ಎಂದಿನಂತೆ ಲವಲವಿಕೆಯಿಂದ ಮಣ್ಣಿನ ಮಕ್ಕಳ ಹಕ್ಕುಪತ್ರ ನೀಡುವ ಶಕ್ತಿವಂತರಾಗಿ ಚೇತರಿಸಿಕೊಳ್ಳಲಿ ಎಂದು ಪತ್ರಿಕೆ ಹಾರೈಸುತ್ತದೆ.

■ ವರದಿಗಾರ


...ರಿಸಿ ಈ ಕಾರ್ಯಕ್ರಮಗಳಿಗೆ ಬಳಸಿಕೊಳ್ಳುತ್ತಿದ್ದಾರೆ.

ಆಗಸ್ಟ್ 14ರಂದು ವಿರಾಜಪೇಟೆ ಹಾಗೂ ಕುಶಾಲನಗರದಲ್ಲಿ ಪಂಜಿನ ಮೆರವಣಿಗೆಯನ್ನು ನಡೆಸಿದ್ದಾರೆ. ವಿರಾಜಪೇಟೆಯಲ್ಲಿ ಇದಕ್ಕೆ ಮೂರು ದಿನಗಳ ಹಿಂದೆ ಸಂಕಲ್ಪ ದಿನಾಚರಣೆ ನಡೆದಿತ್ತು. ಕೇವಲ ಪಂಜಿನ ಮೆರವಣಿಗೆಯನ್ನು ಆಗಸ್ಟ್ 14ರಂದು ನಡೆಸಿದ್ದಾರೆ. ಆದರೆ ಕುಶಾಲನಗರದಲ್ಲಿ ಪಂಜಿನ ಮೆರವಣಿಗೆ ಮತ್ತು ಸಂಕಲ್ಪ ದಿನಾಚರಣೆ ಒಟ್ಟಾಗಿ ನಡೆಸಿದ್ದು ಅನಾಹುತಕ್ಕೆ ಕಾರಣವಾಗಿದೆ.

ಮಸೀದಿಗೆ ಕಲ್ಲು

ಮೆರವಣಿಗೆ ಕುಶಾಲನಗರದ ಪ್ರಮುಖ ಬೀದಿಗಳಲ್ಲಿ ...ಯುವಾಗ ಮಸೀದಿಯೊಂದಕ್ಕೆ ಕಲ್ಲು ತೂರಾಟವನ್ನು ನಡೆಸಿದ್ದಾರೆ. ಯಾವುದೇ ಪ್ರಚೋದನೆ ಇಲ್ಲದೆ ನಡೆದಂತಹ ಘಟನೆ ಇದು. ಕಲ್ಲು ತೂರಾಟ ನಡೆಸಿದ ಸಂದರ್ಭದಲ್ಲಿ ಪೊಲೀಸರು ಉಪಸ್ಥಿತರಿದ್ದರು ಎಂಬುದು ಗಮನಾರ್ಹವಾದ ವಿಚಾರ. ಕಲ್ಲು ಬಿದ್ದ ಸಂದರ್ಭದಲ್ಲಿ ಮಸೀದಿಯೊಳಗಿದ್ದ ಯುವಕರು ಹೊರಬಂದು, ಕಲ್ಲು ತೂರಾಟ ನಡೆಸಿದವರನ್ನು ...ದರಿಸಿದ್ದಾರೆ. ಪೊಲೀಸರು ಕಲ್ಲು ತೂರಾಟ ನಡೆಸಿದವರನ್ನು ...ಶಕ್ಕೆ ತೆಗೆದುಕೊಳ್ಳುವ ಬದಲು, ಮಸೀದಿಯೊಳಗಿದ್ದ ಯುವಕರನ್ನು ಸಮಾಧಾನಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ.

ಕಲ್ಲು ತೂರಾಟ ನಡೆಸಿದ್ದು ಯಾರು ಎಂಬುದು ಪೊಲೀಸ್ ಇಲಾಖೆಗೆ ಖಚಿತವಾಗಿ ತಿಳಿದಿದೆ. ಏಕೆಂದರೆ ಪೊಲೀಸರು ಸಂಪೂರ್ಣ ಮೆರವಣಿಗೆಯನ್ನು ವೀಡಿಯೋ ಚಿತ್ರೀಕರಣ ಮಾಡಿಕೊಂಡಿದ್ದಾರೆ. ಆದರೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾರನ್ನೂ ಬಂಧಿಸಿಲ್ಲ, ಮಸೀದಿ ...ಯಿತಿಯವರು ನಿರ್ದಿಷ್ಟ ವ್ಯಕ್ತಿಗಳ ಹೆಸರುಗಳನ್ನು ಹಾಕಿ ...ಕಾರು ನೀಡಿಲ್ಲ, ಅವರಿಗೆ ವ್ಯಕ್ತಿಗಳ ಹೆಸರನ್ನು ಹಾಕಿ ...ಕಾರು ನೀಡುವಷ್ಟು ಧೈರ್ಯವಿಲ್ಲ, ಆದರೆ ಪೊಲೀಸರು ...ಸ್ವಯಂಪ್ರೇರಿತರಾಗಿ ಅಂತಹ ವ್ಯಕ್ತಿಗಳ ವಿರುದ್ಧ ಕ್ರಮ ...ಗೆದುಕೊಳ್ಳುವುದಿಲ್ಲ, ಇದಕ್ಕೆ ಕಾರಣ ಒಂದು ವೇಳೆ ...ಪ್ಪ ಇಂತಹ ಕ್ರಮಕ್ಕೆ ಮುಂದಾದಲ್ಲಿ ತಮ್ಮ ವಿರುದ್ಧ



ಚೆಡ್ಡಿಗಳು ಪ್ರತಿಭಟಿಸುತ್ತಾರೆ. ಹಾಗೆ ಆದಾಗ ತಮ್ಮ ರಕ್ಷಣೆಗೆ ಸರಕಾರವಾಗಲಿ, ಕಾಂಗ್ರೆಸ್ ಪಕ್ಷವಾಗಲಿ ಬರುವುದಿಲ್ಲ ಎಂಬುದು ಪೊಲೀಸರಿಗೆ ಖಚಿತವಾಗಿ ತಿಳಿದಿದೆ. ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಒಂದು ಕಡೆ ಪೊಲೀಸ್ ಇಲಾಖೆ, ಮತ್ತೊಂದು ಕಡೆ ಅಲ್ಪಸಂಖ್ಯಾತರು ಪ್ರಯತ್ನವನ್ನು ಮಾಡುತ್ತಿದ್ದಾರೆ.

ಇದಾದನಂತರ ಮರುದಿನ ಬೆಳಗ್ಗೆ ಆರ್.ಎಸ್.ಎಸ್. ಕಾರ್ಯಕರ್ತ ಎಂದು ಹೇಳಿಕೊಳ್ಳುವ ಆಟೋ ಚಾಲಕ ಪ್ರವೀಣ್ ಪೂಜಾರಿ ಎಂಬವನನ್ನು ಭಾನುವಾರ ರಾತ್ರಿ ಕೊಲೆ ಮಾಡಲಾಗಿದೆ ಎಂಬ ವಿಚಾರ ಬೆಳಕಿಗೆ ಬಂದಿದೆ. ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಇದು ಪ್ರತೀಕಾರದ ಕೊಲೆ ಎಂದು ಬಿಂಬಿಸಲಾಗುತ್ತಿದ್ದು, ಕುಶಾಲನಗರದಲ್ಲಿ ಪ್ರಕ್ಷುಬ್ಧ ವಾತಾವರಣಕ್ಕೆ ಕಾರಣವಾಗಿದೆ. ಸಂಘ ಪರಿವಾರದ ಹಿಡಿತದಲ್ಲಿರುವ ಆಟೋ ಚಾಲಕರ ಸಂಘ ಪ್ರತಿಭಟನೆಯನ್ನು ಸೆಕ್ಷನ್ 144 ಜಾರಿಯಲ್ಲಿದ್ದರೂ ನಡೆಸಿದೆ. ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡುವವರೆಗೆ ಮರಣೋತ್ತರ ಪರೀಕ್ಷೆಗೆ ಅವಕಾಶ ನೀಡುವುದಿಲ್ಲ ಎಂದು ಉದ್ವಿಗ್ನ ಸ್ಥಿತಿಯನ್ನು ಉಂಟುಮಾಡಿದ್ದಾರೆ.

ಆಗಸ್ಟ್ 15ರಂದು ಧ್ವಜಾರೋಹಣ ಕಾರ್ಯಕ್ರಮಕ್ಕೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎಂ.ಆರ್. ಸೀತಾರಾಂ ಕೊಡಗಿಗೆ ಭೇಟಿ ನೀಡಿದ್ದಾರೆ. ಕುಶಾಲನಗರದ ಮಾರ್ಗವಾಗಿಯೇ ಅವರು ಕೊಡಗಿಗೆ ಆಗಮಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ಸಚಿವರೂ ಸೇರಿದಂತೆ ಕಾಂಗ್ರೆಸಿನ ವಿಧಾನ ಪರಿಷತ್ ಸದಸ್ಯೆ ವೀಣಾ ಅಚ್ಚಯ್ಯ ಕಾಂಗ್ರೆಸ್ ಮುಖಂಡರು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಎಲ್ಲರೂ ಭಾಗವಹಿಸಿದ್ದಾರೆ. ಆದರೆ 30 ನಿಮಿಷ ಪ್ರಯಾಣದ ಕುಶಾಲನಗರಕ್ಕೆ ತೆರಳಿ, ಪರಿಸ್ಥಿತಿಯನ್ನು ಅವಲೋಕನ ಮಾಡುವುದಾಗಲಿ ಅಥವ ಮೃತನ ಕುಟುಂಬಕ್ಕೆ ಸಾಂತ್ವನ ಹೇಳುವುದಾಗಲಿ ಮಾಡಲಿಲ್ಲ.

ಸಂಜೆಯ ವೇಳೆಗೆ ಪೊಲೀಸ್ ಬಿಗಿ ಬಂದೋಬಸ್ತ್ ನಡುವೆ ಕುಶಾಲನಗರದ ಹೃದಯಭಾಗದಲ್ಲಿ ಆಟೋ ಚಾಲಕನೊಬ್ಬ ಉತ್ತರಪ್ರದೇಶ ಮೂಲದ ಅನಾಥಾಶ್ರಮಕ್ಕೆ ಚಂದ ವಸೂಲಿ ಮಾಡುತ್ತಿದ್ದ ವ್ಯಕ್ತಿಗೆ ಚೂರಿಯಿಂದ ಇರಿದಿದ್ದಾನೆ.

ಈ ಎರಡೂ ದಿನಗಳು ಜಿಲ್ಲಾ ಉಸ್ತುವಾರಿ ಸಚಿವರು ಕೊಡಗು ಜಿಲ್ಲೆಯಲ್ಲಿ ಇದ್ದರೂ ಅವರು ಒಂದೇ ಒಂದು ಹೇಳಿಕೆಯನ್ನು ನೀಡಲಿಲ್ಲ, ಕನಿಷ್ಠ ಶಾಂತಿಯನ್ನು ಕಾಪಾಡುವಂತೆ ಮನವಿಯನ್ನು ಕೂಡ ಮಾಡಲಿಲ್ಲ. 16ರಂದು ಅಪರಾಹ್ನ ಉಸ್ತುವಾರಿ ಸಚಿವರು ಮೃತನ ಮನೆಗೆ ಭೇಟಿ ನೀಡಿದ್ದಾರೆ. ಗಲಭೆ ಏತಕ್ಕಾಗಿ ಆಯಿತು ಎಂಬ ವಿವರಣೆಯನ್ನು ಮಾಡದೆ, ಮಾನವೀಯತೆಯ ದೃಷ್ಟಿಯಿಂದ ರಾಜ್ಯ ಸರಕಾರದಿಂದ ಪರಿಹಾರವನ್ನು ನೀಡುತ್ತೇವೆ ಎಂದು ಉಸ್ತುವಾರಿ ಸಚಿವರು ಘೋಷಿಸುವ ಮೂಲಕ ಇದೊಂದು ಕೋಮು ಘರ್ಷಣೆ ಎಂಬ ತೀರ್ಮಾನವನ್ನು ನೀಡಿದಂತೆ ಆಗಿದೆ. ಕಾಂಗ್ರೆಸಿನ ಇಂತಹ ಡೋಲಾಯಮಾನ ಪರಿಸ್ಥಿತಿಯಿಂದಾಗಿ ಬಿಜೆಪಿ ಮತ್ತು ಸಂಘ ಪರಿವಾರದ ಆಟಾಟೋಪಗಳು ಹೆಚ್ಚಾಗುತ್ತಿವೆ. 16ರಂದು ವಿರಾಜಪೇಟೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಚರ್ಚ್‌ವೊಂದರ ಪುನರ್ ನಿರ್ಮಾಣ ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸಿದ್ದು ನಗರವು ಒಂದು ರೀತಿಯಲ್ಲಿ ವಾಹನ ದಟ್ಟಣೆಯಿಂದ ಇದ್ದ ವೇಳೆಯಲ್ಲಿ, ಯಾವುದೇ ರೀತಿಯಲ್ಲಿ ಅನುಮತಿ ಪಡೆಯದೆ ಬಿಜೆಪಿಯವರು ನಗರದಲ್ಲಿ 'ವಾಹನದಲ್ಲಿ ತಿರಂಗ ಯಾತ್ರೆ' ಮಾಡುವುದರ ಮೂಲಕ ವಾಹನ ಸಂಚಾರಕ್ಕೆ ಅಡ್ಡಿ ಮಾಡಿದ್ದಾರೆ.


ಸಾಧಾರಣವಾಗಿ ಬೇರೆಯವರು ಇಂತಹ ಚಟುವಟಿಕೆ ಮಾಡಿದರೆ ಅಥವ ಆಡಳಿತಾರೂಢ ಕಾಂಗ್ರೆಸ್ ಪಕ್ಷವೇ ಈ ಕಾರ್ಯಕ್ರಮವನ್ನು ಮಾಡಿದರೆ ಪೊಲೀಸರು ತಮ್ಮ ಅಧಿಕಾರವನ್ನು ಅವರ ಮೇಲೆ ಪ್ರದರ್ಶಿಸುತ್ತಿದ್ದರು. ಬಿಜೆಪಿಯವರು ಯಾವುದೇ ಅನುಮತಿ ಇಲ್ಲದೆ ಕಾರ್ಯಕ್ರಮ ನಡೆಸಿದರೆ ಈ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ಪೊಲೀಸರಿಗೆ ಶಕ್ತಿಯೇ ಇಲ್ಲ. ಕುಶಾಲನಗರದಲ್ಲಿ ಮಸೀದಿಗೆ ಕಲ್ಲು ತೂರಿದ ಪ್ರಕರಣದಲ್ಲಿ ದೂರು ನೀಡುವಾಗ ಯಾರ ಹೆಸರನ್ನೂ ನೀವು ನಮೂದಿಸಬಾರದು. ಕಿಡಿಗೇಡಿಗಳು ಕಲ್ಲನ್ನು ತೂರಿದ್ದಾರೆ ಎಂದು ದೂರಿನಲ್ಲಿ ಬರೆಯಬೇಕು. ಇಲ್ಲದಿದ್ದರೆ ನಿಮ್ಮನ್ನು ಬಳ್ಳಾರಿ ಜೈಲಿಗೆ ಅಟ್ಟಬೇಕಾದೀತು ಎಂಬ ಎಚ್ಚರಿಕೆಯನ್ನು ಪೊಲೀಸ್ ಇಲಾಖೆ ಅಲ್ಪಸಂಖ್ಯಾತರಿಗೆ ನೀಡಿದೆ.

ಪೊಲೀಸ್ ಇಲಾಖೆಯೂ ಶಕ್ತಿ ಇದ್ದ ಕಡೆ ಬಾಗುತ್ತಿದೆ. ಶಕ್ತಿ ಇಲ್ಲದವರ ಮೇಲೆ ದಬ್ಬಾಳಿಕೆ ನಡೆಸುತ್ತಿದೆ. ನಿರ್ವೀರ್ಯ ಕಾಂಗ್ರೆಸಿನಿಂದಲೂ, ನರಸತ್ತ ಪೊಲೀಸರಿಂದಲೂ ಕೊಡಗು ಜಿಲ್ಲೆಯನ್ನು ಕಾಪಾಡುವುದು ಹೇಗೆ ಎಂಬುದು ಪ್ರಜ್ಞಾವಂತರ ಚಿಂತನೆಯಾಗಿದೆ.

■ ಬಿ.ಎನ್. ಮನುಶೆಣೈ

ಭಾಸ್ಕರ್‌ಶೆಟ್ಟಿ ಹತ್ಯೆಯಲ್ಲಿ ಕಾವಿ ಕರಾಮತ್ತು

ಕೊಲೆಗಡುಕರೊಂದಿಗೆ ಶಿರೂರು ಸ್ವಾಮಿ-ಚಂಭಸ್ವಾಮಿಗೆ ಏನು ಸಂಬಂಧ?!



ಉಡುಪಿಯ ಮಲ್ಟಿ ಮಿಲೇನಿಯರ್ ಎನ್‌ಆರ್‌ಐ ಉದ್ಯಮಿ ಭಾಸ್ಕರ್ ಶೆಟ್ಟಿ 'ಕಣ್ಮರೆ'ಯಾಗಿ ಬರೋಬ್ಬರಿ ವಾರ ಮೂರು ಉರುಳಿಹೋಗಿದೆ. ಆದರೆ ಉಡುಪಿಯ ಹೇತ್ಲಾಂಡಿ ಪೊಲೀಸರಿಗೆ ಮಾತ್ರ ಆತ ಬದುಕಿದ್ದಾನೋ ಅಥವಾ ಸತ್ತಿದ್ದಾನೋ ಎಂಬುದೇ ಗಟ್ಟಿಯಾಗಿ ಹೇಳಲಾಗುತ್ತಿಲ್ಲ! ಭಾಸ್ಕರ್ ಶೆಟ್ಟಿಯ ಮಡದಿ ರಾಜೇಶ್ವರಿ, ಮಗ ನವನೀತ್ ತಾವೇ ಆತನ ಕೊಂದು ನಂದಳಿಕೆಯ ಮಾಟಗಾರ ನಿರಂಜನ ಭಟ್ಟನೊಂದಿಗೆ ಸೇರಿ ಹೋಮಕುಂಡದಲ್ಲಿ ಸುಟ್ಟು ಹಾಕಿದ್ದೇವೆಂದು ಖಡಾಖಂಡಿತವಾಗಿ ಹೇಳುತ್ತಿದ್ದಾರೆ. ಪೊಲೀಸರಿಗ್ಯಾಕೋ ಭಾಸ್ಕರ್ ಶೆಟ್ಟಿಯ ಒಂದೇ ಒಂದು ಮೂಳೆಯ ಚೂರೂ ಸಂಗ್ರಹಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಈ ನಿಗೂಢ ನಾಪತ್ತೆ ಪ್ರಕರಣದ ಸುತ್ತ ಕಾಂಚಾಣ, ಕಾಮ, ಕಾವಿಗಳೆಲ್ಲ ಸುತ್ತಿಕೊಂಡು ದಿನಕ್ಕೊಂದು ಆಯಾಮ ಪಡೆದುಕೊಳ್ಳುತ್ತಲೇ ಇದೆ....

ಶೆಟ್ಟಿ ಕಣ್ಮರೆ

ಕಳೆದ ಜುಲೈ ತಿಂಗಳ 28ರ ಮಧ್ಯಾಹ್ನ ಭಾಸ್ಕರ್ ಶೆಟ್ಟಿ ಸ್ನಾನಕ್ಕೆಂದು ತನ್ನ ಇಂದ್ರಾಳಿಯ ಬಂಗಲೆಗೆ ಹೋಗಿದ್ದಾನೆ. ಅಂದೇ ಸಂಜೆ ನಾಲ್ಕು ಗಂಟೆ ಸುಮಾರಿಗೆ ಆತ ಸಂಬಂಧ ಕೆಟ್ಟುಹೋಗಿದ್ದ ಹೆಂಡತಿ ರಾಜೇಶ್ವರಿ ಮತ್ತು ಶಿಷ್ಯಕ ದೊಡ್ಡಣ ಗುಡ್ಡೆಯ ಭಾಸ್ಕರ್ ಶೆಟ್ಟಿಯ ಹೆಸರಿಗಿದ್ದ ತನ್ನ ಆಸ್ತಿ-ಉದ್ಯಮ ಕಾನೂನುಬದ್ಧವಾಗೇ ಹಸ್ತಾಂತರಿಸಿಕೊಳ್ಳಲು ನಿರ್ಧರಿಸಿದ್ದ. ಇದು ಮುನಿಸಿಕೊಂಡಿದ್ದ ಹೆಂಡತಿ-ಮಗ-ಶಿಷ್ಯ ಮತ್ತು ಪ್ರೀತಿಯ ತಾಯಿ-ತಂಗಿ-ಬಂಧುಗಳಿಗೆಲ್ಲ ಗೊತ್ತಿತ್ತು. ಇಂಥ ಮಹತ್ವದ ದಿನವೇ ಇದ್ದಕ್ಕಿದ್ದಂತೆ ಭಾಸ್ಕರ್ ಶೆಟ್ಟಿ ನಾಪತ್ತೆಯಾಗಿಬಿಟ್ಟ.

ಒಬ್ಬ ಸಂಸಾರಸ್ಥ ನಾಪತ್ತೆಯಾದಾಗ ಪೊಲೀಸರಿಗೆ ದೂರು ಕೊಡಬೇಕಾದ್ದು ಆತನ ಹೆಂಡತಿ ಅಥವಾ ಮಗ ತಾನೆ? ಆದರೆ ಈ ಕೇಸಲ್ಲಿ ಹಾಗಾಗುವುದೇ ಇಲ್ಲ, ಹೆಂಡತಿ-ಮಗ ಏನೂ ಆಗದಂತೆ ಆರಾಮಾಗಿದ್ದು ಬಿಡುತ್ತಾರೆ. ಕೇಳಿದವರಿಗೆ ಆತ ಆಗಾಗ ಬಹರೇನ್‌ದಿಂದ ಬಂದು ಹೋಗುತ್ತಿದ್ದ. ಬರುವಾಗಲೂ ಹೇಳುತ್ತಿರಲಿಲ್ಲ, ಹೋಗುವಾಗಲೂ ಹೇಳಿದ್ದಿಲ್ಲ. ದುಬೈಗೇ ಹೋಗಿರಬೇಕು ಎಂದು ತೀರಾ ಉಡಾಫೆಯಿಂದ ಹೇಳತೊಡಗಿದರು. ಆಗ ಭಾಸ್ಕರ್ ಶೆಟ್ಟಿ ಹೆತ್ತಮ್ಮನ ಕರುಳು ಚುರ್‌ಗುಟ್ಟಿದೆ. ಆಕೆಗೆ ಸೊಸೆ-ಮೊಮ್ಮಗ ಮಗನಿಗೆ ಕಡುವೈರಿಗಳಂತಾಗಿರುವುದು ಗೊತ್ತಿತ್ತು. ಗುಲಾಬಿ ಶೆಟ್ಟಿಗೆ ಸೊಸೆ-ಮೊಮ್ಮಗನ ಮೇಲೆ ಸಂಶಯ ಶುರುವಾಯಿತು. ಆಕೆ ಮಣಿಪಾಲ ಪೊಲೀಸ್ ಠಾಣೆಯಲ್ಲಿ ಸೊಸೆ-ಮೊಮ್ಮಗನ ಗ್ಯಾಂಗಿನ ಮೇಲೆ ಕಂಪ್ಲೇಂಟು ಕೊಟ್ಟರು.

ಪೊಲೀಸರ ಪಾತಕ

ಯಾವಾಗ ಇಳಿವಯಸ್ಸಿನ ಗುಲಾಬಿ ಶೆಟ್ಟಿ ತನ್ನ ಮಗನನ್ನು ಹುಡುಕಿ ಕೊಡಿಯೆಂದು ಕಂಪ್ಲೇಂಟು ಕೊಟ್ಟರೋ, ಆಗ ಪೊಲೀಸರು ಕಂಗಾಲು ಬಿದ್ದರು; ಸ್ವಯಂಘೋಷಿತ ಸಿಂಗಮ್ 'ಖ್ಯಾ'ತಿಯ ಎಸ್‌ಪಿ ಸಾಹೇಬ ಅಣ್ಣಾಮಲೈ ಮತ್ತು ಮಣಿಪಾಲ ಪೊಲೀಸ್ ಇನ್ಸ್‌ಪೆಕ್ಟರ್ ಗಿರೀಶ್ ಮುಖ ಕಿವುಚಲು ಶುರುವಾಯಿತು. ಭಾಸ್ಕರ್ ಶೆಟ್ಟಿ ಸತ್ತಿಲ್ಲ, ಆತನ ಚಪ್ಪಲಿ, ಇಂಡಿಕಾ ಕಾರು ಇದೆ ಎಂದು ಎಸ್ಪಿ ಸಬೂಬು ಹೇಳುತ್ತ ದಿನ ಕಳೆದರು. ಆ ತಾಯಿ ಗೋಳೋ ಎಂದು ಬಿದ್ದು ಬಿದ್ದು ಅಳುತ್ತಿದ್ದರೂ ಪೊಲೀಸ್ ಮಾತ್ರ ಭಾಸ್ಕರ್ ಶೆಟ್ಟಿ ಕಣ್ಮರೆ ಕೇಸನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಪೊಲೀಸರಿಗೆ ಭಾಸ್ಕರ್ ಶೆಟ್ಟಿ ಮಿಸ್ಸಿಂಗ್ ತನಿಖೆಯೇ ಬೇಡವಾಗಿತ್ತು. ಉಡುಪಿ ಪೊಲೀಸ್ ಬ್ಲಾಗ್‌ನಲ್ಲಿ ಪ್ರಕಟವಾದ ಮಿಸ್ಸಿಂಗ್ ಪ್ರಕಟಣೆಯೊಂದೇ ಸಾಕು ಭಾಸ್ಕರ್ ಶೆಟ್ಟಿ ಕೇಸನ್ನು ಹಳ್ಳ ಹಿಡಿಸುವ ತಯಾರಿ ಪೊಲೀಸರು ಮೊದಲೇ ಮಾಡಿಕೊಂಡಿದ್ದರೆಂಬುದನ್ನು ನಿರೂಪಿಸಲು. ಬ್ಲಾಗಿನಲ್ಲಿ "ಭಾಸ್ಕರ್ ಶೆಟ್ಟಿ ಎಂಬಾತ ಕಣ್ಮರೆ ಆಗಿದ್ದಾನೆ" ಎಂದಷ್ಟೇ ಪ್ರಕಟಿಸಲಾಗಿತ್ತು. ಅನಾಮತ್ತು 300 ಕೋಟಿಯ ಒಡೆಯ, ಎನ್‌ಆರ್‌ಐ ಉದ್ಯಮಿ ಭಾಸ್ಕರ್ ಶೆಟ್ಟಿಯನ್ನು ತಿರುಬೋಕಿಯಂತೆ ಚಿತ್ರಿಸಿ ಬ್ಲಾಗ್‌ನಲ್ಲಿ ಪ್ರಕಟಣೆ ಹೆಣೆಯಲಾಗಿತ್ತು. ಕಾಣೆಯಾದ ಭಾಸ್ಕರ್ ಶೆಟ್ಟಿಯ ಪೂರ್ವಾಪರ ಬ್ಲಾಗಲ್ಲಿ ಬುದ್ಧಿಪೂರ್ವಕವಾಗೇ ಪೊಲೀಸ್ ಪಾತಕಿಗಳು ಹಾಕಿರಲಿಲ್ಲ. ಆ ಹಂತದಲ್ಲೇ ಉಡುಪಿಗಷ್ಟೇ ಅಲ್ಲ, ಇಡೀ ಕರಾವಳಿಯಲ್ಲಿ ಭಾಸ್ಕರ್ ಶೆಟ್ಟಿ ಮರ್ಡರ್‌ನಲ್ಲಿ ಪೊಲೀಸರ ಕೈವಾಡವೂ ಇರುವ ಬಗ್ಗೆ ಅನುಮಾನಗಳು ಭುಗಿಲೆದ್ದು ಬಿಟ್ಟವು.

ಕೈಕಟ್ಟಿ ಕೂತ ಎಸ್ಪಿ

ಅಣ್ಣಾಮಲೈ ಎಸ್ಪಿಯಾಗಿ ಬಂದಾಗಿಂದ ಖಡಕ್, ಲಂಚ-ವಶೀಲಿಗೆ ಮಣಿಯದ ಐಪಿಎಸ್ ಎಂದೇ ಜನಜನಿತನಾಗಿದ್ದ. ಆತ ಅನೇಕ ಅಕ್ರಮಕ್ಕೆ ಕಡಿವಾಣ ಹಾಕಿದ್ದರು. ಕ್ಲಿಷ್ಟವಾದ ಕೊಲೆ ಕೇಸನ್ನು ಶೀಘ್ರವಾಗಿ ಬೇಧಿಸಿದ್ದ. ಜೂಜು-ಹಾದರದವರಿಗೆ ಸಿಂಹಸ್ವಪ್ನವೇ ಆಗಿದ್ದ. ಜನರು 'ಸಿಂಗಮ್' ಎಂದೇ ಅಣ್ಣಾಮಲೈಗೆ ಬಿರುದು ಕೊಟ್ಟು ಕೊಂಡಾಡುತ್ತಿದ್ದರು. ಇಂಥ ಅಣ್ಣಾಮಲೈ ವರ್ಷಾನುಗಟ್ಟಲೆ ಗಳಿಸಿದ ಹೆಸರನ್ನು ವರ್ಗವಾಗಿ ಚಿಕ್ಕಮಗಳೂರಿಗೆ ಹೋಗುವ ಮೊದಲಿನ ಮೂರ್ನಾಲ್ಕು ದಿನದಲ್ಲಿ ಹಾಳು ಮಾಡಿಕೊಂಡು ಹೋದರು!!

ಚಿಕ್ಕಮಗಳೂರಿಗೆ ಅಣ್ಣಾಮಲೈ ತರಾತುರಿಯಲ್ಲಿ ಹೋಗಿದ್ದು ಆಗಸ್ಟ್ ಒಂದರಂದು. ಅಂದರೆ ಬರೋಬ್ಬರಿ ನಾಲ್ಕು ದಿನ ಭಾಸ್ಕರ್ ಶೆಟ್ಟಿ ಮಿಸ್ಸಿಂಗ್ ಫೈಲ್ 'ಸೂಪರ್‌ಕಾಪ್' ಅಣ್ಣಾಮಲೈ ಕೈಯ್ಯಲ್ಲೇ ಇತ್ತು. ಆದರೆ ಆ ತನಿಖೆ ಬಗ್ಗೆ ಆತನಿಗೆ ಆಸಕ್ತಿ ಒಂಚೂರು ಇರಲಿಲ್ಲ. ಆತ ಕೈಕಟ್ಟಿಕೊಂಡು ನಾಲ್ಕು ದಿನ ಕಳೆದಿದ್ದಾನೆ. ಸ್ಥಳೀಯ ಜನಪರ ಕಳಕಳಿಯ ಟಿವಿ ಚಾನೆಲ್ 'ಸ್ಪ್ರೈಮ್ ಟಿವಿ'ಯಲ್ಲಿ ಮಿಸ್ಸಿಂಗ್ ಆಗಿರುವ ಭಾಸ್ಕರ್ ಶೆಟ್ಟಿ ಸಾಮಾನ್ಯನಲ್ಲ; ಆತ ಕೋಟ್ಯಾಧಿಪತಿ ಎನ್‌ಆರ್‌ಐ ಉದ್ಯಮಿ ಎಂದು ಸುದ್ದಿ ಬ್ರೇಕ್ ಮಾಡಿದಾಗ ಅಣ್ಣಾಮಲೈ ಗಡಿಬಿಡಿಗೆ ಬಿದ್ದಿದ್ದಾನೆ. ಚುರುಕಾದಂತೆ ನಾಟಕವಾಡಿದ್ದಾನೆ.

ಭಾಸ್ಕರ್ ಶೆಟ್ಟಿ ತಾಯಿ ತನ್ನ ಮಗ ಕಾಣೆಯಾಗಲು ಸೊಸೆ-ಮೊಮ್ಮಗನೇ ಕಾರಣವೆಂದು ಗೋಳಿಟ್ಟಾಗ ತನಿಖೆ ಮಾಡುವ ಭರವಸೆ ಕೊಟ್ಟಿದ್ದಾನೆ. ಆದರೆ ಯಾವ ಕಾರಣಕ್ಕೂ ಮೀಡಿಯಾದ ಮುಂದೆ ಹೋಗಬೇಡಿ ಎಂದು ಅವಲತ್ತುಕೊಂಡಿದ್ದಾನೆ. ಯಾಕೆ?

ಹೇಗೆ ಹೇಗೋ ನಾಲ್ಕು ದಿನ ಉಡುಪಿಯಲ್ಲಿ ಕಳೆದ ಅಣ್ಣಾಮಲೈ ಆಗಸ್ಟ್ 1ರಂದು ಎಎಸ್‌ಪಿ ಕೈಗೆ ಚಾರ್ಜ್ ಕೊಟ್ಟು ತರಾತುರಿಯಲ್ಲಿ ಚಿಕ್ಕಮಗಳೂರಿಗೆ ಓಡಿದ್ದಾನೆ.





ಪೊಲೀಸರ ಪೀಕಲಾಟ

ಎಸ್ಪಿ ಅಣ್ಣಾಮಲೈ ಚಿಕ್ಕಮಗಳೂರಿಗೆ ಹೋಗುತ್ತಲೇ ಇತ್ತ ಉಡುಪಿಯಲ್ಲಿ ಭಾಸ್ಕರ್ ಶೆಟ್ಟಿ ಕಣ್ಮರೆ ಕೇಸಿಗೆ ಭರ್ಜರಿ ಕಾವೇರಿ ಬಿಟ್ಟಿತು. ಭಾಸ್ಕರ್ ಶೆಟ್ಟಿ ತಾಯಿ ತನಿಖೆ ದಿಕ್ಕು ತಪ್ಪುತ್ತಿದೆ; ತನ್ನ ಮಗನನ್ನು ಸೊಸೆ-ಮೊಮ್ಮಗನೇ ಕೊಂದಿರುವ ಸಾಧ್ಯತೆಯಿದೆ. ಹಾಗಂತ ನಾನು ದೂರು ಕೊಟ್ಟರೂ ತನಿಖಾಧಿಕಾರಿ ಗಿರೀಶ್ ಆರೋಪಿಗಳೊಂದಿಗೆ ಸರಸ-ಚಕ್ಕಂದ ಆಡುತ್ತಿದ್ದಾನೆಂದು ನೇರಾನೇರವಾಗಿ ಜಿಲ್ಲಾ ಮಂತ್ರಿ ಪ್ರಮೋದ್ ಮಧ್ವರಾಜ್ ಎದುರು ಹೇಳಿದರು. ತನಿಖಾಧಿಕಾರಿ ಗಿರೀಶ್ ಠಾಣೆಯಲ್ಲಿ ರಾಜೇಶ್ವರಿ ಮತ್ತಾಕೆಯ ಮಗ ನವನೀತ್‌ಗೆ ರಾಜಮರ್ಯಾದೆ ಕೊಡುವುದು, ಸರ್ಕಾರಿ ಜೀಪಲ್ಲಿ 'ಪಿಐ ಸೀಟ'ಲ್ಲೇ ಅವರನ್ನು ಕೂಡ್ರಿಸಿಕೊಂಡು ಠಾಣೆಗೆ ಒಯ್ಯುವ, 'ಕುಶಲ' ವಿಚಾರಿಸಿ ಕಳಿಸೋದೆಲ್ಲ ಭಾಸ್ಕರ್ ಶೆಟ್ಟಿ ಬಂಧುಗಳು ಜಿಲ್ಲಾ ಉಸ್ತುವಾರಿ ಮಂತ್ರಿಗೆ ಅರುಹಿದರು.


ಇದರಿಂದ ಕೆರಳಿದ ಮಂತ್ರಿ ಪ್ರಮೋದ್ ಸರಿಯಾದ ತನಿಖೆ ನಡೆಸುವಂತೆ ಹೊಸ ಎಸ್ಪಿಗೆ ತಾಕೀತು ಮಾಡಿದರು. ಆಗ ಶುರುವಾಯ್ತು ಪೊಲೀಸರ ಪೀಕಲಾಟ. ಭಾಸ್ಕರ್ ಶೆಟ್ಟಿ ಹೆಂಡತಿ ರಾಜೇಶ್ವರಿ, ಮಗ ನವನೀತ್ ಮತ್ತು ನಂದಳಿಕೆಯ ನೀಚ ಮಂತ್ರವಾದಿ ನಿರಂಜನ್ ಭಟ್ಟನ ಮೇಲೆ ಅನಿವಾರ್ಯವಾಗಿ ಕೇಸು ಜಡಿಯಬೇಕಾಗಿ ಬಂತು ಪೊಲೀಸರಿಗೆ. ಆರೋಪಿಗಳನ್ನು ಬಂಧಿಸಿ ನ್ಯಾಯಾಲಯ[ಕ್ಕೆ] ಹಾಜರುಪಡಿಸಿದ ನಂತರವೂ ಪೊಲೀಸರಿಗೆ ಪಾತಕಿಗ[ಳ] ಬಗೆಗಿನ ಮಮಕಾರ ಕಡಿಮೆ ಆಗಲಿಲ್ಲ. ನಿರಂಜನ ಭಟ್ಟ[ನ] ಮನುಷ್ಯರ ಸುಡುವ ಹೋಮಕುಂಡದ ಪರಿಶೀಲನೆಗೆಂದ[ು] ಆರೋಪಿಗಳನ್ನು ನಂದಳಿಕೆಗೆ ಕರೆದೊಯ್ಯುವಾ[ಗ] ತನಿಖಾಧಿಕಾರಿ ಗೌರವಾನ್ವಿತ ಆಸನದ ಜೀಪನ್ನು ಒದಗಿಸಿ[ದ]. ತಾನು ಹಿಂದೆ ಕುಳಿತಿದ್ದ. ಮಧ್ಯಾಹ್ನ ನಂದಳಿಕೆ ಬಳಿ[ಯ] ನಿಟ್ಟೆಯ 'ಫಾರ್ ಎವರ್' ಎಂಬ ಹೊಟೇಲಿನಲ್ಲಿ ಭರ್ಜ[ರಿ] ಮೀನೂಟ ರಾಜೇಶ್ವರಿ-ನವನೀತ್‌ನಿಗೆ ಪಿಐ ಗಿರೀಶ[್] ಹಾಕಿಸಿದ್ದಾನೆ. ಅಷ್ಟೇ ಅಲ್ಲ ಒಂದು ರೂಮ್ ಬು[ಕ್] ಮಾಡಿ ಒಂದೆರಡು ತಾಸು ವಿಶ್ರಾಂತಿಗೆ ಅವಕಾ[ಶ] ಮಾಡಿಕೊಟ್ಟಿದ್ದಾನೆ. ರಾಜೇಶ್ವರಿಗೆ ದಿನವೂ ಬಟ್ಟೆ ಬದಲಿಸಲು ಇಂದ್ರಾಳಿ ಮನೆಗೆ ಕರೆದುಕೊಂಡು ಹೋಗುವ 'ಗು[...] ಸೇವೆ ಪೊಲೀಸರು ಮಾಡುತ್ತಲೇ ಇದ್ದಾರೆ. ಒಟ್ಟಿನ[ಲ್ಲಿ] ಕೊಲೆಗಡುಕರಿಗೆ ಯಾವ ತೊಂದರೆ-ಕಿರಿಕಿರಿ ಆಗದಂ[ತೆ] ಪೊಲೀಸರು ನಿಗಾ ವಹಿಸಿದ್ದಾರೆ! ಪಿಐ ಗಿರೀಶನ ರಾಜೇಶ್ವ[ರಿ] ಸೇವೆ ಟಾಕ್ ಆಫ್ ದಿ ಟೌನ್ ಆಗಿದೆ. ಹೀಗಾಗಿ ಪಿ[ಐ] ಸ್ಥಾನದಿಂದ ಗಿರೀಶನ ತೆಗೆದು ಎಎಸ್‌ಪಿ ಸುಮನಾ[...] ವಹಿಸಲಾಗಿದೆ.

ಡೀಲ್ ಬಾಲ

ಎತ್ತಿಂದೆತ್ತ ತಾಳೆ ಹಾಕಿ ತರ್ಕ ಮಾಡಿದರೂ ಭಾಸ್ಕ[ರ್] ಶೆಟ್ಟಿ ಮಿಸ್ಸಿಂಗ್ ಅಂಡ್ ಮರ್ಡರ್ ಸ್ಕೆಚ್‌ನಲ್ಲಿ ಪೊಲೀಸ[ರು] ಶಾಮೀಲಾಗಿದ್ದಾರೆಂಬುದು ಎಂಥವರಿಗೂ ಅರ್ಥವಾಗುತ್ತ[ದೆ.] ಈಗ ಉಡುಪಿಯಲ್ಲಿ ಹರಿದಾಡುತ್ತಿರುವ ಸುದ್ದಿಗಳ ಪ್ರಕಾ[ರ] ಇದು ಬರೋಬ್ಬರಿ ಎರಡು ಕೋಟಿ ಡೀಲು!! ಉಡುಪಿ[...] ಪೊಲೀಸ್ ವಲಯದಲ್ಲಿ ಹೆಸರುವಾಸಿ ದಲ್ಲಾಳಿ ಆಗಿರು[ವ] ನಿಟ್ಟೂರಿನ ದೋ ನಂಬರ್ ಮರದ ವ್ಯಾಪಾರಿ ಬಾಲಕೃ[ಷ್ಣ] ಶೆಟ್ಟಿ ಈ ಡೀಲು ಕುದುರಿಸಿರುವ ಪ್ರಚಂಡ. ಪೊಲೀ[ಸ್] ಅಧಿಕಾರಿಗಳ ದೌರ್ಬಲ್ಯ ಅರ್ಥಮಾಡಿಕೊಂಡು ಅವರಿ[ಗೆ] ಏನೇನು ಬೇಕು ಅದೆಲ್ಲ ಸಪ್ಲೈ ಮಾಡಿ ಪಳಗಿಸಿಕೊಳ್ಳು[ವ] ಖತರ್‌ನಾಕ್ ಬಾಲಕೃಷ್ಣ ಶೆಟ್ಟಿ ಮಣಿಪಾಲ ಪಿ[ಐ] ಗಿರೀಶ್‌ನನ್ನು ನಡುವೆ ಇಟ್ಟುಕೊಂಡು ಪೊಲೀಸರನ್[ನು] ತನ್ನ ದಾರಿಗೆ ತಂದುಕೊಂಡಿದ್ದಾನೆ.

ಭ್ರಷ್ಟ-ದುಷ್ಟ ಪೊಲೀಸ್ ಅಧಿಕಾರಿಗಳ ಸಖ್ಯದಿಂ[ದ] ಠಾಣೆಗಳಲ್ಲಿ ಲೇವಾದೇವಿ ದಂಧೆ ನಡೆಸುವ ಬಾಲಕೃ[...]







ದೃಶ್ಯಂ!!

ದೇಹದಾಹ-ಧನದಾಹದ ಸೈಕೋಪಾತ್ ರಾಜೇಶ್ವರಿ ಮತ್ತಾಕೆಯ ಗೆಳೆಗಾರ-ಮಾಟಗಾರ ನಿರಂಜನ ಭಟ್ಟ ತನಿಖೆಯ ದಾರಿ ತಪ್ಪಿಸುತ್ತಿದ್ದಾರೆ. ಅರೆಸ್ಟ್ ಆದ ಕ್ಷಣದಿಂದಲೇ ಭಾಸ್ಕರ್ ಶೆಟ್ಟಿ ಕಣ್ಣಿಗೆ ಪೆಪ್ಪರ್ ಸ್ಪ್ರೇ ಹಾಕಿ ನೆಲಕ್ಕುರುಳಿದಾಗ ರಾಡ್‌ನಿಂದ ತಲೆ ಒಡೆದು ಕೊಲೆ ಮಾಡಿದ್ದೇವೆ. ನಂತರ ನಂದಳಿಕೆಯ ಭಟ್ಟನ ಹೋಮ ಕುಂಡದಲ್ಲಿ ಹಾಕಿ ಸುಟ್ಟಿದ್ದೇವೆ. ಬೂದಿ ಹತ್ತಿರದ ತೊರೆಯಲ್ಲಿ ಚೆಲ್ಲಿದ್ದೇವೆ ಎಂದು ಗಿಣಿ ಪಾಠ ಒಪ್ಪಿಸಿದಂತೆ ಹೇಳುತ್ತಿದ್ದಾರೆ.

ಈ ಸ್ಕೆಚ್‌ನಂತೆ ಮರ್ಡರ್ ಮಾಡಿದ್ದರೆ ಒಂದೇ ಒಂದು ಎಲುಬಿನ ಚೂರು ಸಿಕ್ಕೇ ಸಿಗುತ್ತಿತ್ತು, ಬರೀ 30 ಲೀಟರ್ ಪೆಟ್ರೋಲ್, ಕೆಜಿಗಟ್ಟಲೆ ಕರ್ಪೂರ, ತುಪ್ಪದಿಂದ ದೈತ್ಯದೇಹಿ ಭಾಸ್ಕರ್ ಶೆಟ್ಟಿಯನ್ನು ಬೂದಿ ಮಾಡಲು ಸಾಧ್ಯವಾ? ಹೆಣದ ಅವಶೇಷ ಸಿಗದೆ ಕೇಸ್ ಸಿದ್ಧ ಮಾಡಲು ಸಾಧ್ಯವಾಗದು-ಹಾಗಾಗಿ ಹೆಣವನ್ನು ಎಲ್ಲೋ ಹೂಳಲಾಗಿದೆ ಅಥವಾ ಸಮುದ್ರಕ್ಕೆ ಎಸೆಯಲಾಗಿದೆ ಇಲ್ಲವೇ ಎಲ್ಲಾದರೂ ದುರ್ಗಮ ಕಣಿವೆಯಲ್ಲಿ ಹಾಕಲಾಗಿದೆ ಎಂದು ತಜ್ಞರು ತರ್ಕಿಸುತ್ತಿದ್ದಾರೆ. ಹೆಣ ಸಿಗದಂತೆ ಮಾಡುವುದೇ ಪಾಪಿಗಳ ಗುರಿ!!

ಇತ್ತ ಪೊಲೀಸರಿಗೆ, ಜನರಿಗೆ ದಾರಿ ತಪ್ಪಿಸಲು ಹೋಮದ ಕಟ್ಟುಕತೆ ಹೇಳಲಾಗುತ್ತಿದೆ. ಥೇಟ್ ದೃಶಂ ಸಿನಿಮಾದ ಕತೆಯಂತೆಯೇ ಭಾಸ್ಕರ್ ಶೆಟ್ಟಿ ಮರ್ಡರ್ ಮಿಸ್ಟರಿ ಹಂದರ ರಚನೆಯಾಗಿದೆ. ಕೊಲೆ ಹೇಗೆ ಮಾಡಲಾಗಿಲ್ಲವೋ ಅದರ ಕೊಲೆಯ ರೀತಿ ಎಂದು ದೃಶ್ಯಂ ಸಿನಿಮಾದ ಆರಂಭದಲ್ಲಿ ನಿರೂಪಿಸುತ್ತಾರೆ ಕೊಲೆಗಡುಕರು. ವಾಸ್ತವವೇ ಬೇರೆಯಿರುತ್ತದೆ. ರಾಜೇಶ್ವರಿ ಮತ್ತಾಕೆಯ ಹಿಂದಿರುವ ಸಂಚುಗಾರರು ದೃಶ್ಯಂ ಸೂತ್ರದಂತೆ ಆಟ ಆಡುತ್ತಿದ್ದಾರಾ? ಇಂಥದೊಂದು ಅನುಮಾನ ಈಗ ಪೊಲೀಸ್‌ರಿಗೂ ಬಂದಿದೆ.



ು ಹೆಂಡತಿ ರಶ್ಮಿತಾ ಶೆಟ್ಟಿ ನಿಟ್ಟೂರು ಭಾಗದ ಿಯ ನಗರಸಭಾ ಸದಸ್ಯೆ. ಹೆಂಡತಿಯ ಜನಪ್ರತಿನಿಧಿತ್ವ ಚಲಾಯಿಸುವ ಈ ಕ್ರಿಮಿನಲ್ ಕಿಂಗ್ ಕೊಲೆಗಡುಕಿ ಶ್ವರಿಯ ಅಕ್ಕನ ಗಂಡ ದೊಡ್ಡಣ್ಣ ಗುಡ್ಡೆಯ ಬಿಲ್ಡರ್ ರ್ ಶೆಟ್ಟಿಯ ಖಾಸಾ ತಂಗಿ ಮಗ. ಈ ಮಾವ- ಸೇರಿ ಫಿಟ್ಟಿಂಗ್ ಇಟ್ಟದ್ದಕ್ಕೆ ಲೆಕ್ಕವೇ ಇಲ್ಲ. ಮೈದಿನಿ ಶ್ವರಿಯ ಗಂಡನ ಕೋಟಿಗಳ ಆಸ್ತಿ ಮೇಲೆ ಕಣ್ಣಿಟ್ಟಿದ್ದ ಭಾಸ್ಕರ್ ಶೆಟ್ಟಿ ಅಳಿಯ ಡೀಲ್ ಬಾಲುನ ದಿಟ್ಟ ಪೊಲೀಸರನ್ನು ಒಲಿಸಿಕೊಂಡಿದ್ದ.

ಸೂತ್ರಧಾರ ಬಿಲ್ಡರ್ ಭಾಸ್ಕರ್

ಾಸ್ಕರ್ ಶೆಟ್ಟಿಯನ್ನು ಆತನದೇ ಹೆಂಡತಿ-ಮಗನಿಂದ ಸಿ ಹಣವೂ ಸಿಗದಂತೆ ಮಾಡಿದ ತಂತ್ರಗಾರ ಬಿಲ್ಡರ್ ರ್ ಶೆಟ್ಟಿ! ದುಬೈ-ಬ್ರಹರೇನ್-ಸೌದಿಗಳಲ್ಲಿ ಕೋಟಿ- ಿ ಕಮಾಯಿಸಿ ಉಡುಪಿಯಲ್ಲಿ ಹೂಡಿಕೆ ಮಾಡುತ್ತಿದ್ದ

ರಶ್ಮೀತಾ ಬಿಜೆಪಿ ಕೌನ್ಸಿಲರ್ ಉಡುಪಿ




ರ್ ಶೆಟ್ಟಿಯ ನಾಮಬಲದ ಲಾಭ, ಅದೇ ಹೆಸರಿನ ಕುತಂತ್ರಿ ಲಾಗಾಯ್ತಿನಿಂದ ಪಡೆಯುತ್ತ ಬಂದಿದ್ದಾನೆ. ಶ್ವರಿಗೆ ಈ ಭಾವನೆಂದರೆ ಮೊದಲಿನಿಂದಲೂ ಒಂಥರಾ. ಅಷ್ಟೇ ಅಲ್ಲ ಇತ್ತೀಚೆಗೆ ಬಿಲ್ಡರ್ ಆಗಿ ಅವತರಿಸಿರುವ ಾಸ್ಕರ್ ಶೆಟ್ಟಿ ಮೈದಿನಿಯನ್ನು ತನ್ನ ಅತ್ಯಾಪ್ತ ಖಾಕಿ, ಕಾಸುಗಾರರ ಬಳಿಯೂ ಕಳಿಸಿ ಕಾರ್ಯ ಿಕೊಂಡಿದ್ದಾನೆ. ಹಾಗಂತ ಆತನ ಬಿಸ್ನೆಸ್ ಗ್ರಾಪು ವರು ರಸವತ್ತಾಗಿ ಹೇಳುತ್ತಾರೆ.

ಂದು ಕಾಲದಲ್ಲಿ ಉಡುಪಿಯ ರಥಬೀದಿಯಲ್ಲಿ ೀ ಓಡಿಸುತ್ತಿದ್ದ ಭಾಸ್ಕರ್ ಶೆಟ್ಟಿ ರಾಜೇಶ್ವರಿಯ ವದಿಂದ ಶಡ್ಡಕನ ಉಡುಪಿಯ ಆಸ್ತಿ-ವಹಿವಾಟಿನ ್ತವಾರಿಯಾಗಿದ್ದ. ಭಾವ-ಮೈದಿನಿ ಕೂಡಿಕೊಂಡು ು ಲಫಡಾ ಮಾಡುತ್ತಿದ್ದರೋ ಏನೋ ಪ್ರತಿ ವರ್ಷವೂ ಾರದಲ್ಲಿ ಹಾನಿ ಎಂದು ಭಾಸ್ಕರ್ ಶೆಟ್ಟಿಗೆ ಲೆಕ್ಕಪತ್ರ ಿಸುತ್ತಿದ್ದರು. ಹೆಂಡತಿ-ಶೆಡ್ಡಕರ ಗೋಲ್‌ಮಾಲ್- ಡಾಂಗ್‌ನಿಂದ ಭಾಸ್ಕರ್ ಶೆಟ್ಟಿ ರೋಸಿಹೋಗಿದ್ದ. ನವನೀತನೂ ತನ್ನ ವಿರುದ್ಧ ತಿರುಗಿಬೀಳಲು ಭಾಸ್ಕರ್ ು ಕಿತಾಪತಿಯೇ ಕಾರಣ ಎಂಬುದೂ ಆತನಿಗೆ ಯಾಗಿತ್ತು, ಜತೆಗೆ ನಂದಳಿಕೆಯ ಮಾಟಗಾರ ನಿರಂಜನ ಜತೆ ಹೆಂಡತಿ ರಾಸಲೀಲೆ ನಡೆಸುತ್ತಿದ್ದುದನ್ನು ಕಣ್ಣಾರೆ ದ್ದ ಭಾಸ್ಕರ್ ಶೆಟ್ಟಿ ಸಂಬಂಧ ಕಡಿದುಕೊಳ್ಳಲು ನಾಲ್ಕಾರು ಿಂದಲೇ ಪ್ರಯತ್ನ ನಡೆಸಿದ್ದರು.

ಹೆಂಡತಿ ಹಾಗು ಶಡ್ಡಕನ ಹೆಸರಲ್ಲಿದ್ದ ತನ್ನೆಲ್ಲ ಆಸ್ತಿ-ವ್ಯವಹಾರಗಳನ್ನು ಮರಳಿ ಪಡೆಯಲೆಂದೇ ಈ ಬಾರಿ ಆತ ಬಹರೇನ್‌ನಿಂದ ಉಡುಪಿಗೆ ಬಂದಿದ್ದ. ರಾಜೇಶ್ವರಿ ಜತೆಗೆ ವಿಚ್ಛೇದನ ಮತ್ತು ಆಸ್ತಿ ವಶಕ್ಕೆ ಪಡೆವ ಹಠದಿಂದ ಭಾಸ್ಕರ್ ಶೆಟ್ಟಿ ಊರಿಗೆ ಬರುತ್ತಾನೆಂದು ಕೆರಳಿದ್ದ ಭಾವ-ನಾದಿನಿ ಆತನ ಮುಗಿಸುವ ಸ್ಕೆಚ್ ಹೆಣೆದುಬಿಟ್ಟರು! ಪೊಲೀಸ್ ಅಧಿಕಾರಿಗಳು, ಕಾವಿ ಸ್ವಾಮೀಜಿಗಳು, ಗೃಹಮಂತ್ರಿ ಮೇಲೆ ಪ್ರಭಾವ ಬೀರುವ ಮಂತ್ರವಾದಿಗಳನ್ನೆಲ್ಲ ಸೇರಿಸಿಕೊಂಡು ತುಂಬ ವ್ಯವಸ್ಥಿತವಾಗಿ ಕೊಲೆ ಸಂಚು ರೂಪಿಸಿರುವ ಭಾಸ್ಕರ್ ಶೆಟ್ಟಿ ಶಡಕನ ಹೆಣವಷ್ಟೇ ಅಲ್ಲ ಸುಟ್ಟ ಬೂದಿಯೂ ಸಿಗದಂತೆ ಮಾಡಿದ್ದಾನೆ. ಭಾವ-ಮೈದಿನ ಕಾಮಹೋಮದ ಕುಂಡದಲ್ಲಿ ಭಾಸ್ಕರ್ ಶೆಟ್ಟಿಯನ್ನು ಭಸ್ಮ ಮಾಡಿಬಿಟ್ಟಿದ್ದಾನೆ.

ಶಿರೂರು ಸ್ವಾಮಿ ಸಂಬಂಧ!

ಪಕ್ಕಾ ತಲೆಹಿಡುಕ ಬುದ್ಧಿಯ ಬಿಲ್ಡರ್ ಭಾಸ್ಕರ್ ಶೆಟ್ಟಿ ಮತ್ತು ಶಿರೂರು ಮಠದ ರಸಿಕ ಸ್ವಾಮಿ ಲಕ್ಷ್ಮೀವರ ತೀರ್ಥ ಸ್ವಾಮಿ ಪುರಾತನ ಪರಮ ಮಿತ್ರರು. ಈ ಜೋಡಿಯ ಅಂಟಿದ ನಂಟಿನ ಬಗ್ಗೆ ಉಡುಪಿಯ ರಥಬೀದಿಯಲ್ಲಿ ತಲೆಗೊಂದರಂತೆ ವ್ಯಾಖ್ಯಾನ ಸಿಗುತ್ತದೆ. ಭಾಸ್ಕರ್ ಶೆಟ್ಟಿ ರಿಕ್ಷಾ ಡ್ರೈವರ್ ಆಗಿದ್ದಾಗ ರಥಬೀದಿಯಲ್ಲಿ ರಿಕ್ಷಾ ನಿಲ್ಲಿಸಿಕೊಂಡಿರುತ್ತಿದ್ದ ಆಗ ಲಕ್ಷ್ಮೀವರ ತೀರ್ಥರ ಕೃಪಾದೃಷ್ಟಿಗೆ ಈತ ಬಿದ್ದಿದ್ದಾನೆ. ಸ್ವಾಮಿ ಎಲ್ಲಿಗೇ ಹೋಗುವುದಿದ್ದರೂ ಈತನ ರಿಕ್ಷಾದಲ್ಲೇ ಹೋಗುತ್ತಿದ್ದರು. ಈಗಲೂ ಲಕ್ಷ್ಮೀವರ ತೀರ್ಥ ಹಿರಿಯಡ್ಕದ ಹತ್ತಿರದ ಮೂಲ ಮಠಕ್ಕೆ ಹೋಗುವುದಿದ್ದರೆ ಈ ಭಾಸ್ಕರ್ ಶೆಟ್ಟಿಯ ಐಷಾರಾಮಿ



ಕಾರಲ್ಲೇ ಹೋಗುತ್ತಾರೆ.

ನಾನಾ ನಮೂನೆಯ ದಂಧೆ ಪಾಲುದಾರಿಕೆಯಲ್ಲಿ ನಡೆಸುವಷ್ಟು ಗಾಢವಾಗಿ ಬೆಸೆದುಕೊಂಡಿದೆ ಲಕ್ಷ್ಮೀವರ ಸ್ವಾಮಿ ಮತ್ತು ದಗಾಕೋರ ಭಾಸ್ಕರ್ ಶೆಟ್ಟಿ ಸಂಬಂಧ. ಮಣಿಪಾಲದ 'ಕುಂಡೆಲುಕಾಡು' ಎಂಬಲ್ಲಿ ಶಿರೂರು ಮಠಕ್ಕೆ ಸೇರಿದ ಒಂದಿಷ್ಟು ಜಮೀನಿದೆ. ಅಲ್ಲಿ ಕಾಂಪ್ಲೆಕ್ಸ್ ಕಟ್ಟಿ ಸ್ವಾಮಿ ಬಾಡಿಗೆಗೆ ಕೊಟ್ಟಿದ್ದಾರೆ. ಒಂದಿಷ್ಟು ಜಾಗ ದೋಸ್ತ್ ಭಾಸ್ಕರ್ ಶೆಟ್ಟಿಗೆ ಕೊಟ್ಟಿದ್ದಾರೆ. ಈ ಜಾಗದಲ್ಲೇ ಭಾಸ್ಕರ್ ಶೆಟ್ಟಿ ವಾಣಿಜ್ಯ ಕಟ್ಟಡ ಕಟ್ಟಿದ್ದಾನೆ. ಅಲ್ಲಿ ಮಲ್ಟಿಪ್ಲೆಕ್ಸ್ ಸಿನಿಮಾ ಥಿಯೇಟರ್ ನಡೆಸುತ್ತಿದ್ದಾನೆ. ಅಯೋನೆಕ್ಸ್ ದೊರೆಯಾಗಿ ಭಾಸ್ಕರ್ ಶೆಟ್ಟಿ ಅವತರಿಸಲು ಶಿರೂರು ಮಠದ ಕೃಪೆಯೇ ಕಾರಣ. ಇದು ಸ್ವಾಮಿ-ಶೆಟ್ಟಿ ಜಾಯಿಂಟ್ ವೆಂಚರ್!!



ಈ ಅಯೋನೆಕ್ಸ್ ಕಟ್ಟಡದ ಕೊಠಡಿಯಲ್ಲೇ ಭಾಸ್ಕರ್ ಶೆಟ್ಟಿ ಮರ್ಡರ್ ಯೋಜನೆ ರೂಪುಗೊಂಡಿದೆ ಎಂಬ ಲೆಕ್ಕಾಚಾರ ಪೊಲೀಸರು ಹಾಕಿದ್ದಾರೆ. ಬಿಲ್ಡರ್ ಭಾಸ್ಕರ್ ಶೆಟ್ಟಿ, ಆತನ ಅಳಿಯ ಬಾಲಕೃಷ್ಣ ಶೆಟ್ಟಿ, ಪಿಐ ಗಿರೀಶ್, ರಾಜೇಶ್ವರಿ, ಆಕೆಯ ಮಗ ನವನೀತ್ ಮತ್ತು ಢೋಂಗಿ ಮಂತ್ರವಾದಿ

ನಿರಂಜನ್ ಭಟ್ ಇಲ್ಲಿ ಜಮೆಯಾಗಿ ಭಾಸ್ಕರ್ ಶೆಟ್ಟಿಯನ್ನು ಕೊಲ್ಲುವ ಪ್ಲ್ಯಾನ್ ಹಾಕಿದ್ದಾರೆಂಬ ಅನುಮಾನ ಪೊಲೀಸರಿಗೆ ಬಂದಿದೆ. ಇದು ಇಡೀ ಉಡುಪಿಗೆ ಗೊತ್ತಿರುವ ಸತ್ಯ ಭಾಸ್ಕರ್ ಶೆಟ್ಟಿ ಏನೇ ಮಾಡುವುದಿದ್ದರೂ ಶಿರೂರು ಸ್ವಾಮಿಯ ಬಳಿ ಹೇಳಿಕೊಳ್ಳುತ್ತಾನೆಂದು ಆತನ ಅಂದರ್-ಬಾಹರ್ ಬಲ್ಲವರು ಹೇಳುತ್ತಾರೆ. ಹೀಗಾಗಿ ಪೊಲೀಸರ ಕಣ್ಣೀಗ ಶಿರೂರು ಮಠದ ಮೇಲೆ ಬಿದ್ದಿದೆ. ಇನ್ನೊಂದು ಸುದ್ದಿಯ ಪ್ರಕಾರ ರಾಜೇಶ್ವರಿಯ ಭಾವ ಹೇಳಿದಾಗೆಲ್ಲ ಲಕ್ಷ್ಮೀವರ ತೀರ್ಥರ 'ಆಶೀರ್ವಾದ' ಪಡೆದು ಬರುವ ವಾಡಿಕೆ ಇಟ್ಟುಕೊಂಡಿದ್ದಾರಂತೆ. ಕರಾವಳಿಯಲ್ಲಿ ಭಾಸ್ಕರ್‌ಶೆಟ್ಟಿ-ರಾಜೇಶ್ವರಿ-ಲಕ್ಷ್ಮೀವರತೀರ್ಥ ಸ್ವಾಮಿಯ ತ್ರಿಕೋನ ಗ್ಯಾಂಗಿನ ಬಗ್ಗೆ ರಂಗು-ರಂಗಿನ ಚರ್ಚೆ ನಡೆಯುತ್ತಿದೆ.

ಆತ ವಕೀಲ ಮಟ್ಪಾರು

ಭಾಸ್ಕರ್ ಶೆಟ್ಟಿ ಮರ್ಡರ್ ಮಿಸ್ಟರಿ ಕೆದಕುತ್ತಾ ಹೋದಂತೆ ಉಡುಪಿಯ ಪ್ರತಿಷ್ಠಿತರು-ಪ್ರಭಾವಿಗಳ ಮುಖವಾಡಗಳು ಕಳಚಿ ಬೀಳುತ್ತದೆ. ಜಿಲ್ಲಾ ಬಿಜೆಪಿ ಅಧ್ಯಕ್ಷ ಮಟ್ಪಾರು ರತ್ನಾಕರ ಹೆಗ್ಡೆ ನಡೆ-ನುಡಿ ಭಾಸ್ಕರ್ ಶೆಟ್ಟಿ ಮರ್ಡರ್ ಆಗೋದು ಮೊದಲೇ ಆತನಿಗೆ ಗೊತ್ತಿರುವ ಅನುಮಾನ ಮೂಡಿಸುತ್ತದೆ. ಈಗ ರಾಜೇಶ್ವರಿಯ ವಕೀಲನಾದ್ದವ ಭಾಸ್ಕರ್ ಶೆಟ್ಟಿ ಮರ್ಡರ್ ಆಗಿದ್ದಾರೆಂಬುದು ಸುದ್ದಿಯಾಗುತ್ತಿದ್ದಂತೆಯೇ ಬಂಟ ಸಮುದಾಯದವರು ಸಭೆ ಸೇರಿಸಿ ಶೋಕಾಚರಣೆ ಮಾಡಿದ್ದಾರೆ. ಈ ಸಭೆಯಲ್ಲಿ ಮಟ್ಪಾರು ರತ್ನಾಕರ ಹೆಗ್ಡೆಯೂ ಇದ್ದರು. ಬಂಟ ಸಮುದಾಯದ ವಕೀಲರ್ಯಾರು ರಾಜೇಶ್ವರಿ ಮತ್ತಾಕೆಯ ಮಗನ ಪರವಾಗಿ ವಕಾಲತ್ತು ನಡೆಸಬಾರದೆಂಬ ತೀರ್ಮಾನ ಅಂದು ಅಲ್ಲಾಗಿತ್ತು. ಇದಕ್ಕೆ ಬಿಜೆಪಿ ಪುಡಾರಿ ಮಟ್ಪಾರು



ಹೆಗ್ಡೆಯೂ ಒಪ್ಪಿದ್ದರು.

ಮಟ್ಪಾರು ಹೆಗ್ಡೆ ವಕಾಲತ್ತು ರಾಜೇಶ್ವರಿ ಪರವಾಗಿ ಹಾಕಿಲ್ಲ, ಆದರೆ ತನ್ನ ಜೂನಿಯರ್ ವಿಕೇಶ್ ಶೆಟ್ಟಿಯನ್ನು ರಾಜೇಶ್ವರಿ ಪರವಾಗಿ ವಾದಿಸಲು ಬಿಟ್ಟಿದ್ದಾರೆ. ಏನಿದರ ಅರ್ಥ? ಸಾಯುವ ಎರಡು-ಮೂರು ದಿನ ಮೊದಲು ಭಾಸ್ಕರ್ ಶೆಟ್ಟಿ ತನ್ನ ಆಫೀಸಿಗೆ ಬಂದಾಗ ಬಿಜಿ ಇದ್ದುದರಿಂದ ಅವರತ್ತ ಗಮನ ಹರಿಸಿರಲಿಲ್ಲ, ಆತ ಹಾಗೇ ಎದ್ದುಹೋಗಿದ್ದರು ಅಂತಾರೆ ಮಟ್ಪಾರು ಹೆಗ್ಡೆ. ಒಬ್ಬ ಕೋಟ್ಯಾಧೀಶ ಸ್ವ-ಜಾತಿ ಎನ್‌ಆರ್‌ಐ ಉದ್ಯಮಿ ಮನೆ ಬಾಗಿಲಿಗೆ ಬಂದಾಗ-ಅದರಲ್ಲೂ ಕಾನೂನುಸಲಹೆಗಾಗಿ ಬಂದಾಗ ಮಟ್ಪಾರು ಹೆಗ್ಡೆ ಮಾತಾಡಿಸಿಲ್ಲ ಅಂದರೆ ಏನಿದರ ಮರ್ಮ? ಮಟ್ಪಾರು ರಾಜೇಶ್ವರಿ-ಆಕೆಯ ಭಾವ ಬಿಲ್ಡರ್ ಭಾಸ್ಕರ್ ಪರವಾಗಿದ್ದರಾ? ಹೀಗಾಗಿ ಭಾಸ್ಕರ್ ಶೆಟ್ಟಿಯನ್ನು ಕಡೆಗಣಿಸಿದರಾ? ಮಟ್ಪಾರು ಹೆಗ್ಡೆಯ ಆತ್ಯಾಪ್ತ ಶಿಷ್ಯ ವಿಕೇಶ್ ಶೆಟ್ಟಿ "ಅಣ್ಣಾಮಲೈ ಟ್ರಾನ್ಸ್‌ಫರ್ ಆಗ್ಲಿ... ಉಡುಪೀಲಿ ದೊಡ್ಡದೊಂದು ಪ್ರಕರಣ ಆಗ್ತದೆ... ನೋಡಿ...." ಎಂದು ಭಾಸ್ಕರ್ ಶೆಟ್ಟಿ ಮರ್ಡರಗೂ ಮೊದಲೇ ವಕೀಲರ ತಂಡದ



ಮುಂದೆ ಭವಿಷ್ಯ ಹೇಳಿದ್ದ! ಅದ್ಹೇಗೆ ವಿಕೇಶ್‌ಗೆ ಗೊತ್ತಾಯ್ತು? ಅಣ್ಣಾಮಲೈ ವರ್ಗಾವಣೆ ಮುಹೂರ್ತಕ್ಕೆ ಹೊಂದಿಸಿಯೇ ಭಾಸ್ಕರ್ ಶೆಟ್ಟಿ ಕೊಲೆಗೆ ಸ್ಕೆಚ್ ಹಾಕಲಾಯ್ತಾ?

ಐಓ ಸುಮಾನಾರಿಗೆ ಇದೆಲ್ಲ ಗೊತ್ತಾ? ಪತ್ರಕರ್ತರೊಬ್ಬರು "ಭಾಸ್ಕರ್ ಶೆಟ್ಟಿಯ ಅರ್ಧ ಸುಟ್ಟ ಹೆಣ ಸಿಕ್ಕಿದೆಯೆಂದು ಸುದ್ದಿಯಿದೆ. ಇದು ನಿಜವಾ?" ಎಂದು ಮೊದಲಿನ ಐಓ ಗಿರೀಶ್‌ಗೆ ಕೇಳಿದಾಗ ಬಂದ ಉತ್ತರವೇನು ಗೊತ್ತಾ? "ಆತನ ಡೆಡ್‌ಬಾಡಿ ಸಿಗೋದಕ್ಕೆ ಸಾಧ್ಯವೇ ಇಲ್ಲ...!!" ಎಂದು ಖಡಾಖಂಡಿತವಾಗಿ ಗಿರೀಶ್ ಹೇಳಿದ್ದರು. ದೊಡ್ಡಣ್ಣ ಗುಡ್ಡೆ ಭಾಸ್ಕರ್ ಶೆಟ್ಟಿ, ಆತನ ಅಳಿಯ ಬಾಲಕೃಷ್ಣ ಶೆಟ್ಟಿ, ಪಿಐ ಗಿರೀಶ್, ಕೊಲೆಗಡುಕಿ ರಾಜೇಶ್ವರಿ, ಶಿರೂರು ಸ್ವಾಮಿ, ವಕೀಲ ಮಟ್ಪಾರು ಹೆಗ್ಡೆಯಂಥ ಪ್ರತಿಷ್ಠಿತ ಪಾಪಿಗಳ ಫೋನ್ ಕಾಲ್ ಲಿಸ್ಟ್ ತೆಗೆಸಿದರೆ, ಮಂಪರು ಪರೀಕ್ಷೆಗೆ ಒಡ್ಡಿದರೆ ಸತ್ಯ ಸಲೀಸಾಗಿ ಹೊರಬರಲಿದೆ. ಆ ಧೈರ್ಯ ಪಿಐ ಸುಮಾನಾರಿಗೆ ಇರಬೇಕಷ್ಟೇ!

ಚೆಂಭ ಸ್ವಾಮಿ ಪ್ರವೇಶ

ಅತಿ ತೆವಲುಗಾತಿ ರಾಜೇಶ್ವರಿಗೆ ಮಂತ್ರವಾದಿ-ಮಾಟಗಾರರ ಬಗ್ಗೆ ವಿಪರೀತ ಹುಚ್ಚು. ಮಾಟ-ಮೋಡಿಯಿಂದಲೇ ಗಂಡ ಭಾಸ್ಕರ್ ಶೆಟ್ಟಿಯನ್ನು ನಿಯಂತ್ರಿಸಲು ಆಕೆ ಹೋಗದ ಮಾಟಗಾರರೇ ಇಲ್ಲ. ಇಂಥ ಹುಡುಗಾಟದಲ್ಲೇ ಸಿಕ್ಕವನ್ನು ಮನೆಮುರುಕ ನಿರಂಜನಭಟ್ಟ. ಕಿಲ್ಪಾಡಿಯ ಹುಚ್ಚು ಭಟ್ಟನ ಮಗ ಚಂದ್ರಶೇಖರ ಭಟ್ಟ ಬೆಂಗಳೂರು ಸೇರಿ ಅಲ್ಲಿ ಪ್ರತಿಷ್ಠಿತ ರಾಜಕಾರಣಿಗಳ-ಅಧಿಕಾರಿಗಳ, ಸಿನಿ ನಟ-ನಟಿಯರ ಭವಿಷ್ಯ ಹೇಳುವ-ಜಾತಕ ಮೇಳಾಮೇಳ ಕೂಡಿಸುವ 'ಸ್ವಾಮೀಜಿ'ಯಾಗಿ ಅವತರಿಸಿದ್ದು ಹಳೇ ಕತೆ. ಈ ಚಂಭ ಸ್ವಾಮಿಗೂ ರಾಜೇಶ್ವರಿಯ ನಂಟಿದೆ.

ರಾಜೇಶ್ವರಿ ಮತ್ತಾಕೆಯ ಮಗ ಆಗಾಗ ಚಂಭ ಸ್ವಾಮಿಯ ಸನ್ನಿಧಿಗೆ ಹೋಗಿ ಪಾದಕಾಣಿಕೆ ಅರ್ಪಿಸಿ ಬರುತ್ತಿದ್ದರು. ರಾಜೇಶ್ವರಿಯ ಖತರ್‌ನಾಕ್ ಪುತ್ರರತ್ನ ನವನೀತ್ ಚಂಭ ಸ್ವಾಮಿ ಜತೆ ನಿಂತು ಹೊಡೆಸಿಕೊಂಡ ಫೋಟೋ ಪೊಲೀಸರಿಗೂ ಸಿಕ್ಕಿದೆ. ಇದೇ ದಗಲುಬಾಜಿ ಚಂಭಟ್ಟನಿಗೆ ಗೃಹಮಂತ್ರಿ ಪರಮ್‌ರ ಪರಿಚಯವೂ ಇದೆ. ಈತ ಭಾಸ್ಕರ್ ಶೆಟ್ಟಿ ಮರ್ಡರ್ ಕೇಸ್ ಹಳ್ಳ ಹಿಡಿಸಲು ಗೃಹ ಮಂತ್ರಿಗಳಿಗೆ 'ಅಪ್ಪಣೆ' ಮಾಡಿದ್ದಾನೆಂಬ ಸುದ್ದಿ ಈಗ ಕರಾವಳಿಯಲ್ಲಿ ಹಬ್ಬಿದೆ.

ಆರಂಭದಲ್ಲಿ ಐಓ ಗಿರೀಶ್, ಎಸ್‌ಪಿ ಅಣ್ಣಾಮಲೈ ಮತ್ತು ಪೊಲೀಸ್ ಬಳಗ ಪಾತಕಿ ರಾಜೇಶ್ವರಿ, ನವನೀತ್, ನಿರಂಜನ ಭಟ್ಟನಿಗೆ ರಾಜಾತಿಥ್ಯ ನೀಡಿ ಗೌರವದಿಂದ ನೋಡಿಕೊಂಡಿದ್ದರು. ಎಸ್‌ಪಿ, ಐಓ ಬದಲಾಗುತ್ತಿದ್ದಂತೆಯೇ ಕಂಗಾಲು ಬಿದ್ದ ರಾಜೇಶ್ವರಿ ಕಂಪನಿ ಚಂಭಟ್ಟನ ಮೂಲಕ ಇನ್‌ಪ್ಲೂಯೆನ್ಸ್ ಮಾಡಿಸಿದ್ದಾರೆ. ಹಾಗಾಗಿ ಇವತ್ತಿನವರೆಗೂ ಪೊಲೀಸ್ ತನಿಖೆಗೂ ಖದರೇ ಬಂದಿಲ್ಲ. ಆರೋಪಿಗಳ ಬಾಯಿಬಿಡಿಸಲು ಬಳಸುವ ಯಾವ ಅಸ್ತ್ರವನ್ನೂ ಪೊಲೀಸರು ಬಳಸಿಲ್ಲ. ಹೀಗಾಗಿ ತನಿಖೆ ಹಳಿ ತಪ್ಪಿದೆ. ಬಂಧಿತರು ಹೇಳಿದ ಸುಳ್ಳುಗಳ ಸುತ್ತಲೇ ತನಿಖೆ ಗಿರಕಿ ಹೊಡೆಯುತ್ತಿದೆ.

■ ನಹುಷ



ಬಳ್ಳಾರಿ: ಪಿಎಫ್ ಹಣ ನುಂಗಿದ ಬ್ಯಾಂಕ್ ಅಧ್ಯಕ್ಷ



ಒಂದಲ್ಲ ಎರಡಲ್ಲ, ಕಳೆದ 30 ವರ್ಷಗಳಿಂದ ಸತತವಾಗಿ 700 ಜನ ನೌಕರರಿಗೆ ಸೇರಬೇಕಿದ್ದ ಬರೊಬ್ಬರಿ 20 ಕೋಟಿ ರೂ.ವನ್ನು ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್‌ನ ಅಧ್ಯಕ್ಷ ಮತ್ತು ಮ್ಯಾನೇಜರ್ ಸೇರಿ ಲಪಟಾಯಿಸಿದ್ದಾರೆ. ಇದನ್ನು ಪ್ರಶ್ನಿಸಿದ ನೌಕರರಿಗೆ "ನೀವು ಕೂಲಿಯವರು. ನಿಮಗೆ ಕೆಲಸ ಕೊಟ್ಟರೆ ನಮ್ಮನ್ನೇ ಕೇಳುತ್ತೀರಾ?" ಎಂದು ದರ್ಪ ಪ್ರದರ್ಶಿಸಿದ ಬ್ಯಾಂಕ್‌ನ ಅಧ್ಯಕ್ಷ ರವಿಕುಮಾರ್ ಮತ್ತು ಜನರಲ್ ಮ್ಯಾನೇಜರ್ ರವಿಸುಧಾಕರ್ ಅವರನ್ನೆಲ್ಲ ಕೆಲಸದಿಂದಲೇ ಹೊರಹಾಕಿದ್ದಾರೆ. ಕಾನೂನುರೀತ್ಯ ಬ್ಯಾಂಕ್‌ನ ನೌಕರರಿಗೆ ಬರಬೇಕಿದ್ದ ಸೌಲಭ್ಯಗಳನ್ನು ವಂಚಿಸಿದ್ದಲ್ಲದೆ ಕಾರ್ಮಿಕರ ಮೇಲೆ ನಿರಂತರ ದಬ್ಬಾಳಿಕೆ ನಡೆಸಿರುವ ಇವರೀರ್ವರ ಮೇಲೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲಾಗಿ ಜೈಲು ಸೇರಬೇಕಾದ ಕಾಲ ಬಂದರೂ ಬುದ್ಧಿ ಕಲಿತಿಲ್ಲ.

ಬಳ್ಳಾರಿಯಲ್ಲಿ ಕೇಂದ್ರ ಕಚೇರಿಯನ್ನು ಹೊಂದಿರುವ ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ ರಾಜ್ಯಾದ್ಯಂತ 11 ಜಿಲ್ಲೆಗಳಲ್ಲಿ 645 ಶಾಖೆಗಳ ಮೂಲಕ ಕಾರ್ಯನಿರ್ವಹಿಸುತ್ತಿದೆ. ಪ್ರಗತಿ ಗ್ರಾಮೀಣ ಬ್ಯಾಂಕ್ ಮತ್ತು ಕೃಷ್ಣ ಗ್ರಾಮೀಣ ಬ್ಯಾಂಕ್ ಹೆಸರಿನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಹಲವು ಬ್ಯಾಂಕುಗಳು ಒಂದಾಗಿ ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ ಆಗಿ ರೂಪುಗೊಂಡಿವೆ. ಇದು ಕೆನರಾ ಬ್ಯಾಂಕ್‌ನ ನೇರ ನಿರ್ವಹಣೆಯಲ್ಲಿ ನಡೆಯುತ್ತಿದ್ದು ಭಾರತ ಸರ್ಕಾರದಿಂದ ಅಂಗೀಕರಿಸಲ್ಪಟ್ಟಿದೆ. ಆದರೆ ಹಣಕ್ಕಾಗಿ ಏನು ಬೇಕಾದರೂ ಮಾಡಲು ಹೇಸದ ಬ್ಯಾಂಕ್‌ನ ರವಿಕುಮಾರ್ ಮತ್ತು ರವಿಸುಧಾಕರ್ ಸೇರಿ ನೌಕರರ ಹಣ ಲೂಟಿ ಮಾಡುವ ಮೂಲಕ ಇಡೀ ಬ್ಯಾಂಕ್‌ಗೆ ಕೆಟ್ಟ ಹೆಸರು ಬರಲು ಕಾರಣರಾಗಿದ್ದಾರೆ. 30 ವರ್ಷಗಳಿಂದ ಬ್ಯಾಂಕ್‌ಗಳಲ್ಲಿ ಕೆಲಸ ಮಾಡುತ್ತಿರುವ ಮೆಸೆಂಜರ್‌ಗಳ ಪಿಎಫ್ ಹಣವನ್ನು ಅವರ ಸಂಬಳದಿಂದ ಕಡಿತ ಮಾಡಿದ ಬ್ಯಾಂಕ್ ಆಡಳಿತ ಮಂಡಳಿ ಆ ಹಣವನ್ನು ಭವಿಷ್ಯನಿಧಿ ಇಲಾಖೆಗೆ ತುಂಬದೇ ಮೋಸ ಮಾಡಿ 20 ಕೋಟಿ ರೂ.ವನ್ನು ಸ್ವಾಹಾ ಮಾಡಿಬಿಟ್ಟಿದ್ದಾರೆ.

ಕಾರ್ಮಿಕರ ಗೋಳು


1970ರ ದಶಕದಲ್ಲೇ ಆರಂಭವಾದ ಬ್ಯಾಂಕ್‌ನಲ್ಲಿ 700 ಜನ ಮೆಸೆಂಜರ್‌ಗಳು ಕೆಲಸ ಮಾಡುತ್ತಿದ್ದಾರೆ. ಇವರನ್ನು ಸಿಪಾಯಿಗಳೆಂತಲೂ ಕರೆಯಲಾಗುತ್ತದೆ. ಕಸ ಗುಡಿಸುವುದು, ಬ್ಯಾಂಕ್ ಸ್ವಚ್ಛ ಮಾಡುವುದು, ಚೆಕ್ ಕಲೆಕ್ಷನ್ ಮಾಡುವುದು, ಲೋನ್ ರಿಕವರಿ ಮಾಡುವುದು, ಫೈಲ್ ಮಾಡುವುದು, ಅಧಿಕಾರಿಗಳು ಹೇಳಿದಂತೆ ಕೇಳುವುದು, ಡೇ ಬುಕ್ ಬಂಡಲ್ ಮಾಡುವುದು, ಕ್ಯಾಷ್ ಡಿಸ್ಕೌಂಟ್, ಕ್ಯಾಷ್ ರೆಮಿಟೆನ್ಸಿ, ಖಾತೆ ತೆರೆಯಲು ಸಹಾಯ ಮಾಡುವುದು, ಕಂಪ್ಯೂಟರ್ ಆಪರೇಟ್ ಮಾಡುವುದು ಇತ್ಯಾದಿ, ಇತ್ಯಾದಿ ಸೇರಿದಂತೆ ಹತ್ತಾರು ಜನ ಮಾಡಬಹುದಾದ ಎಲ್ಲಾ ಕೆಲಸಗಳನ್ನು ಈ ಮೆಸೆಂಜರ್‌ಗಳೇ ಮಾಡಬೇಕಿದೆ. ದೊಡ್ಡ ಶಾಖೆಗಳನ್ನು ಹೊರತುಪಡಿಸಿ ಬಹುತೇಕ ಶಾಖೆಗಳಲ್ಲಿ ಕೇವಲ ಒಬ್ಬರನ್ನು ಮೆಸೆಂಜರ್ ಆಗಿ ನೇಮಕ ಮಾಡಿದೆ. ಬೆಳಗ್ಗೆ 9 ಗಂಟೆಗೆ ಕೆಲಸ ಆರಂಭವಾದರೆ ರಾತ್ರಿ 8 ಗಂಟೆಯವರೆಗೂ ದುಡಿಯುವ ಅನಿವಾರ್ಯ ಪರಿಸ್ಥಿತಿ ಎದುರಾಗಿದೆ. ಇಷ್ಟೆಲ್ಲಾ ಕೆಲಸದ ಹೊರೆಯನ್ನು ಕಷ್ಟಪಟ್ಟು ನಿಭಾಯಿಸಿದರೂ ಇವ್ಯಾರೂ ಕಾಯಂ ನೌಕರರಲ್ಲ; ಬದಲಿಗೆ ದಿನಗೂಲಿ ಕಾರ್ಮಿಕರು. ಈ ನೌಕರರಿಗೆ ಗುರುತಿನ ಚೀಟಿ ಕೊಟ್ಟಿಲ್ಲ, ಇಎಸ್‌ಐ ಸೌಲಭ್ಯವೂ ಇಲ್ಲ, ಕೆಲಸದ ಭದ್ರತೆಯೂ ಇಲ್ಲದ ಇವರಲ್ಲಿ ಕೆಲವರ ವಯಸ್ಸು 55 ದಾಟಿದೆ. ನಿಮ್ಮನ್ನು ಈಗ ಪರ್ಮನೆಂಟ್ ಮಾಡುತ್ತೇವೆ, ಆವಾಗ ಕಾಯಂ ಮಾಡುತ್ತೇವೆಂದು ಕೇವಲ ಆಶ್ವಾಸನೆಗಳನ್ನು ನೀಡುತ್ತಾ ಈ ಜೀತದಾಳುಗಳಂತೆ ದುಡಿಸಿಕೊಳ್ಳಲಾಗುತ್ತಿದೆ. ಈಗ ತಮ್ಮ ಜೀವನದ ನಿವೃತ್ತಿ ಅಂಚಿನಲ್ಲಿರುವ ಈ ನೌಕರರು "ಕೆಲಸವಂತೂ ಕಾಯಂ ಆಗಲಿಲ್ಲ, ನಮ್ಮ ಪಿಎಫ್ ಹಣವನ್ನಾದರೂ ತೆಗೆದುಕೊಳ್ಳೋಣ" ಎಂದು ನೋಡಿದರೆ ಅದಕ್ಕೂ ಕನ್ನ ಹಾಕಿ ಕೂತಿದ್ದಾರೆ ಭಾರೀ ತಿಮಿಂಗಿಲಗಳು.

ಪೂರ್ತಿ ಕೆಲಸಕ್ಕೆ ಅರ್ಧ ಸಂಬಳ

ಈ ನೌಕರರಿಗೆ ಸರಿಯಾದ ಸಂಬಳದ ಗ್ಯಾರಂಟಿ ಇಲ್ಲ. ದಿನಕ್ಕೆ 280 ರೂ. ಕನಿಷ್ಟ ವೇತನ ನೀಡಬೇಕೆಂದು ಸರ್ಕಾರ ನಿಗದಿ ಮಾಡಿದ್ದರೂ ಇಲ್ಲಿ 30 ದಿನ ಕೆಲಸ ಮಾಡಿದರೆ ಕೇವಲ 15 ದಿನದ ಸಂಬಳ ಮಾತ್ರ ನೀಡಲಾಗುತ್ತದೆ. ಕನಿಷ್ಟ ವೇತನದ ಪ್ರಕಾರ ತಿಂಗಳಿಗೆ 8-9 ಸಾವಿರ ಸಂಬಳ ಕೊಡಬೇಕಾದ ಬ್ಯಾಂಕ್ ಇವರಿಗೆ ಕೇವಲ 4-5 ಸಾವಿರಗಳನ್ನಷ್ಟೇ ಕೊಡುತ್ತಿದೆ. ಸಂಬಳ ಪುಸ್ತಕಕ್ಕೆ ಬಲವಂತವಾಗಿ ಸಹಿ ಹಾಕಿಸಿಕೊಳ್ಳಲಾಗುತ್ತಿದೆ. ಉಳಿದ ಹಣ ಭ್ರಷ್ಟರ ಪಾಲಾಗುತ್ತಿದೆ. ಯಾರಾದರೂ ಪ್ರಶ್ನಿಸಿದರೆ ಅವರ ಕೆಲಸ ಹೋಯ್ತು ಅಂತಾನೇ ಅರ್ಥ. ಅಷ್ಟೊಂದು ದೌರ್ಜನ್ಯ ನಡೆಯುತ್ತಿದೆ ಇಲ್ಲಿ. ಇದರಿಂದ ರೋಸಿಹೋದ ಇಲ್ಲಿನ ನೌಕರರು ತಮ್ಮ ಉಳಿವಿಗಾಗಿ ಸಂಘ ಕಟ್ಟಿಕೊಂಡಿದ್ದಾರೆ, 2012 ರಿಂದ ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ ನೌಕರರ ಸಂಘ ಕಟ್ಟಿಕೊಂಡು ತಮ್ಮ ನ್ಯಾಯಬದ್ಧ ಹಕ್ಕುಗಳನ್ನು ಕೇಳಲು ಶುರು ಮಾಡಿದ್ದಾರೆ. "ನಮ್ಮ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ" ಎಂದು ಆರೋಪಿಸಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೂ ದೂರು ನೀಡಿದ್ದಾರೆ. ಮೆಸೆಂಜರ್‌ಗಳನ್ನು ಸಹಾಯಕರೆಂದು ಘೋಷಿಸಿ ಕೆಲಸ ಕಾಯಂಗೊಳಿಸಬೇಕು. ಕನಿಷ್ಟ ವೇತನ ಮತ್ತು ಸೌಲಭ್ಯ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಖದೀಮರ ಮೇಲೆ ದಾಖಲಾಯ್ತು ಎಫ್‌ಐಆರ್


ಯಾವಾಗ ನೌಕರರು ಸಂಘಟನೆ ಕಟ್ಟಿಕೊಂಡು ತಮ್ಮ ಹಕ್ಕುಗಳಿಗಾಗಿ ದನಿ ಎತ್ತಿದರೋ ಅಲ್ಲಿಗೆ ರವಿಕುಮಾರ್ ಮತ್ತು ರವಿಸುಧಾಕರ್ ಅವರ ಅಂದು ಸುಟ್ಟಂತಾಗಿದೆ. ಇಷ್ಟು ದಿನಗಳ ತಮ್ಮ ಅಕ್ರಮ ಅವ್ಯವಹಾರಗಳು ಬಯಲಿಗೆ ಬರುತ್ತವೆ ಎಂದು ಇನ್ನಷ್ಟು ಕಿರುಕುಳ ನೀಡುವ ಮೂಲಕ ನೌಕರರ ಬಾಯಿ ಮುಚ್ಚಿಸಲು ಪ್ರಯತ್ನಿಸಿದ್ದಾರೆ. ಆದರೆ ಇದನ್ನು ಸಹಿಸಲಸಾಧ್ಯ ಸ್ಥಿತಿ ತಲುಪಿದ್ದ ನೌಕರರು ಬಳ್ಳಾರಿ ಜಿಲ್ಲೆಯ ಸಂಡೂರು ಮತ್ತು ದಾವಣಗೆರೆ ಜಿಲ್ಲೆಯ ಮಲೆಬೆನ್ನೂರು ಪೊಲೀಸ್ ಠಾಣೆಗಳಲ್ಲಿ ವಂಚನೆ-ಮೋಸದ ದೂರು ನೀಡಿದ್ದಾರೆ. ಬ್ಯಾಂಕ್‌ನ ಅಧ್ಯಕ್ಷ ರವಿಕುಮಾರ್ ಮತ್ತು ಜನರಲ್ ಮ್ಯಾನೇಜರ್ ರವಿಸುಧಾಕರ್‌ನಂತಹ ಪ್ರಬಲರ ಮೇಲಿನ ನೌಕರರ ದೂರನ್ನು ಪೋಲಿಸ್ ಇಲಾಖೆ ಎಂದಿನಂತೆ ನಿರ್ಲಕ್ಷ್ಯ ಮಾಡಿದೆ. ಆಗ ನೌಕರರು ತಮಗಾದ ಅನ್ಯಾಯದ ವಿರುದ್ಧ ಬಳ್ಳಾರಿ ಮುಖ್ಯ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿದ್ದಾರೆ. ಅದಕ್ಕೂ ಸೂಕ್ತ ಸ್ಪಂದನೆ ಸಿಗದಿದ್ದಾಗ




ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಸಂಡೂರು ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್‌ರವರ ಕರ್ತವ್ಯಲೋಪವನ್ನು ವಿವರಿಸಿದ್ದಾರೆ. ಮುಖ್ಯಮಂತ್ರಿಗಳ ಕಚೇರಿಯಿಂದ ಮೌಖಿಕವಾಗಿ ಮತ್ತು ಲಿಖಿತವಾಗಿ ಬಳ್ಳಾರಿ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಆದೇಶಹೋದ ನಂತರವೇ 6-6-2016ರಂದು ಎಫ್‌ಐಆರ್ ಸಂಖ್ಯೆ 0102/2016, ಐಪಿಸಿ ಕಲಂ 406, 409, 417, 420ರಡಿಯಲ್ಲಿ ಈ ಖದೀಮರ ವಿರುದ್ಧ ಪೋಲಿಸರು ದೂರು ದಾಖಲಿಸಿಕೊಂಡಿದ್ದಾರೆ. ಮೂರು ತಿಂಗಳು ವಿಳಂಬ ಮಾಡಿದ ಕಾರಣಕ್ಕೆ ಆಗಿನ ಸಬ್ ಇನ್ಸ್‌ಪೆಕ್ಟರ್‌ರವರ ವರ್ಗಾವಣೆಯೂ ಆಗಿದೆ.

ಈಗ ನಡೆಯುತ್ತಿರುವುದೇನು?

ಐಪಿಸಿ ಕಲಂ 405ರಂತೆ ಪ್ರಾವಿಡೆಂಡ್ ಫಂಡ್





ತುಂಬದಿದ್ದಲ್ಲಿ ಅದು ಕ್ರಿಮಿನಲ್ ಬ್ರೀಚ್ ಆಫ್ ... ಆಗುತ್ತದೆ. ಅದೇರೀತಿ ಬ್ಯಾಂಕಿಂಗ್ ರೆಗ್ಯುಲೇಶನ್ ... ಕಲಂ 10(1)(ಬ) ಇದರನ್ವಯ ನೈತಿಕ ಅಧಃ... ಆರೋಪಕ್ಕೆ ತನಿಖೆ ನಡೆಸಿ ಶೀಘ್ರವಾಗಿ ಆರೋಪಿಗ... ಅಮಾನತು ಮಾಡಬೇಕು. ಹಾಗೆಯೇ ತನಿಖೆ... ಭ್ರಷ್ಟಾಚಾರದ ಆರೋಪ ಸಾಬೀತಾದಲ್ಲಿ ಇದಕ್ಕೆ ... ಶಿಕ್ಷೆಯೂ ಇದೆ. ಆದರೆ ಇದ್ಯಾವುದೂ ಇಲ್ಲಿ ಆಗು... ಆರೋಪಿಗಳು ಪ್ರಬಲರಾಗಿರುವುದು ಮತ್ತು ... ದುಡ್ಡಿನಿಂದ ಕೊಬ್ಬಿರುವುದರಿಂದ ಇವರಿಬ್ಬರೂ ಈಗಾ... ಹೈಕೋರ್ಟ್‌ನಲ್ಲಿ ಇಡೀ ಕೇಸ್‌ಗೆ 3 ತಿಂಗಳ ತಡೆ... ತಂದಿದ್ದಾರೆ. 'ನಿಮಗೆ ಶಕ್ತಿ ಇದ್ದರೆ ಹೈ ಕೋರ್ಟ್... ಬಂದು ನಮ್ಮನ್ನು ಚಾಲೆಂಜ್ ಮಾಡಿ ನಿಮ... ನೋಡಿಕೊಳ್ಳುತ್ತೇವೆ' ಎಂದು ನೌಕರರಿಗೆ ಧ... ಹಾಕುತ್ತಿದ್ದಾರೆ. ಬಹಳಷ್ಟು ಹಣ ಸುರಿದು ವಕೀ... ಇಟ್ಟುಕೊಂಡು ಹೊರಬರುತ್ತೇವೆಯೇ ಹೊರತು ... ಸತ್ತರೂ ನಿಮ್ಮ ಪಿಎಫ್ ಹಣ ಕೊಡುವುದಿಲ್ಲ ... ಸವಾಲು ಹಾಕಿದ್ದಾರೆ. ಇತ್ತ ಬ್ಯಾಂಕ್‌ನಲ್ಲಿ ಯಾವ ತನಿಖೆ... ನಡೆಯುತ್ತಿಲ್ಲ. ಇದರ ನಡುವೆ ನೌಕರರ ಮೇಲಿನ ... ಮತ್ತಷ್ಟು ಹೆಚ್ಚಾಗಿದೆ. ಸಂಬಳ ಪುಸ್ತಕಕ್ಕೆ ಸಹಿ ... ಹಾಕಿಸಿಕೊಳ್ಳುತ್ತಿಲ್ಲ. ಅಲ್ಲದೇ ನೌಕರರು ದ... ನೀಡಿರುವುದರಿಂದ ಕುಪಿತವಾಗಿರುವ ಬ್ಯಾಂಕ್‌ನ ಆ... ಮಂಡಳಿ ಎಲ್ಲಾ ಅಧಿಕಾರಿಗಳಿಗೂ, ನೌಕರರಿಗೂ ಮೆ... ಕಳುಹಿಸಿದೆ. ಅದರಂತೆ ಇನ್ನು ಮುಂದೆ ಬ್ಯಾಂಕ್... ಕೂಲಿ ಕೆಲಸ ಮಾಡುವ ನೌಕರರಿಗೆ ಯಾ... ಪತ್ರಗಳನ್ನಾಗಲಿ, ಪ್ರಮಾಣಪತ್ರಗಳನ್ನಾಗಲಿ, ಸೇವಾ ಪ್ರ... ಪತ್ರಗಳನ್ನಾಗಲಿ ನೀಡಬಾರದು, ಸಂಬಳ ಚೀಟಿ ನೀಡಬ... ಎಂದು ತಿಳಿಸಿದ್ದು ಒಂದು ವೇಳೆ ನೀಡಿದ್ದಲ್ಲಿ ಅಂತ... ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಎಚ್ಚರಿಕೆ ನ... (ಸಂಡೂರು ಬ್ಯಾಂಕ್ ಮೆಮೊ ಸಂಖ್ಯೆ 183/2009, ... 2013). ಜೊತೆಗೆ ನೌಕರರ ಸಂಘದಲ್ಲಿ ಸಕ್ರಿಯರಾ... ವರನ್ನೆಲ್ಲಾ ವಜಾ ಮಾಡಿ ಹೊಸ ನೌಕರರನ್ನು ಸೇರಿಸಿಕೊ... ಹುನ್ನಾರ ಒಳಗಿನೊಳಗಿಂದಲೇ ನಡೆಯುತ್ತಿದೆ.

ಆದರೆ ಇಲ್ಲಿನ ನೌಕರರು ಈಗ ಎಚ್ಚೆತ್ತುಕೊಂಡಿ... ಸುಮ್ಮನೆ ಕೂತರೆ ತಮಗೆ ಉಳಿಗಾಲವಿಲ್ಲವೆನ್ನುವುದು ... ಅರಿವಿಗೆ ಬಂದಿದೆ. ಎಲ್ಲಾ ನೌಕರರು ಒಗ್ಗ... ಹೋರಾಡುವುದರ ಜೊತೆಗೆ ಬ್ಯಾಂಕ್‌ನ ಶಾಖೆಗಳ... ಎಲ್ಲಾ ಊರುಗಳಲ್ಲಿಯೂ ಸಮೀಪದ ಪೊಲೀಸ್ ಠಾಣ... ತಮ್ಮ ಪಿಎಫ್ ಹಣ ವಂಚನೆ ಮಾಡಿದ್ದಾರೆಂದು ... ದೂರು ನೀಡಲು ತೀರ್ಮಾನಿಸಿದ್ದಾರೆ. ನ್ಯಾಯಾಲಯದಲ್ಲಿಯೂ ಸಹ ಕೇಸು ದಾಖಲಿಸಿ ಕಾ... ಹೋರಾಟವನ್ನು ಸಹ ಮುಂದುವರೆಸುವ ದೃಢ ಮ... ಮಾಡಿದ್ದಾರೆ. ಇಷ್ಟು ವರ್ಷ ತಮ್ಮ ಜೀವ ತೇ... ಬ್ಯಾಂಕ್‌ನ ಆಡಳಿತ ಮಂಡಳಿ ತಮ್ಮನ್ನು ನಡೆಸಿಕೊ... ರೀತಿ ಅವರಿಗೆ ಬೇಸರ ತರಿಸಿದೆ. ಅದಕ್ಕಾಗಿ ತಮ್ಮ ಜೀ... ಕೊನೆ ಆಸರೆಯಾದ ಪಿಎಫ್ ಹಣ ಪಡೆದೇ ತೀ... ಸಂಕಲ್ಪ ಮಾಡಿದ್ದಾರೆ. 30 ವರ್ಷಗಳಿಂದ ತ... ಪಿಎಫ್‌ಗಾಗಿ ಮುರಿದುಕೊಂಡ ಹಣದ ಜೊತೆಗೆ ಬ್ಯಾ... ಆಡಳಿತ ಮಂಡಳಿ ಸೇರಿಸಿ ಭವಿಷ್ಯನಿಧಿ ಇಲಾಖೆ... ತುಂಬಬೇಕಿದ್ದ ಹಣಕ್ಕೆ ಬಡ್ಡಿ, ಪರಿಹಾರ ಎಲ್ಲವನ್ನೂ ... ವಾಪಸ್ಸು ಕೊಡಿಸಬೇಕೆಂದು ಹೋರಾಟಕ್ಕಿಳಿದಿದ್ದಾ... ವರ್ಷಗಳಿಂದ ಮಾಡುತ್ತಾ ಬಂದಿರುವ ಹೋರಾಟ... ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವ ಪಣ ತೊಟ್ಟಿ...

ಇನ್ನೊಂದು ಕಡೆ ಹಣ ಕೊಳ್ಳೆ ಹೊಡೆದ ಖದೀ... ತಪ್ಪಿಸಿಕೊಳ್ಳಲು ಹವಣಿಸುತ್ತಿದ್ದಾರೆ. ತಮ್ಮ ಹಣದ ಪ್ರ... ಜೊತೆಗೆ ರಾಜಕೀಯ ಪ್ರಭಾವ ಬಳಸಿ ಬಚಾವ... ನಿರ್ಧರಿಸಿದ್ದಾರೆ. ಸೂಕ್ತ ಪ್ರಾಮಾಣಿಕ ತನಿಖೆ ನ... ಮಾತ್ರ ಸತ್ಯ ಹೊರಬಂದು ಅಲ್ಲಿನ ಕಾರ್ಮಿ... ನೆಮ್ಮದಿಯಿಂದ ಬದುಕಲು ಸಾಧ್ಯವಾಗುತ್ತದೆ. ಅದಕ್ಕೆ ... ಮನಸ್ಸು ಮಾಡುತ್ತದೆಯೇ ಎಂಬುದು ದೊಡ್ಡ ಪ್ರಶ್ನೆ...

■ ಮುತ್ತುರಾ...



ಜಾಗ್ವಾರ್ ಚಿತ್ರದ ಪತ್ರಿಕಾಗೋಷ್ಠಿ ನಡೆಸಿದ ಕುಮಾರಸ್ವಾಮಿ



ಮಂಡ್ಯದಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಚಲುವರಾಯಸ್ವಾಮಿ ಟೀಂ

ಮಂಡ್ಯ: ಚೆಲುವಣ್ಣನ 'ಬರ್ತ್‌ಡೇ'ಗೆ ಕುಮಾರಣ್ಣನ 'ಜಾಗ್ವಾರ್'!

ರಾಜ್ಯಸಭೆ ಚುನಾವಣೆಯಲ್ಲಿ ಜೆಡಿಎಸ್ ದಳಪತಿಗಳ ಮಾತಿಗೆ ಕ್ಯಾರೇ ಎನ್ನದೆ ಅಧಿಕೃತ ಅಭ್ಯರ್ಥಿ ಫಾರೂಕ್‌ಗೆ ಮಣ್ಣು ಮುಕ್ಕಿಸಿದ ಅಷ್ಟ ದಿಕ್ಪಾಲಕರ ಟೀಂನ ನಾಯಕ ಚಲುವರಾಯಸ್ವಾಮಿಗೆ ತವರು ನೆಲ ಮಂಡ್ಯದಲ್ಲೇ ಮಾಂಜಾ ಕೊಡಲು ಕುಮಾರಸ್ವಾಮಿ ಪ್ಲಾನ್ ಮಾಡಿದ್ದಾರೆ. ಅದಕ್ಕಾಗಿ ಕುಮ್ಮಿ ಬಳಸುತ್ತಿರೋದು ತನ್ನ ಮಗ ನಿಖಿಲ್‌ನ ಸಿನಿಮಾ 'ಜಾಗ್ವಾರ್' ಅನ್ನೋ ಅಸ್ತ್ರವನ್ನು!

ಗೌಡರ ಹಟ್ಟಿಯಲ್ಲಿ ನಡೆಯುತ್ತಿರುವ ಅಪರಾತಪರಾ ಹೊಸದೇನೂ ಅಲ್ಲ. ರಾಜ್ಯಸಭೆ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಫಾರೂಕ್‌ಗೆ ಮತ ಹಾಕುವಂತೆ ದೇವೇಗೌಡ ಮತ್ತು ಕುಮಾರಸ್ವಾಮಿ ಹೇಳಿದ್ದರೂ ಚಲುವರಾಯಸ್ವಾಮಿ, ಬಾಲಕೃಷ್ಣ ಜಮೀರ್ ಅಹಮದ್‌ಖಾನ್, ರಮೇಶ್‌ಬಾಬು ಬಂಡಿಸಿದ್ದೇಗೌಡ, ಗೋಪಾಲಯ್ಯ, ಅಖಂಡ ಶ್ರೀನಿವಾಸಮೂರ್ತಿ, ಇಕ್ಬಲ್ ಅನ್ಸಾರಿ ಕಾಂಗ್ರೆಸ್ ಅಭ್ಯರ್ಥಿ ರಾಮಮೂರ್ತಿಗೆ ಮತ ಹಾಕಿದಾಗಲೇ ಗೌಡರ ಹಟ್ಟಿಯ ಅಲ್ಲೋಲಕಲ್ಲೋಲ ಅಧಿಕೃತವಾಗಿ ಸಾಬೀತಾಗಿತ್ತು. ಇವರ ಹಿಂದೆ ಜೆಡಿಎಸ್ ಎಂಎಲ್‌ಸಿ ಪುಟ್ಟಣ್ಣ ಕೂಡ ಇದ್ದರು.

ಅದಾದನಂತರ ಏನೊಂದೂ ಮಾತನಾಡದ ಕುಮ್ಮಿ ಮಗ ನಿಖಿಲ್‌ನ ಸಿನಿಮಾ ಶೂಟಿಂಗ್ ನೆಪ ಕೊಟ್ಟು ವಿದೇಶಕ್ಕೆ ಹಾರಿದ್ದರು. ಅಲ್ಲಿಂದ ಈವರೆಗಿನ ಗ್ಯಾಪ್‌ನಲ್ಲಿ ಜೆಡಿಎಸ್ ಅಂಗಳದಲ್ಲಿ ಏನೇನೋ ಬದಲಾವಣೆಗಳು ಘಟಿಸಿವೆ. ಆದರೆ ಕುಮಾರಸ್ವಾಮಿ ಅಧಿಕೃತವಾಗಿ ಅಖಾಡಕ್ಕಿಳಿದಿರಲಿಲ್ಲ. ಅಷ್ಟ ಬಂಡಾಯಗಾರರಿಗೆ, ಅದರಲ್ಲೂ ತನ್ನ ಅಂದಕಾಲತ್ತಿಲ್ ಕುಚ್ಚಿಕ್ಕು ಚಲುವರಾಯ ಸ್ವಾಮಿಗೆ ಕುಮ್ಮಿ ಅದೇಗೆ ಚುರುಕು ಮುಟ್ಟಿಸುತ್ತಾರೆ ಅನ್ನೋ ಕುತೂಹಲ ಇದ್ದೇ ಇತ್ತು. ಕಡೆಗೂ ಸೆಪ್ಟೆಂಬರ್ 2ಕ್ಕೆ ಕುಮಾರಣ್ಣ ಅದಕ್ಕೊಂದು ಮುಹೂರ್ತ ಫಿಕ್ಸ್ ಮಾಡಿಯೇ ಬಿಟ್ಟಿದ್ದಾರೆ.

ಕಳೆದ ತಿಂಗಳಷ್ಟೇ ಚಲುವರಾಯಸ್ವಾಮಿ ತನ್ನ ಮಗ ಸಚಿನ್ ಅಭಿನಯದ 'ಹ್ಯಾಪಿ ಬರ್ತಡೇ' ಸಿನಿಮಾದ ಆಡಿಯೋ ರಿಲೀಸ್ ಫಂಕ್ಷನ್‌ನನ್ನು ಮಂಡ್ಯದ ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಅದ್ದೂರಿಯಾಗಿ ಮಾಡಿಮುಗಿಸಿದ್ದರು. ಸಿನಿಮಾದ ಬಹುತೇಕ ಚಿತ್ರೀಕರಣ ಮಂಡ್ಯದಲ್ಲೇ ನಡೆದಿರೋದರಿಂದ ತವರಿನಲ್ಲೇ ಆಡಿಯೋ ಬಿಡುಗಡೆ ಮಾಡುತ್ತಿದ್ದೇವೆ ಅಂತ ಚೆಲುವಣ್ಣ ಸಬೂಬು ಕೊಟ್ಟರೂ ಜುಲೈ 23ರ ಆ ಸಮಾರಂಭದ ಘನ ಉದ್ದೇಶ ದೊಡ್ಡಗೌಡರಿಗೆ ಸೆಡ್ಡು ಹೊಡೆಯುವುದೇ ಆಗಿತ್ತು. ಯಾಕೆಂದರೆ ಅದಕ್ಕೂ ಕೆಲದಿನ ಮುನ್ನ ಎಂಎಲ್‌ಸಿ ಎಲೆಕ್ಷನ್‌ನಲ್ಲಿ ಗೆದ್ದಿದ್ದ ಬಸವರಾಜ್ ಹೊರಟ್ಟಿ ಹಾಗೂ ಶ್ರೀಕಂಠೇಗೌಡರಿಗೆ ಸನ್ಮಾನ ಮಾಡುವ ನೆಪದಲ್ಲಿ ಅದೇ ಮಂಡ್ಯದಲ್ಲಿ ದೇವೇಗೌಡರು ವಿಜಯಸಂಕಲ್ಪ ಅನ್ನೋ ಸಮಾರಂಭ ಮಾಡಿ ಬಂಡಾಯಗಾರರ ಮೇಲೆ ಹರಿಹಾಯ್ದಿದ್ದು ಚೆಲುವಣ್ಣನನ್ನು ಕೆಣಕುತ್ತಲೇ ಇತ್ತು. ಅದಕ್ಕೆ ಮುಯ್ಯಿ ತೀರಿಸಿಕೊಳ್ಳುವಂತೆ ಅಂಬರೀಶ್, ಯಶ್, ಹರಿಪ್ರಿಯಾ, ರಾಕ್‌ಲೈನ್ ವೆಂಕಟೇಶ್, ದೊಡ್ಡಣ್ಣರಂತಹ ತಾರಾ ದಂಡನ್ನೇ ಕರೆಸಿ ಸಂಗೀತ ನಿರ್ದೇಶಕ ಹರಿಕೃಷ್ಣ ಸಂಗೀತ ಸಂಜೆ ನಡೆಸಿ ಐದಾರು ಸಾವಿರ ಜನ ಜಮಾಯಿಸುವಂತೆ ಮಾಡಿ ಬೀಗಿದ್ದರು. ಆ ಕಾರ್ಯಕ್ರಮಕ್ಕೆ ಅಪ್ಪ-ಮಗನಿಗೆ ಸೆಡ್ಡು ಹೊಡೆದಿರುವ ಮಾಗಡಿ ಬಾಲಕೃಷ್ಣ, ಜಮೀರ್, ಪುಟ್ಟಣ್ಣ, ರಮೇಶ್‌ಬಾಬು, ಗೋಪಾಲಯ್ಯ, ಮುಂಗಾರುಮಳೆ ಕೃಷ್ಣ ಮೊದಲಾದವರೆಲ್ಲ ಸಾಥ್ ನೀಡಿದ್ದರು.

ಚೆಲುವಣ್ಣನ 'ಹ್ಯಾಪಿ ಬರ್ತ್‌ಡೇ'ಗೆ ಇಕ್ಕಳ ಈಗ ಕುಮಾರಣ್ಣ ತನ್ನ ಮಗನ 'ಜಾಗ್ವಾರ್' ಅನ್ನು ಹರಿತ ಮಾಡಿಕೊಳ್ಳುತ್ತಿದ್ದಾರೆ. ಚೆಲುವರಾಯಸ್ವಾಮಿ ಯಾವ ಸ್ಟೇಡಿಯಂನಲ್ಲಿ ಜನ ಸೇರಿಸಿ ಫಂಕ್ಷನ್ ಮಾಡಿ ಸೆಡ್ಡು ಹೊಡೆದನೋ ಅದೇ ಸ್ಟೇಡಿಯಂನಲ್ಲೇ ಅದಕ್ಕಿಂತಲೂ ಅದ್ದೂರಿಯಾಗಿ ಜನ ಸೇರಿಸಿ ಜಾಗ್ವಾರ್ ಸಿನಿಮಾದ ಆಡಿಯೋ ರಿಲೀಸ್ ಮಾಡೋದು ಕುಮಾರಣ್ಣನ ಸದ್ಯದ ಪ್ಲಾನು. ಆಗಸ್ಟ್ 9ರಂದು ಮಂಡ್ಯಕ್ಕೆ ಬಂದಿದ್ದ ಕುಮಾರಣ್ಣ ವಿಶ್ವೇಶ್ವರಯ್ಯ ಕ್ರೀಡಾಂಗಣಕ್ಕೆ ಭೇಟಿ ನೀಡಿ ಮಗ ನಿಖಿಲ್‌ನ ಜಾಗ್ವಾರ್ ಸಿನಿಮಾ ಧ್ವನಿಸುರುಳಿ ಬಿಡುಗಡೆಯನ್ನು ಸೆಪ್ಟೆಂಬರ್ 2ರಂದು ಇಲ್ಲೇ ಮಾಡುವುದಾಗಿ ಘೋಷಿಸಿದ್ದಾರೆ. ಅಷ್ಟೇ ಅಲ್ಲ, ಒಂದು ಹೆಜ್ಜೆ ಮುಂದೆಹೋಗಿ "ಜಿಲ್ಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರಿಗೆ, ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಹಾಗೂ ಕನ್ನಡ ಚಲನಚಿತ್ರ ರಂಗದಲ್ಲಿ ದುಡಿದ ಹಿರಿಯ ಜೀವಗಳಿಗೆ ಅವತ್ತು ಹಣಕಾಸು ನೆರವು ನೀಡುತ್ತೇನೆ" ಅಂತಲೂ ಅನೌನ್ಸ್ ಮಾಡಿದ್ದಾರೆ. ಇದರ ಹಿಂದೆ ಯಾವ ರಾಜಕೀಯವೂ ಇಲ್ಲ ಅಂತ ಕುಮಾರಣ್ಣ ಹೇಳುತ್ತಾರಾದರೂ ಅವರ ಇರಾದೆ ಎಂತವರಿಗೂ ಸ್ಪಷ್ಟವಾಗಿ ಅರ್ಥವಾಗುತ್ತೆ.

ಯಾಕೆಂದರೆ, ಅವತ್ತು ಈ ವಿಷಯ ಹೇಳುವುದಕ್ಕೆಂದು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲೇ ಕುಮಾರಣ್ಣ ಎಂಟು ಮಂದಿ ಭಿನ್ನಮತೀಯರ ವಿರುದ್ಧ ಕಿಡಿಕಾರಿದ್ದರು. ಅವರನ್ನೆಲ್ಲ ಅಷ್ಟ ದಿಕ್ಪಾಲಕರೆಂದು ಲೇವಡಿ ಮಾಡಿದ್ದಲ್ಲದೆ ಇಂತವರನ್ನು ಯಾವ ಕಾರಣಕ್ಕೂ ಮತ್ತೆ ಹತ್ತಿರಕ್ಕೆ ಸೇರಿಸಿಕೊಳ್ಳುವುದಿಲ್ಲ ಅನ್ನೋ ಶಪಥವನ್ನೂ ಗೈದಿದ್ದರು.

ಇದಾಗಿ ಎರಡೇ ದಿನಕ್ಕೆ ಮಂಡ್ಯದ ಪ್ರವಾಸಿಮಂದಿರದಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಬಂಡಾಯಗಾರರು ಕುಮ್ಮಿಗೆ ಖಾರವಾಗಿ ಪ್ರತಿಕ್ರಿಯೆ ನೀಡಿದ್ದಾರೆ. "ನಮ್ಮನ್ನೆಲ್ಲಾ ಪಕ್ಷ ಅವಮಾನತ್ತಿನಲ್ಲಿಟ್ಟಿದ್ದರೂ ನಾವು ದೇವೇಗೌಡ ಹಾಗೂ ಕುಮಾರಸ್ವಾಮಿ ಬಗ್ಗೆ ಗೌರವಯುತವಾಗಿ ನಡೆದುಕೊಂಡಿದ್ದೇವೆ. ಅವರು ಅಷ್ಟೇ ಗೌರವಯುತವಾಗಿ ನಡೆದುಕೊಳ್ಳಬೇಕು. ಅದು ಬಿಟ್ಟು ಬಾಯಿಗೆ ಬಂದಾಗೆ ಮಾತನಾಡಬಾರದು. ಮತ್ತೆ ಸೇರಿಸಿಕೊಳ್ಳುವಂತೆ 8 ಜನರಲ್ಲಿ ನಾವ್ಯಾರು ಅರ್ಜಿ ಹಾಕಿಲ್ಲ. ನಮ್ಮ ಹಾದಿಗೆ ನಾವು ಗೌರವಯುತವಾಗಿದ್ದೇವೆ. ಕಾರ್ಯಕರ್ತರಿಗೋಸ್ಕರ ಪಕ್ಷದಲ್ಲಿದ್ದೇವೆ. ನಮ್ಮನ್ನು ಸೇರಿಸಿಕೊಳ್ಳುವುದಿಲ್ಲ ಎಂದು ಪದೇಪದೇ ಹೇಳುವ ಅವಶ್ಯಕತೆ ಇಲ್ಲ. ನಮ್ಮ ದಾರಿ ನಮಗೆ ಗೊತ್ತಿದೆ" ಅಂತ ಚೆಲುವರಾಯಸ್ವಾಮಿ ಕೆಂಡಕಾರಿದ್ದರೆ, ಜಮೀರ್ ಅಹಮದ್‌ಖಾನ್ ಇನ್ನೂ ಒಂದುಹೆಜ್ಜೆ ಮುಂದೆಹೋಗಿ "ಜೆಡಿಎಸ್ ಅಪ್ಪ-ಮಕ್ಕಳ ಪಕ್ಷ. ಅವರಿಗೆ ಇಷ್ಟವಿಲ್ಲದಿದ್ರೆ ನಮ್ಮನ್ನು ಪಕ್ಷದಿಂದ ತೆಗೆಯಲಿ. ಹುಟ್ಟಿದಾಗಲೇ ದೇವರು ನಮ್ಮ ಹಣೆಬರಹ ಬರೆದಾಗಿದೆ. ಕುಮಾರಸ್ವಾಮಿಯಿಂದ ನಮ್ಮ ಹಣೆಬರಹ ಬರೆಯೋಕಾಗಲ್ಲ" ಅಂತ ಎಗರಾಡಿದ್ದರು.

ಈ ವಿಚಾರದಲ್ಲಿ ಮಾಗಡಿ ಶಾಸಕ ಬಾಲಕೃಷ್ಣ ಕೂಡ ಹಿಂದುಳಿಯಲಿಲ್ಲ. "ಕುಮಾರಸ್ವಾಮಿ ತಮ್ಮ ಬಳಿ ಹಕ್ಕ-ಬುಕ್ಕರನ್ನು ಇಟ್ಟುಕೊಂಡಿದ್ದಾರೆ. ಈ ಹಕ್ಕ-ಬುಕ್ಕರು ನಮ್ಮನ್ನು ಪಕ್ಷದಿಂದ ಹೊರಹಾಕಬೇಕೆಂದುಕೊಂಡಿದ್ದಾರೆ. ನಮ್ಮನ್ನೆಲ್ಲಾ ಹೊರಹಾಕಿದರೆ ಅವರು ಮೆರೆಯಬಹುದು ಎಂದುಕೊಂಡು ಹೀಗೆಲ್ಲಾ ಮಾಡುತ್ತಿದ್ದಾರೆ. ನಾವು ಕುಮಾರಣ್ಣನನ್ನು ಸಿಎಂ ಮಾಡುತ್ತೇವೆ ಎಂದು ಹೇಳಿದ್ದೆವು. ಆದರೆ ಅವರು ನಮ್ಮ ಸಹಕಾರ ಬೇಡ ಅಂದಿದ್ದಾರೆ. ಅಷ್ಟದಿಕ್ಪಾಲಕರನ್ನು ಬಿಟ್ಟು ಹಕ್ಕ-ಬುಕ್ಕರನ್ನು ಕಟ್ಟಿಕೊಂಡು ಮುಖ್ಯಮಂತ್ರಿಯಾಗಲಿ ನೋಡೋಣ" ಅಂತ ಬಿಸಿ ಮುಟ್ಟಿಸಿದ ಬಾಲಕೃಷ್ಣ ಹಕ್ಕ-ಬುಕ್ಕರು ಯಾರೆಂಬ ಗುಟ್ಟು ಬಿಟ್ಟುಕೊಡಲಿಲ್ಲ.

ಈ ವಾಗ್ದಾಳಿಗಳಿಗೆಲ್ಲ ಸೆಪ್ಟೆಂಬರ್ 2ರ ಸಿನಿಮಾ ಫಂಕ್ಷನ್ ಮೂಲಕ ಕುಮಾರಣ್ಣ ಉತ್ತರ ಕೊಡಲು ಸಜ್ಜಾಗುತ್ತಿದ್ದಾರೆ. ಜಿಲ್ಲಾ ಜೆಡಿಎಸ್ ನಾಯಕರ ಜೊತೆ ಸತತ ಸಂಪರ್ಕದಲ್ಲಿರುವ ಕುಮಾರಣ್ಣ ಜಾಗ್ವಾರ್ ಸಿನಿಮಾದ ಆಡಿಯೋ ರಿಲೀಸ್ ಕಾರ್ಯಕ್ರಮದ ಉಸ್ತುವಾರಿಯನ್ನು ನಿರ್ದೇಶಕ ಹರ್ಷನಿಗೆ ವಹಿಸಿದ್ದಾರೆ. ಅಂದಹಾಗೆ, "ಅಕ್ಟೋಬರ್‌ನಲ್ಲಿ ನನ್ನ ಮಗನ ಸಿನಿಮಾ 'ಜಾಗ್ವಾರ್' ರಿಲೀಸ್ ಆದನಂತರ ನವೆಂಬರ್‌ನಲ್ಲಿ ನನ್ನ ರಾಜಕೀಯ ಜಾಗ್ವಾರ್ ಶುರುವಾಗಲಿದೆ" ಎಂದು ಕುಮಾರಣ್ಣ ಹೊಸ ಸುಳಿವೊಂದನ್ನು ಕೊಟ್ಟಿರೋದು ಬಂಡಾಯಗಾರರಲ್ಲಿ ಸಣ್ಣ ಗೊಂದಲ ಸೃಷ್ಟಿಸಿರುವುದು ಸುಳ್ಳಲ್ಲ.

ಎಡಬಿಡಂಗಿ ಬಾಬಣ್ಣ

ಜೆಡಿಎಸ್ ದಳಪತಿಗಳು ಮತ್ತು ಭಿನ್ನಮತೀಯರ ನಡುವೆ ದಿನಕ್ಕೊಂದು ಸವಾಲು-ಪಾಟಿ ಸವಾಲಿನ ಸೀರಿಯಸ್ ಹೈಡ್ರಾಮಾ ನಡೆಯುತ್ತಿದ್ದರೆ, ಅದರ ನಡುವೆ ಶ್ರೀರಂಗಪಟ್ಟಣದ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ತನ್ನ ಎಡಬಿಡಂಗಿ ಆಟದಿಂದ ಅಕ್ಷರಶಃ ಜೋಕರ್‌ನಂತೆ ಜನರನ್ನು ರಂಜಿಸುತ್ತಿದ್ದಾರೆ. ಚಲುವಣ್ಣ, ಜಮೀರ್, ಬಾಲಕೃಷ್ಣರಂತೆ ಸ್ವಂತ ಶಕ್ತಿಯ ಮೇಲೆ ನಿಲ್ಲುವ ತಾಕತ್ತು ಈ ಬಾಬುಗೆ ಇಲ್ಲ. ಹಾಗಾಗಿ ಒಮ್ಮೆ ಅತ್ತ ಮತ್ತೊಮ್ಮೆ ಇತ್ತ ವಾಲಾಡುತ್ತಾ ಬಾಯಿಗೆಬಂದಂತೆ ಮಾತಾಡಿಕೊಂಡು ಕಾಮಿಡಿ ಪೀಸ್ ಆಗಿಹೋಗಿದ್ದಾರೆ. ಚೆಲುವಣ್ಣನ ಬಂಡಾಯಗಾರರ ಜೊತೆ ಗುರುತಿಸಿಕೊಳ್ಳುತ್ತಲೇ "ನಾನು ಪಕ್ಷ ಬಿಡುವುದಿಲ್ಲ. ಈ ಬಗ್ಗೆ ಕುಮಾರಣ್ಣನ ಜೊತೆ ಮಾತನಾಡುತ್ತೇನೆ. ಅಪ್ಪಾಜಿ ಹಾಗೂ ಕುಮಾರಸ್ವಾಮಿ ವಿರುದ್ಧ ಹೋಗುವುದಿಲ್ಲ" ಅಂತ ಬಡಬಡಿಸುತ್ತಾರೆ. ಮೊನ್ನೆಯಷ್ಟೇ ತನ್ನ ತಾಯಿ ವಿಜಯಲಕ್ಷ್ಮ ಬಂಡಿಸಿದ್ದೇಗೌಡರ ಹುಟ್ಟುಹಬ್ಬದ ಜಾಹೀರಾತಿನಲ್ಲಿ ದೇವೇಗೌಡ ಹಾಗೂ ಕುಮಾರಣ್ಣನ ಫೋಟೋ ಹಾಕಿಸಿಕೊಂಡು ಮತ್ತೆ ನಗೆಪಾಟಲಿಗೆ ಈಡಾಗಿದ್ದಾರೆ. ದೇವೇಗೌಡ-ಕುಮಾರಸ್ವಾಮಿ ಬಲವಿಲ್ಲದಿದ್ದರೆ ಶ್ರೀರಂಗಪಟ್ಟಣದಲ್ಲಿ ರಮೇಶ್‌ಬಾಬು ಮಣ್ಣು ಮುಕ್ಕುವುದು ಗ್ಯಾರಂಟಿ.


ಕಳೆದ ಚುನಾವಣೆಯಲ್ಲಿ ಅಂಬರೀಶ್ ತನ್ನ ಶಿಷ್ಯ ಲಿಂಗರಾಜನನ್ನು ಕಣಕ್ಕಿಳಿಸದಿದ್ದರೆ ರವೀಂದ್ರ ಶ್ರೀಕಂಠಯ್ಯನ ಎದುರು ರಮೇಶ್‌ಬಾಬು ಸೋಲುತ್ತಿದ್ದ. ಆದರೆ ಅಂಬಿಯ ಕೃಪೆಯಿಂದ 2ನೇ ಬಾರಿ ಶಾಸಕನಾಗಿದ್ದಾನೆ. ಆದರೆ ಯಾವಾಗ ಚೆಲುವಣ್ಣ ಜೊತೆ ಸೇರಿಕೊಂಡು ಗೌಡರಿಗೆ ಉಲ್ಟಾ ಹೊಡೆದನೋ ಆಗಿನಿಂದ ಜೆಡಿಎಸ್ ಕಾರ್ಯಕರ್ತರೂ ಇವನ ಜೊತೆ ಸೇರುತ್ತಿಲ್ಲ. 10 ದಿನಗಳ ಹಿಂದೆ ಗ್ರಾಮಾಂತರ ಪೊಲೀಸ್ ಠಾಣೆ ಉದ್ಘಾಟನೆಗೆ ಗೃಹಸಚಿವ ಪರಮೇಶ್ವರ್ ಬಂದಾಗ ಲೋಕಲ್ ಎಂಎಲ್‌ಎ ಪರವಾಗಿ 50 ಮಂದಿಯಷ್ಟೂ ಜೆಡಿಎಸ್ ಕಾರ್ಯಕರ್ತರಿರದಿರುವುದು ಅವನ ವರ್ಚಸ್ಸನ್ನು ತೋರಿಸಿಕೊಡುತ್ತದೆ. ಕೊನೆಗೆ ಕಾಲೇಜು ವಿದ್ಯಾರ್ಥಿಗಳನ್ನು ಕಾರ್ಯಕ್ರಮಕ್ಕೆ ಕರೆತಂದು ಮಾನ ಉಳಿಸಿಕೊಳ್ಳಬೇಕಾಯ್ತು. ಹಾಗೆ ನೋಡಿದರೆ, ಕಾಂಗ್ರೆಸ್‌ನ ರವೀಂದ್ರ ಶ್ರೀಕಂಠಯ್ಯ ನೂರಾರು ಸಂಖ್ಯೆಯಲ್ಲಿ ಬೆಂಬಲಿಗರನ್ನು ಜಮಾಯಿಸಿ ಗೃಹಸಚಿವರ ಮಾನ ಉಳಿಸಿದ್ದರು. ತನ್ನ ಭವಿಷ್ಯದ ದಿನಗಳು ಈಗಲೇ ಸ್ಪಷ್ಟವಾಗಿ ಗೋಚರಿಸುತ್ತಿರುವುದರಿಂದ ರಮೇಶ್‌ಬಾಬು ಎಡಬಿಡಂಗಿಯಂತಾಡುತ್ತಿದ್ದಾರೆ.

ಅದೇನೇ ಇರಲಿ, ಒಂದು ಕಾಲಕ್ಕೆ ಜೆಡಿಎಸ್‌ನ ಭದ್ರಕೋಟೆಯಂತಿದ್ದ ಮಂಡ್ಯ ಇವತ್ತು ಒಡೆದ ಮನೆಯಾಗಿದೆ. ಚೆಲುವಣ್ಣನ ವಿರೋಧದ ನಡುವೆ ಮದ್ದೂರು ಶಾಸಕ ಕೆ. ಗೌಡರ ಬೀಗ ಡಿ.ಸಿ.ತಮ್ಮಣ್ಣ, ಸಂಸದ ಪುಟ್ಟರಾಜು, ನಾರಾಯಣಗೌಡ, ಅಪ್ಪಾಜಿಗೌಡರಂತವರು ಜೆಡಿಎಸ್ ಕಟ್ಟಲು ಹೆಣಗಾಡುತ್ತಿದ್ದಾರೆ. 2018ರ ಚುನಾವಣೆ ವೇಳೆಗೆ ಜೆಡಿಎಸ್ ಪಕ್ಷದ ಕಥೆ ಏನಾಗುವುದೋ ಎಂಬ ಕುತೂಹಲ ಮಂಡ್ಯದ ಜನರಲ್ಲಿದೆ.


■ ವರದಿಗಾರ



ಚಲುವಣ್ಣನ ಮಗನ ಹ್ಯಾಪಿಬರ್ತ್‌ಡೇ ಧ್ವನಿಸುರುಳಿ ಬಿಡುಗಡೆ ಸಮಾರಂಭ



ಸರ್‌ಎಂವಿ ಕ್ರೀಡಾಂಗಣ ವೀಕ್ಷಿಸುತ್ತಿರುವ ಕುಮಾರಸ್ವಾಮಿ



ಜಿಎಸ್‌ಟಿ, ವಾಸ್ತವವೇನು?-1

ಸಂಸತ್ತಿನಲ್ಲಿ 'ಭಯೋತ್ಪಾದಕ' ಭಾ

'ನಾವಿಂದು ತೆರಿಗೆ ಭಯೋತ್ಪಾದನೆಯನ್ನು ಕೊನೆಗೊಳಿಸುತ್ತಿದ್ದೇವೆ' ಇದು ಸ್ವತಃ ದೇಶದ ಪ್ರಧಾನಿ ನರೇಂದ್ರ ಮೋದಿಯವರು ಸಂಸತ್ತಿನಲ್ಲಿ ಹೇಳಿದ ಮಾತು. ಜಿಎಸ್‌ಟಿ ಎಂಬ ಹೊಸ ತೆರಿಗೆ ವ್ಯವಸ್ಥೆಯ ಕುರಿತ ಚರ್ಚೆಯ ಸಂದರ್ಭದಲ್ಲಿ ಅವರು ಬಳಸಿದ ಈ ಭಾಷೆ ಬಹಳ ಆಶ್ಚರ್ಯಕರವಾದುದೇನಲ್ಲ, ಆದರೆ, ಈ ಮೂಲಕ ಅವರು ಕೊಡಲು ಹೊರಟ ಸಂದೇಶ ಮಾತ್ರ ಪ್ರಶ್ನಾರ್ಹವಾದುದು. ದುರಂತವೆಂದರೆ, ಈ 'ಭಯೋತ್ಪಾದಕ' ಸಂವಿಧಾನ ತಿದ್ದುಪಡಿಗೆ (ಎಐಎಡಿಎಂಕೆಯ ಗೈರುಹಾಜರಿ ಪ್ರತಿರೋಧವನ್ನು ಹೊರತುಪಡಿಸಿ) ರಾಜ್ಯಸಭೆಯಲ್ಲಿ ಅವಿರೋಧ ಬೆಂಬಲ ವ್ಯಕ್ತವಾಯಿತು. ಸರಕು ಮತ್ತು ಸೇವಾ ತೆರಿಗೆ (**Goods & Service Tax-GST**) ಎಂಬುದು ಏನು ಎಂಬುದರ ಕುರಿತು, ರಾಜ್ಯಸಭೆಯಲ್ಲಿ ಅನುಮೋದನೆಯಾದ ನಂತರದ ದಿನ ಹಲವು ಪತ್ರಿಕೆಗಳಲ್ಲಿ ಪೂರ್ಣಪುಟದ ವಿವರಗಳು ಬಂದಿವೆ. ಆದರೂ, ಇದು ಯಾಕಾಗಿ ಬಂದಿದೆ? ಎಲ್ಲಾ ಪಕ್ಷಗಳೂ ಇದಕ್ಕೆ ಬೆಂಬಲ ಸೂಚಿಸಿದ್ದರ ಅರ್ಥವೇನು? ಮುಂದಿನ ದಿನಗಳಲ್ಲಿ ಇದರಿಂದ ದೇಶದ ಜನಸಾಮಾನ್ಯರಿಗೆ ಒಳ್ಳೆಯದಾಗುತ್ತದಾ, ಕೆಟ್ಟದಾಗುತ್ತದಾ? ದೇಶದ ದೊಡ್ಡ ಉದ್ದಿಮೆಪತಿಗಳಿಗೆ ಇದರಿಂದ ಒಳ್ಳೆಯದಾಗುತ್ತದಾ, ಕೆಟ್ಟದಾಗುತ್ತದಾ? ಜನಸಾಮಾನ್ಯರಿಗೂ ಒಳ್ಳೆಯದಾಗಿ, ಈ ಉದ್ದಿಮೆಪತಿಗಳಿಗೂ ಒಳ್ಳೆಯದಾಗುವ ಮ್ಯಾಜಿಕ್ ಏನಾದರೂ ಇದರಲ್ಲಿ ಇದೆಯಾ? ಈ ಅಂಶಗಳ ಕುರಿತು ಒಂದು ಸ್ಪಷ್ಟ ಚಿತ್ರಣವನ್ನು ಅವು ಕಟ್ಟಿಕೊಡಲಾಗಿಲ್ಲ.


ರಾಜ್ಯಸಭೆಯ ಸದಸ್ಯರೂ ಆಗಿರುವ ಸಿಪಿಎಂ ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯಚೂರಿಯವರು ಉದ್ದೇಶಿತ ಸಂವಿಧಾನ ತಿದ್ದುಪಡಿಯ ಕುರಿತು ಹಲವು ಆಕ್ಷೇಪಣೆಗಳನ್ನು ಎತ್ತಿದರು. ಆದರೆ, ಅಂತಿಮವಾಗಿ ಅವರೂ ಈ ತಿದ್ದುಪಡಿಗೆ ಬೆಂಬಲ ಸೂಚಿಸಿದರು. ಕಾಂಗ್ರೆಸ್ ಪಕ್ಷವು ಈ ಸಂವಿಧಾನ ತಿದ್ದುಪಡಿಗೆ ತಿದ್ದುಪಡಿಯನ್ನು ಸೂಚಿಸಿತ್ತು. ಅದನ್ನು ಆಳುವ ಸರ್ಕಾರವು ಒಳಗೊಳ್ಳಲಿಲ್ಲ, ಆದರೂ ಕಾಂಗ್ರೆಸ್ ಪಕ್ಷವು ಬೆಂಬಲ ಸೂಚಿಸಿ ಅದು ಸರಾಗವಾಗಿ ಪಾಸಾಗಲು ಅನುವು ಮಾಡಿಕೊಟ್ಟಿತು. ಇದೇಕೆ ಹೀಗೆ? ಸಾಮಾನ್ಯವಾಗಿ ಎಡಪಕ್ಷಗಳು ಸಾಮಾನ್ಯ ಜನರ ಪರವಾದ ವಿಚಾರಗಳನ್ನು ಮುಂದಿಡುತ್ತವೆ ಎಂದು ನಂಬಲಾಗುತ್ತದಾದ್ದರಿಂದ, ಈ ರೀತಿಯ ದ್ವಂದ್ವ ನಿಲುವು ಅವರೇಕೆ ತೆಗೆದುಕೊಂಡರು ಎಂಬುದೂ ಒಂದಷ್ಟು ಗೊಂದಲ ಮೂಡಿಸುತ್ತದೆ. ಈ ಹಿನ್ನೆಲೆಯಲ್ಲಿ ಈ ಅಂಕಣದಲ್ಲಿ 2-3 ಕಂತುಗಳಲ್ಲಿ ಜಿಎಸ್‌ಟಿಯ ವಿಚಾರವನ್ನು ಚರ್ಚಿಸಲಾಗುತ್ತದೆ.

ಜಿಎಸ್‌ಟಿ ಚರ್ಚೆಗೆ ಹೋಗುವ ಮುನ್ನ, ಮೋದಿಯವರು ಬಳಸಿದ ಭಾಷೆಯ ಕುರಿತು ಮೊದಲು ಚರ್ಚಿಸುವ ಅಗತ್ಯವಿದೆ. 'ಈ ಮೂಲಕ ನಾವು ತೆರಿಗೆ ಭಯೋತ್ಪಾದನೆಯನ್ನು ಕೊನೆಗೊಳಿಸಿಕೊಳ್ಳುತ್ತೇವೆ' ಎಂದು ಹೇಳುವ ಮಟ್ಟಕ್ಕೆ, ಈ ದೇಶದಲ್ಲಿ ತೆರಿಗೆಯು ಜನಸಾಮಾನ್ಯರಿಗೆ ತೊಂದರೆ ಕೊಡುತ್ತಿತ್ತೇ ಅಥವಾ ಇದು ಮೋದಿಯವರು ಸಾಮಾನ್ಯವಾಗಿ ಬಳಸುವ 'ಬಣ್ಣದ ಮಾತುಗಳ' ಭಾಗವಾಗಿ ಉದುರಿರುವ ಅಣಿಮುತ್ತು ಅಷ್ಟೇನಾ? ಇದು ಅಷ್ಟೇ ಅಲ್ಲ, ಇದಕ್ಕೆ ಒಂದು ಹಿನ್ನೆಲೆಯಿದೆ. **Minimum government, Maximum governance** ಎನ್ನುವುದು ಮೋದಿಯಂತಹವರ ಧ್ಯೇಯವಾಕ್ಯಗಳಲ್ಲೊಂದು. **Minimum Government** ಎಂದಾಗ ಅದು ಕಡಿಮೆ ತೆರಿಗೆ ಎಂಬುದನ್ನೂ ಧ್ವನಿಸಬೇಕು ಎಂಬುದು ಅಂತಹವರ ಆಶಯವಾಗಿರುತ್ತದೆ. ಈ **Minimum** ಮತ್ತು **Maximum** ಎಂಬುದು ಭಾರತದಲ್ಲಿ ಮಾತ್ರವಲ್ಲದೇ, ಅಮೆರಿಕದಂತಹ ದೇಶಗಳಲ್ಲೂ ಅಧ್ಯಕ್ಷೀಯ ಚುನಾವಣೆಗಳಲ್ಲೂ ಚರ್ಚೆಗೊಳಗಾಗುವ ಅಂಶಗಳಲ್ಲಿ ಒಂದಾಗಿದೆ.

ಇಂತಹ ಮಾತನ್ನು ನರೇಂದ್ರ ಮೋದಿ, ತಮ್ಮ ಅಮೆರಿಕ ಭೇಟಿಯಲ್ಲೂ ಅನಿವಾಸಿ ಭಾರತೀಯರನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಹೇಳಿದ್ದರು. 'ಭಾರತದ ಹಿಂದಿನ ಸರ್ಕಾರವು ತಾನು ಯಾವ್ಯಾವ ಹೊಸ ಕಾನೂನುಗಳನ್ನು ತಂದೆ ಎಂಬುದನ್ನು ಕೊಚ್ಚಿಕೊಳ್ಳುತ್ತಿತ್ತು, ತಾನು ಯಾವ್ಯಾವ ಕಾನೂನನ್ನು ಕಿತ್ತುಹಾಕಬೇಕು ಎಂದು ಯೋಚಿಸುವ ವ್ಯಕ್ತಿ. ಸಾಧ್ಯವಾದರೆ, ಪ್ರತೀ ದಿನವೂ ಒಂದೊಂದು ಕಾನೂನನ್ನು ಕಿತ್ತುಹಾಕಲು ನಾನು ಬಯಸುತ್ತೇನೆ'. ಈ ಎಲ್ಲಾ ಮಾತುಗಳ ಅರ್ಥ ಇಷ್ಟೇ. 'ನಾವು ಸಾಧ್ಯವಾದಷ್ಟೂ ಆಡಳಿತವನ್ನು ಸರಳಗೊಳಿಸಲು ಬಯಸುತ್ತೇವೆ. ಜನರ ಮೇಲೆ ಹೇರಲಾಗುವ ನೂರೆಂಟು ಬಗೆಯ ತೆರಿಗೆಗಳನ್ನೂ ಕಡಿಮೆ ಮಾಡುತ್ತೇವೆ. ಜನರ ಬದುಕಿನಲ್ಲಿ ಸರ್ಕಾರದ ಅನಗತ್ಯ ಮಧ್ಯಪ್ರವೇಶ ಕಡಿಮೆ ಮಾಡುತ್ತೇವೆ. ಆದರೆ, ನಿಮಗೆ ಬೇಕಿರುವ ಸವಲತ್ತುಗಳನ್ನೆಲ್ಲವೂ ಹೆಚ್ಚೆಚ್ಚು ಕೊಡುತ್ತೇವೆ' ಎಂದು ಮೋದಿ ಹೇಳಲು ಬಯಸಿದ್ದಾರೆ.

ಇವೆಲ್ಲವೂ ನಿಜ. ಆದರೆ, ಅದಕ್ಕೆ ಒಂದು ತಿದ್ದುಪಡಿ ಮಾಡಿಕೊಳ್ಳಬೇಕು ಅಷ್ಟೇ. ಅದೇನೆಂದರೆ, ಜನರು ಎನ್ನುವ ಜಾಗದಲ್ಲಿ ದೊಡ್ಡ ಉದ್ದಿಮೆಪತಿಗಳು, ಬಂಡವಾಳಿಗರು ಅಥವಾ ಭಾರೀ ಸಂಬಳ ಪಡೆಯುವ ಮೇಲ್ಮಧ್ಯಮ ವರ್ಗದವರು ಎಂದು ಹಾಕಿಕೊಳ್ಳಬೇಕು. ಏಕೆಂದರೆ, ನಮಗೆ ಈ ಸರ್ಕಾರದ ನೂರೆಂಟು ನಿರ್ಬಂಧಗಳಿಂದ ತೊಂದರೆಯಾಗುತ್ತಿದೆ ಎಂದು ಮಿಕ್ಕವರಿಗಿಂತ ಹೆಚ್ಚು ಬೊಬ್ಬೆ ಹೊಡೆಯುತ್ತಿರುವುದು ಇದೇ ವರ್ಗ. ಇವರೇ 'ನಾವು ತೆರಿಗೆ ಕಟ್ಟುತ್ತೇವೆ, ಆದರೆ ಸರ್ಕಾರವು ನಮ್ಮ ತೆರಿಗೆ ಹಣದಿಂದ ಬಡವರಿಗೆ ಹತ್ತು ಹಲವು ರೀತಿಯ ಸೌಲಭ್ಯಗಳನ್ನು ನೀಡುತ್ತದೆ. ಆ ಮೂಲಕ ಆ ಸೋಮಾರಿಗಳನ್ನು ಮತ್ತಷ್ಟು ಸೋಮಾರಿಗಳನ್ನಾಗಿ ಮಾಡುತ್ತಿದೆ' ಎಂದು ಹೇಳುವವರು.

ಹೌದು, ಈ ಜಿಎಸ್‌ಟಿ ಎಂಬುದು ಈ ಜನವರ್ಗಕ್ಕೆ ಅನುಕೂಲ ಮಾಡಿಕೊಡಲೆಂದೇ ಸೃಷ್ಟಿಯಾಗಿರುವುದು. ಈ ವರ್ಗಕ್ಕೇ ತೆರಿಗೆಯು ಭಯೋತ್ಪಾದನೆಯನ್ನು ಉಂಟುಮಾಡುತ್ತಿತ್ತು. ಹಾಗಾಗಿಯೇ ಈ ವರ್ಗದ ತುದಿಯಲ್ಲಿ ಇದ್ದ, ಇರುವ ಕುಬೇರರು ತೆರಿಗೆಯನ್ನು ತಪ್ಪಿಸಿ ಹಣವನ್ನು ದೂರದೇಶಗಳಲ್ಲಿ ಬಚ್ಚಿಡುತ್ತಿದ್ದರು. ಕಪ್ಪು ಹಣ ಎಂದರೆ ಇದೇ. ತೆರಿಗೆ ತಪ್ಪಿಸಿ ಬಚ್ಚಿಟ್ಟ ಈ ಹಣವನ್ನು ತಂದು ದೇಶದ ಪ್ರತಿಯೊಬ್ಬ ಪ್ರಜೆಯ ಬ್ಯಾಂಕ್ ಅಕೌಂಟಿಗೆ ತಲಾ 15 ಲಕ್ಷ ಹಣವನ್ನು ಜಮಾಯಿಸುತ್ತೇನೆಂಬ ಮಾತನ್ನು ಇದೇ ಮೋದಿ ಹೇಳಿದ್ದರು. ಆದರೆ, ಅವರ ನಂಬಿಕಸ್ತ ಹಣಕಾಸು ಮಂತ್ರಿಯು, ಕಪ್ಪು ಹಣವನ್ನು ತರಿಸುವುದು ಹೋಗಲಿ, ಅದನ್ನು ಬಿಳಿ ಹಣವನ್ನಾಗಿಸಲು ಈ ಬಜೆಟ್‌ನಲ್ಲಿ ವಿಶೇಷ ಆಫರ್ ಕೊಟ್ಟರು. ಆ ಹಣದಲ್ಲಿ ಶೇ.45 ರಷ್ಟನ್ನು ಸರ್ಕಾರಕ್ಕೆ ಕಟ್ಟಿಬಿಟ್ಟರೆ, ನಿಮ್ಮ ಈ ಆದಾಯದ ಮೂಲ ಏನು ಎಂದು ನಾವು ಕೇಳುವುದಿಲ್ಲ, ಉಳಿದ ಹಣವು ಕಾನೂನುಬದ್ಧವಾಗಿ ನಿಮ್ಮದೇ ಎಂದು ನಾವು ಸರ್ಟಿಫಿಕೇಟ್ ಕೊಡುತ್ತೇವೆ ಎಂದು ಅರುಣ್ ಜೇಟ್ಲಿ ಹೇಳಿದ್ದರು. ಆದರೆ, ಭವಿಷ್ಯದಲ್ಲಿ ಕಪ್ಪು ಹಣ ಕಡಿಮೆಯಾಗುತ್ತದೆ, ಏಕೆಂದರೆ ಸದರಿ ಜಿಎಸ್‌ಟಿಯಿಂದ ಕಪ್ಪು ಆರ್ಥಿಕತೆಯೂ ಕಡಿಮೆಯಾಗುತ್ತದೆ ಎಂದು ಹೇಳಲಾಗುತ್ತಿದೆ. ಇವೆಲ್ಲದರ ಸತ್ಯಾಸತ್ಯತೆಯನ್ನು ಪರಿಶೀಲಿಸಬೇಕೆಂದರೆ, ಆರ್ಥಿಕತೆಯ ಕುರಿತ ಕೆಲವು ಮೂಲಭೂತ ಅಂಶಗಳನ್ನು ಮೊದಲು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.



ಸರ್ಕಾರಕ್ಕೆ ಬರುವ ತೆರಿಗೆ ಆದಾಯದಲ್ಲಿ ಎರಡು ಬಗೆಗಳಿವೆ. ನೇರ ತೆರಿಗೆ ಮತ್ತು ಪರೋಕ್ಷ ತೆರಿಗೆ. ಪರೋಕ್ಷ ತೆರಿಗೆಯನ್ನು ಉತ್ಪಾದನಾ ಪ್ರಕ್ರಿಯೆಯ ಮೇಲೆ (ಅಬಕಾರಿ ತೆರಿಗೆ), ಮಾರಾಟದ ಮೇಲೆ (ಮಾರಾಟ ತೆರಿಗೆ sales tax), ಸಾಗಾಣಿಕೆಯ ಮೇಲೆ (ಆಕ್ಟ್ರಾಯ್ ಅಥವಾ ಪ್ರವೇಶ ತೆರಿಗೆ - ಇದು ಎಲ್ಲಾ ಕಡೆಯೂ ಇಲ್ಲ), ಆಮದಿನ ಮೇಲೆ (ಕಸ್ಟಮ್ಸ್ ತೆರಿಗೆ) ಹಾಕಲಾಗುತ್ತದೆ. ಇದಲ್ಲದೇ, ಮನರಂಜನೆ ತೆರಿಗೆ, ರಾಜ್ಯ ಸೆಸ್, ಹೆಚ್ಚುವರಿ ಅಬಕಾರಿ ತೆರಿಗೆ, ಕೇಂದ್ರೀಯ ಮಾರಾಟ ತೆರಿಗೆ ಇತ್ಯಾದಿಗಳೂ ಇರುತ್ತವೆ. ಇದರಲ್ಲೇ ಐಷಾರಾಮಿ ವಸ್ತುಗಳಿಗೆ ಮತ್ತು ಸೇವೆಗಳಿಗೆ ಹೆಚ್ಚು ತೆರಿಗೆ ಮತ್ತು ಜನಸಾಮಾನ್ಯರು ಬಳಸುವ ವಸ್ತು ಮತ್ತು ಸೇವೆಗಳಿಗೆ ಕಡಿಮೆ ತೆರಿಗೆ ಎಂದ ವಿಭಾಗೀಕರಣವೂ ಇರುತ್ತದೆ. ಏಕೆಂದರೆ, ಮನುಷ್ಯರ ಅಗತ್ಯಗಳ ಮೇಲೆ ತೆರಿಗೆ ಹಾಕಬಾರದು, ಐಷಾರಾಮದ ಮೇಲೆ ಹೆಚ್ಚು ತೆರಿಗೆ ಹಾಕಬೇಕು ಎಂಬುದು ಅದರ ಹಿಂದಿನ ಆಲೋಚನೆ.

ನೇರ ತೆರಿಗೆ ಎಂದರೆ, ಅದು ಆದಾಯದ ಮೇಲೆ ಹಾಕುವ ತೆರಿಗೆ. ಅಂದರೆ ಶ್ರೀಮಂತರಿಗೆ ಹಾಕುವ ತೆರಿಗೆ. ಇದರಲ್ಲಿ ಆದಾಯ ತೆರಿಗೆ, ಸಂಪತ್ತಿನ ತೆರಿಗೆ, ವಹಿವಾಟು ತೆರಿಗೆ, ಕಾರ್ಪೋರೇಟ್ ತೆರಿಗೆ ಇತ್ಯಾದಿಗಳು ಇವೆ.

ಇವೆರಡರಲ್ಲಿ ಯಾವುದು ಹೆಚ್ಚಳವಾದರೆ ಅದನ್ನು ತೆರಿಗೆ ಭಯೋತ್ಪಾದನೆ ಎನ್ನಬೇಕು? ಜನಸಾಮಾನ್ಯರ ಬ
ಅಗತ್ಯಗಳ ಮೇಲೆ ತೆರಿಗೆ ಹೆಚ್ಚಾದರೆ, ಅವರು ಬದುಕ
ದುಸ್ತರವಾಗುತ್ತದೆ. ಶ್ರೀಮಂತರ ಐಷಾರಾಮದ
ತೆರಿಗೆ ಹೆಚ್ಚಾದರೆ, ಅವರು ತಿಜೋರಿಯಲ್ಲಿ ಕೂ
ಅಥವಾ ಲಾಭಕ್ಕಾಗಿ ಮತ್ತೆ ಮತ್ತೆ ಹೂಡಿಕೆ ಮ
ಹಣದ ಪ್ರಮಾಣ ಸ್ವಲ್ಪ ತಗ್ಗುತ್ತದೆ ಅಷ್ಟೇ. ಮೇ
ವರ್ಗದವರಿಗೂ ಐಷಾರಾಮ ಸ್ವಲ್ಪ ಕಡಿಮೆಯಾ
ಹಾಗಾಗಿ ಪರೋಕ್ಷ ತೆರಿಗೆ ವಿಪರೀತ ಹೆಚ್ಚಾದರೆ,
ತೆರಿಗೆ ಭಯೋತ್ಪಾದನೆ ಎನ್ನಬೇಕು. ವಾಸ್ತವ ವಿ
ಕಳೆದ 20 ವರ್ಷಗಳಲ್ಲಿ ಈ ದೇಶದಲ್ಲಿ ಪರೋಕ್ಷ ತೆ
ಪ್ರಮಾಣ ದಿನೇದಿನೇ ಹೆಚ್ಚಾಗುತ್ತಿದೆ ಮತ್ತು ಪ್ರತ್ಯಕ್ಷ ತ
ಪ್ರಮಾಣ ತಗ್ಗುತ್ತಿದೆ. ಅಂದರೆ, ಜನಸಾಮಾನ್ಯರ
ಭಯೋತ್ಪಾದಕ ದಾಳಿ ನಡೆಯುತ್ತಿದೆ. ಈ ಜಿ
ಎನ್ನುವುದು ಅದನ್ನು ಮತ್ತಷ್ಟು ಹೆಚ್ಚಿಸುತ್ತದೆ.
ತೆರಿಗೆ ಭಯೋತ್ಪಾದನೆಯನ್ನು ಹೆಚ್ಚು ಮಾಡುವುದೇ
ಉದ್ದೇಶ. ಹೀಗಿದ್ದರೂ, ನರೇಂದ್ರ ಮೋದಿಯವರು
ಭಯೋತ್ಪಾದನೆಯನ್ನು ಕೊನೆಗೊಳಿಸಲಾಗ
ಎನ್ನುತ್ತಾರೆಂದರೆ, ಅವರ ಪ್ರಕಾರ ಜನರು ಎಂದರೆ
ಎಂಬ ಪ್ರಶ್ನೆ ಏಳುತ್ತದೆ.

ಜಿಎಸ್‌ಟಿಯ ಕುರಿತು ಚರ್ಚಿಸುವಾಗ
ಪಂಡಿತರು ಈ ರೀತಿ ಹೇಳುತ್ತಾರೆ: 'ಎಲ್ಲದಕ್ಕೂ ಒಳ್ಳೆ
ಮತ್ತು ಕೆಟ್ಟದ್ದು ಇರುವ ಹಾಗೆ, ಇದರಲ್ಲೂ ಸಕಾ
ಮತ್ತು ನಕಾರಾತ್ಮಕ ಅಂಶಗಳಿವೆ; ಆದರೆ, ಮುಂದೆ ಇ
ಎಲ್ಲರಿಗೂ ಒಳ್ಳೆಯದಾಗುತ್ತದೆ'. ಈ ಮಾತುಗಳನ್ನು
ಕೇಳಿದ ಹಾಗೆ ಇದೆಯಲ್ಲಾ ಎಂದು ನಿಮಗನ್ನಿಸಿದರೆ ತ
ಜಾಗತೀಕರಣ ನೀತಿಗಳು ದೇಶದಲ್ಲಿ ದಾಂಗುಡಿಯಿ
ಆರಂಭಿಸಿದಾಗ ಇಂತಹ ವಾದವನ್ನು ಕೆಲವು ಪಂ
ಮುಂದಿಟ್ಟರು. ಇದೇ ಭಾಷೆಯಲ್ಲಿ ನಮ್ಮ ಪಠ್ಯಪುಸ್ತಕ
ಪಾಠಗಳಿರುತ್ತವೆ. ಅದರಲ್ಲಿ 'ಜಾಗತೀಕರಣದ ಒಳಿ
ಮತ್ತು ಕೆಡುಕುಗಳು' ಎಂಬುದು ಒಂದು ಪಾಠ.
ನೀತಿಗಳಿಂದ ಲಕ್ಷಾಂತರ ಸಂಖ್ಯೆಯಲ್ಲಿ ಆ
ಮಾಡಿಕೊಂಡರೆ ಅದು ಜಾಗತೀಕರಣದ 'ಕೆ
(ಆತ್ಮಹತ್ಯೆಗಳು ಜಾಗತೀಕರಣದ ಫಲ ಎಂ
ಪಠ್ಯಪುಸ್ತಕಗಳು ಹೇಳುವುದಿಲ್ಲ). ಅದರಿಂದ ಕೆಲವು
ದೊಡ್ಡ ಕಂಪೆನಿಗಳು ಹೆಚ್ಚೆಚ್ಚು ಹೂಡಿಕೆ ಮಾಡಿ,
ಲಾಭ ಸಂಪಾದನೆ ಮಾಡಿದರೆ ಅದು ಜಾಗತೀ
ಒಳಿತು. ಇವೆರಡೂ ಒಂದೇ ಅಲ್ಲವೇ, ಜನಸಾಮ
ಕೆಡುಕು ಮತ್ತು ಉಳ್ಳವರಿಗೆ ಒಳಿತು ಎಂದು ಕೇಳಬ
ಈ ರೀತಿಯ 'ನ್ಯೂಟ್ರಾಲಿಟಿ'ಯಿಂದ ಯಾರಿಗೆ ಪ್ರಯೋ
ಎಂಬುದು ಸ್ಪಷ್ಟ.

ಆದರೂ ಜಿಎಸ್‌ಟಿಯಿಂದ ಆರ್ಥಿಕ
ಬೆಳವಣಿಗೆಯ ದರ 1ರಿಂದ 2% ಹೆಚ್ಚಾಗುತ್ತದೆ!
ಎಲ್ಲರೂ ಗೆಲ್ಲುವ 'ವಿನ್ ವಿನ್' ಸಂದರ್ಭ
ಮಾತುಗಳ ಅರ್ಥವೇನು ಎಂಬುದನ್ನು ಮ
ಕಂತುಗಳಲ್ಲಿ ನೋಡೋಣ. ಆದರೆ, ತೆ
ಏಕರೂಪತೆಯಿಂದ ಕೂಡಲೇ ಆಗಬಹ
ಪರಿಣಾಮಗಳಿಗೆ ಒಂದು ಉದಾಹರಣೆಯನ್ನು
ಪರಿಶೀಲಿಸೋಣ. ದೇಶದ ಸಮಸ್ತ ಸರಕು ಮತ್ತು ಸೇ
ಒಂದೇ ತೆರಿಗೆ ಎಂದಾಗ ಈಗಾಗಲೇ ಇರುವ ಸರಕ
ಯಾವುದು ಅಗ್ಗ ಆಗುತ್ತದೆ, ಯಾವುದು ದುಬಾರಿ ಆ
ನೋಡಿ. ವಿಮಾನಯಾನ, ಬಿಎಂಡಬ್ಲ್ಯು
ಅಗ್ಗವಾಗುತ್ತದಂತೆ; ಅಕ್ಕಿ, ಬೇಳೆ, ರೈಲು, ಬಸ್ಸು
ದುಬಾರಿಯಾಗುತ್ತದಂತೆ. (ಅಂದರೆ ಇನ್ನು ಮುಂದ
ಬೇಳೆಗಳಿಗೆ ತೆರಿಗೆ ವಿಧಿಸಲಾಗುವುದು ಎಂದೇನಲ್ಲ.
ಜಿಎಸ್‌ಟಿಯಿಂದ ಹೊರಗಿರುವ ಡೀಸೆಲ್ ಮತ್ತು ಪೆ
ಮೇಲೆ ಹೆಚ್ಚೆಚ್ಚು ತೆರಿಗೆ ವಿಧಿಸಬೇಕಾಗುತ್ತದೆ. ಅದರ
ಪರಿಣಾಮ ಮೇಲೆ ಹೇಳಲಾದ ಸರಕು-ಸೇವೆಗಳ
ಬೀಳುತ್ತದೆ). ಅದೇರೀತಿ, ಆರೋಗ್ಯ ಮತ್ತು
ಸೇವೆಗಳು ದುಬಾರಿಯಾಗುತ್ತವೆ; ಕಂಪ್ಯೂಟರ್ ಮ
ಎಲೆಕ್ಟ್ರಾನಿಕ್ ಸರಕುಗಳು ಅಗ್ಗವಾಗುತ್ತವೆ. ಇವೆಲ್ಲದರ
ಬಡವರು ಬಳಸುವ ಸರಕು-ಸೇವೆಗಳು ದುಬಾರಿಯಾ
ಇದೇ ರೀತಿ ಕಟ್ಟಡ ನಿರ್ಮಾಣಕ್ಕೆ ಬೇಕಾದ ವ
ದುಬಾರಿಯಾಗುತ್ತವೆ. ಇದರ ಪರಿಣಾಮ ಪ
ವರ್ಗವನ್ನೂ ಸೇರಿ ಎಲ್ಲರ ಮೇಲೂ ಬೀಳುತ್ತದೆ

ಹೀಗಿದ್ದ ಮೇಲೆ ವಾಸ್ತವದಲ್ಲಿ ಜನಸಾಮಾನ್ಯನ
ತೆರಿಗೆಯ ಹೊರೆ ಹೆಚ್ಚಾಗುತ್ತದೆ. ಇಂತಹದ
ನೀತಿಯನ್ನು ದೇಶದ ಪ್ರಧಾನಮಂತ್ರಿ ವಿರುದ್ಧ
ಅರ್ಥೈಸಲು ಭಯೋತ್ಪಾದನೆಯ ಭಾಷೆಯನ್ನು ಬಳ
ಅದರ ವಿರುದ್ಧ ಯಾವೊಂದು ಪಕ್ಷವೂ ಸಂಸತ್ತಿನ
ಹೇಳಲು ಮುಂದಾಗುವುದಿಲ್ಲ!! ಇವೆಲ್ಲದರ ವಿವ
ಮುಂದಿನ ಸಂಚಿಕೆಯಲ್ಲಿ ನೋಡೋಣ.



ಚಾಂದಿನಿಯ 'ಮನದ ಕಣ್ಣು'

ಇಲ್ಲೊಂದು ವಿಶಿಷ್ಟ ಸಂದರ್ಶನವಲ್ಲದ ಸಂದರ್ಶನವಿದೆ: ಅದು ಚಾಂದಿನಿ ಎಂಬ ಮಹಿಳೆಯದು. ಹುಟ್ಟುತ್ತ ಮಲ್ಲಿಕಾರ್ಜುನ ಸ್ವಾಮಿ ಆಗಿದ್ದ ಚಾಂದಿನಿ ಬಯಸಿ ಬಯಸಿ ಆಪರೇಷನ್ ಮಾಡಿಸಿಕೊಂಡು ಹೆಣ್ಣಾದವರು. ತಮ್ಮನ್ನು ಎನ್‌ಜಿಓಗಳು 'ಲಿಂಗತ್ವ ಅಲ್ಪಸಂಖ್ಯಾತ'ರೆಂದು ಬೇರೆಯೇ ಆದ ಐಡೆಂಟಿಟಿ ಕೊಟ್ಟುಕೊಳ್ಳಲು ಒತ್ತಾಯಿಸುವುದನ್ನು ವಿರೋಧಿಸುವ ಚಾಂದಿನಿ, ತಾನು ಜೀವನಪರ್ಯಂತ ಹೆಣ್ಣಾಗಬೇಕೆಂದು ಹೋರಾಡಿರುವವಳು ಹಾಗೂ ಹೆಣ್ಣಾಗಿಯೇ ಗುರುತಿಸಿಕೊಳ್ಳಲು ಇಚ್ಛಿಸುವವಳು ಎಂದು ಹೇಳುತ್ತಾರೆ. ಆಕೆಯ ಕವನ ಸಂಕಲನವೊಂದು ಹೊರಬಂದಿದ್ದು ಅವರ ಕವಿತೆಗಳು ಎಷ್ಟು ಸ್ವಯಂಪೂರ್ಣವಾಗಿವೆ ಎಂದರೆ ಅದನ್ನು ಓದಿದರೆ ಆಕೆಯ ಬಳಿ ಮಾತನಾಡಿದಂತೆನಿಸುತ್ತದೆ. ಚಾಂದಿನಿ ಅವರ 'ಮನದ ಕಣ್ಣು' ಸಂಕಲನದ ಆಯ್ದ ಕವಿತೆಗಳನ್ನು ಕೊಲಾಜ್ ಆಗಿಸಿ ಇಲ್ಲಿ ಇಡಲಾಗಿದೆ.

ಟಿಪ್ಪಣಿ ಮತ್ತು ಕವನಗಳ ಆಯ್ಕೆ: ಡಾ. ಎಚ್.ಎಸ್. ಅನುಪಮಾ

...ವ ಕಣ್ಬಿಟ್ಟ

...ನರಸೀಪುರದ ಸೋಸಲೆ ಗ್ರಾಮಕ್ಕೆ
...ಬಡಿದಿತ್ತು ಕಾನವ್ವ
...ಬಡಿದಾಗ ನಮ್ಮವ್ವ ಪ್ರೆಗ್ನೆಂಟು
...ು ಹುಟ್ಟಿ ಹೊರಬಂದಾಗ
...ರ ಕಣ್ ಬತ್ತೋ ಏನೋ
...ು ಹೆಂಗೆಂಗೆ ನಡಿತಿದ್ದೆ
...ಸೂರ ಬಾಯಿಗೆ ಆಹಾರವಾಗಿದ್ದೆ
...ಪ್ಪಿಸಿ ಲಂಗ ದಾವಣಿ ಹಾಕುತ್ತಿದ್ದೆ

...್ನ ಬಗ್ಗೆ

...ು ಗಂಡು ಮಗ
...್ಮಪ್ಪ ಅಮ್ಮ ನಮ್ಮೂರಿನವರಿಗೆ ಮಾತ್ರ
...ು ಹೆಣ್ಣು
...್ನೊಳಗಿನ ಬಸಿಯಲಾಗದ ತುಮುಲಗಳಿಗೆ ಮಾತ್ರ

...ಡೇರದ ಬಯಕೆಗಳು

...ಲ್ಲಿ ಹೆಣ್ತನವಿತ್ತು
...ದರದ ಆಳದಲ್ಲಿರಲಿಲ್ಲ
...ಿಯ ಸಮಯಗಳು ನನ್ನನ್ನು
...ತಿನ್ನುತ್ತಿದ್ದವು
...ನದಾಳದ ಕವಿತೆ
...ದಿಂಗಳಲ್ಲಿ ನಾರಿಯೆಂದು ಸಾರುತ್ತಿತ್ತು

...್ನ ಆಸ್ತಿ

...ಬ್ಬಳಿಯ ಬೀಜವನ್ನು
...ಲಿಗೆ ಚೈನು ಮಾಡಿ ನಡೆಯುವಾಗ
...ುವ ಶಬ್ದವನ್ನು ಕೇಳಿ ಆನಂದಿಸುತ್ತಿದ್ದೆ
...ರೂ ಇಲ್ಲದ ಕಾಡು ಬಯಲಿನಲ್ಲಿ ಭಯದಲ್ಲಿ
...ಸಿ ರಸ ಕುಡಿದು ಹೆಣ್ಣಾಗಿ ಹಾಡುತ್ತಿದ್ದೆ
...ರಿಲ್ಲದ ಸಮಯದಲ್ಲಿ
...ಪಾರ್ಸ್‌ಕಳ್ಳಿ ಹಣ್ಣು ನನ್ನ ತುಟಿಯ ಬಣ್ಣವಾಗಿತ್ತು
...ಡೆ ಹೂಗಳು ನನ್ನ ಕತ್ತಿನ ಪದಕವಾಗಿತ್ತು
... ಮಣ್ಣು ನನ್ನ ಅಡುಗೆಯ ಪಾತ್ರೆಗಳಾಗಿದ್ದವು

...ಸ್ಸೆಟ್ ಟೇಪು ನನ್ನ ಕೂದಲಾಗಿತ್ತು

... ಮುಖದ ಕೂದಲ ಉಜ್ಜಿಉಜ್ಜಿ ತೆಗೆಯುತ್ತಿದ್ದ
... ನನ್ನ ಓತ್ಕೈಪಿಯಾಗಿತ್ತು
... ಸುತ್ತಲು ಇದ್ದ ಮರ ಗಿಡ ಗದ್ದೆ ಹಸು ಕರು
...ಕೆ ನನ್ನ ಬಂಧುಗಳಾಗಿದ್ದವು

ನನಗೆ ಬೇಡವಾದ ಲಿಂಗ

ಗೊಂಬೆ ಮಾಡಿದ್ದರು
ಅದರಲ್ಲೊಂದು ಅಂಗ ಮರೆತಿದ್ದರು
ನನಗರಿವಿಲ್ಲದೆ ಕೊಟ್ಟ ದಾನ ನನಗೆ ಬೇಡ
ನನಗೆ ಇಷ್ಟವಿಲ್ಲ
ಸುತರಾಂ ಇಷ್ಟವಿಲ್ಲ
ನನ್ನ ವಯ್ಯಾರಕ್ಕೆ ಒಗ್ಗದ ಲಿಂಗವದು
ನಾನು ನಾರಿಯಪ್ಪ ನನ್ನಿಂದ ಮಾಯವಾಗಿ ಬಿಡು ಎಂದೆ
ಊಂಹ್ಞೂಂ ಹೋಗಲಿಲ್ಲ

ಶಿವ ಕಣ್ಬಿಟ್ಟ

ಹೆಣ್ಣುಗ ಸಂಗ ಒಂಬತ್ತು ಅನ್ನೋರಿಗೆ
ನಾನು ಹೆಣ್ಣಾಗಿ ತೋರಿಸಬೇಕು ಅಂತಾ
ನಮ್ಮೂರ ಹೊನ್ನಮ್ಮನಿಗೆ ಹರಕೆ ಹೊತ್ತಿದ್ದೆ
ಹೆಣ್ಣಾಗಿ ಮಾಡು ನಮ್ಮವ್ವ ಅಂತಾ
ಬಾಯಲ್ಲಿ ಬೀಗ ಚುಚ್ಚಿದ್ದೆ
ಮಹದೇವಪ್ಪನ ಮಗ
ನಾರಿಯಾಗಿ ಸೀರೆ ಉಟ್ಕಂಡು
ಮೈಸೂರು ಸೀಮೇಲೇ
ಆಕಾಶದಲ್ಲಿ ಹಾರಾಡಂಗೆ ಮಾಡು ಶಿವ
ಅಂದೆ.
ಶಿವ ಒಂದಿನ ಕಣ್ಬಿಟ್ಟ
ಅಂತೂ ಅಂಗಿದ್ದೋನು ಇಂಗಾದೆ.

ನಿರ್ವಾಣ, ನಾರೀ ನಿರ್ಮಾಣ

ರಂಗೇರಿದ ರವಿ ಶಾಂತವಾಗುತ್ತಿದ್ದ ಆ ಶುಭದಿನ
ನನ್ನೊಳಗಿನ ಒಂದನ್ನು ಕಳಕೊಂಡು
ಮತ್ತೊಂದನ್ನು ಪಡೆದಿದ್ದೆ
ಆ ಜಾಗ ರಣರಂಗವಾಗಿದ್ದರೂ ನರಕವೆನಿಸಲಿಲ್ಲ
ಕುದಿಯುವ ಎಣ್ಣೆ ನನ್ನ ಮೇಲೆ ಬಿದ್ದರೂ ಬಿಸಿ ತಾಗಲಿಲ್ಲ

ಅವನು ಹೋಗಿ ಅವಳಾಗಿದ್ದೆ

ಗುಡಾಣದಲ್ಲಿ ಬೆಳೆದ ಕನ್ಯೆಯಾಗಿದ್ದೆ
ಆ ಮುಹೂರ್ತ ಕ್ಷಣದಿಂದ ಮಾತಾ ಸ್ವರೂಪ ಪಡೆದಿದ್ದೆ
ಮಗನಲ್ಲ ಮಗಳಾಗಿದ್ದೆ

ನನ್ನ ದೇಹ ರಚನೆಗೆ ಒಂದು
ಅರ್ಥ ತಂದುಕೊಂಡಿದ್ದೆ
ನನ್ನ ಮಾಡಿದ ದೇವರಿಗೆ
ನನ್ನ ಗುರುತು ಸಿಗಲಿಲ್ಲ

ಮಲ್ಲಿಕಾರ್ಜುನಸ್ವಾಮಿ ಆದ ನಾನು ಸ್ವಾಮಿಯಲ್ಲ
ನನ್ನನ್ನು ನಾನೇ ಕೆತ್ತಿದ ಶಿಲೆಯಾಗಿಬಿಟ್ಟೆ

ಅರಿಶಿನ ಹಚ್ಚಿ

ಕುಂಕುಮದ ಬಟ್ಟು ಇಟ್ಟು
ಗೆಜ್ಜೆ ಸದ್ದಿಗೆ ನಡೆವಾಗ
ಏನೋ ಕಚಗುಳಿ ಇಟ್ಟ ಹಾಗೆ
ಕನಸಲ್ಲಿ ನಡೆವ ಹಾಗೆ.
ಕನಸಲ್ಲ
ಇಂದು ನನಸಾಗಿ
ಹೆಂಗಸಂತೆ ಕೂತು ಮೂತ್ರ ವಿಸರ್ಜಿಸಿದೆ.

ನನ್ನ ಗಂಡನೆಂದರೆ ಬಲುಪ್ರೀತಿ

ನನ್ನ ಗಂಡನೆಂದರೆ ಬಲು ಪ್ರೀತಿ ನನಗೆ
ಕಾರಣ ಹೆಂಗಸೆಂದು ಗುರುತು ಕೊಟ್ಟದ್ದಕ್ಕೆ
ನನಗಿಂತ ಕುಳ್ಳ, ಕಿರಿಯವ
ಜೊತೆಯಾಗಿ ನಿಂತು ಫೋಟೋ ತೆಗೆಸುವ ಆಸೆಗೆ
ಮರದ ಕಟ್ಟೆ ಇಟ್ಟು ಎತ್ತರ ಮಾಡಿದ್ದೆ

ನಾಟಕ

ಹಿಂದಿನ ಕಥೆ ಮುಚ್ಚಿಟ್ಟು
ಮುಂದಿನ ಕಥೆ ತೆರೆದಿಟ್ಟು
ಮನದ ಬಾಗಿಲು ತಟ್ಟಿದರೆ
ನಿಜಕಥೆ ಹೊರಹೊಮ್ಮುವುದೆ?
ನಿಜವರಿಯದ ಜನರಿಹರು ಇಲ್ಲಿ
ನಿಮಗಿದೆಯೆ ಅರಿಯುವ ಆಸೆ
ಮಣ್ಣು ಮುಚ್ಚಿದ ಸತ್ಯದ
ತೆರೆ ಸರಿಸಲು ಮಳೆಯೇ ಬರಬೇಕು

ನನ್ನ ಗುರು

ಗೊಂದಲದಲಿ ಇದ್ದ ನನಗೆ ಕಣ್ಣು ತೆರೆಸಿದ ಗುರು
ಸ್ನೇಹದ ಬೀಜವನ್ನು ಬೆಳೆಸಿದ ಗುರು
ಒಂಟಿಯಾದ ನನಗೆ ಜೊತೆಯಾಗಿದ್ದ ಗುರು
ಗಂಡಾಗಿದ್ದ ನನ್ನ ಹೆಣ್ಣಾಗಿಸಿದ ಗುರು
ಸಮುದಾಯದ ಆಸರೆ ಕೊಟ್ಟ ಗುರು
ನನ್ನನ್ನು ಬೆಳೆಸಿದ ಗುರು
ಬೆಳೆಸಿ ಸಹಿಸದ ಗುರು
ನನ್ನ ಅಮ್ಮನಾಗಿಸಿದ ಗುರು
ಮಾತನ್ನು ಕಲಿಸಿದ ಗುರು
ಮರವನ್ನು ಬೆಳೆಸಿ ಸಹಿಸದೆ ಚಿವುಟಿದ ಗುರು

ನನ್ನ ಜೀವನ

ರೌಡಿಯಿಂದ ಬೆದರಿಕೆ ಪೊಲೀಸರಿಂದ ಲಾಠಿ ಏಟು
ಕಾನೂನಿನಿಂದ ಸುಳ್ಳು ಕೇಸು ಜನರಿಂದ ಅಪಹಾಸ್ಯ
ಭಿಕ್ಷೆ ಬೇಡ್ತೀವಿ ಸೆಕ್ಸ್ ವರ್ಕ್ ಮಾಡ್ತೀವಿ
ಪ್ರತಿದಿನ ಹಿಂಸೆ ಅನುಭವಿಸ್ತೀವಿ
ಆಸೆ ಇಡ್ತೀವಿ ನಾವು ಪ್ರೀತಿ ಮಾಡ್ತೀವಿ
ಮನುಜರಂತೆ ಬಾಳ್ಬೇಕು ಅಂತ ಕನಸು ಕಾಣ್ತೀವಿ ಅಮ್ಮ

ಪಾಪಿ ದೇವರು

ನಾನೂ ಅವಳಂಗೆ ನಡೆಯಬೇಕು
ಅಂದುಕೊಂಡಿದ್ದೆ
ಬಳುಕುತ್ತಾ ಬಾಗುತ್ತಾ ವಯ್ಯಾರ ಮಾಡುತ್ತಾ
ನಾನೂ ಅವಳಂಗೆ ಮಾಡಬೇಕೆಂದು ಆಸೆಪಟ್ಟಿದ್ದೆ
ದೂರದಲಿ ಬರುವ ನಲ್ಲನ ಕದ್ದು ನೋಡಲು
ತಾಯಾಣೆ ನಾನೂ ಆಸೆ ಪಟ್ಟಿದ್ದೆ
ಅವಳಂಗೆ ಹಸೆ ಮಣೆ ಏರಿ ಕೂರಬೇಕೆಂದು
ನಾನೂ ಕೂಡಾ ಆಸೆಪಟ್ಟಿದ್ದೆ
ಹುಳಿಮಾವಿನ ಕಾಯಿ ತಿನ್ನಬೇಕೆಂದು
ಅವಳಂತೆ ನಾನು ಬಯಸಿದ್ದೆ
ಹೌದು, ನಾನು ಗರ್ಭ ಧರಿಸಬೇಕು
ಗರ್ಭದೊಳಗೆ ಸದ್ದು ಮಾಡುವ
ಕೂಸು ಇರಬೇಕು, ಅದನ್ನು ಹೆರಬೇಕು ಅಂದುಕೊಂಡಿದ್ದೆ
ಪಾಪಿ ದೇವರು, ನನ್ನ ಮಾಡುವಾಗ
ಗರ್ಭವನ್ನೇ ಮರೆತ..

ನಾವ್ಯಾರು?

ಭಯವಿಲ್ಲದ ನಿಶೆಯಲ್ಲಿ
ನಾನೇ ನಾನಾಗಿ
ಖುಷಿಯಲಿ ದುಃಖದಲಿ ನೋವಿನ ತೊಳಲಾಟದಲ್ಲಿ
ಮತ್ತಿನ ಪ್ರತಿಬಿಂಬದಲಿ ಸುಖಪಡುತಾ
ಅರೆಬರೆಯಾಗಿ ಜೀವಿಸುತ್ತಾ
ಪೂರ್ಣತೆಯ ಬಯಕೆಯಲಿ
ನಿಂದಿಸುವ ಜನರ ನಡುವೆ
ದೀಪಸ್ತಂಭವಾಗಿ ನಿಂತ ನಾವ್ಯಾರು?

ನನ್ನ ಬಗ್ಗೆ

ಕ್ಷಮಿಸಿ, ನನ್ನ ಬಗೆಗೆ ಯಾರೂ ಬರೆಯದ ಕಾರಣ
ನನ್ನ ಬಗ್ಗೆ ನಾನೇ ಬರೆದುಕೊಂಡೆ..

ಹಿಂದೂತ್ವ ಡಾನ್‌ನ ಗೋ ಮತ್ತು ಹೋರಿ ಪುರಾಣ

ಇದು ಸುಮಾರು 25-30 ವರ್ಷಗಳ ಹಿಂದೆ ನಡೆದ ನಿಜ ಘಟನೆ. ...ಗ ನಮ್ಮ ಕರಾವಳಿಯಲ್ಲಿ ಇನ್ನೂ ಹಿಂದೂತ್ವದ ಲ್ಯಾಬ್ ಸೃಷ್ಟಿ ಆಗಿರಲಿಲ್ಲ ...ತ್ತು ಈಗಿನ ಹಿಂದೂತ್ವ ಡಾನ್ ಆಗ ಇಷ್ಟೊಂದು ಅಪಾಯಕಾರಿ ವಿಷ ...ದ್ದಿಯುವನಾಗಿರಲಿಲ್ಲ. ಆಗ ಒಂದು ದಿನ ಡಾನ್ ಮತ್ತು ಆತನ ಹೆಂಡತಿ ...ು ಕಾರಿನಲ್ಲಿ ತಮ್ಮ ರಾಮಚಂದ್ರಾಪುರಮಠಕ್ಕೆ ಹೋಗುತ್ತಿದ್ದರು. ಆಗ ...ನ್ನೂ ಡಾನ್‌ಗೆ ಮುಸ್ಲಿಮರ ಬಗ್ಗೆ ಇಷ್ಟೊಂದು ದ್ವೇಷ ಇರಲಿಲ್ಲವಾದುದರಿಂದ ...್ಬ ಮುಸ್ಲಿಂ ಯುವಕನನ್ನು ತನ್ನ ಕಾರಿನ ಚಾಲಕನಾಗಿ ನೇಮಿಸಿದ್ದನಂತೆ. ...ಡ್ರೈವರ್ ಹೊಸಬನಾಗಿದ್ದು ಸ್ವಲ್ಪ ಪೆದ್ದನ ಹಾಗಿದ್ದ. ದಾರಿಯಲ್ಲಿ ...ದೆಡೆ ಒಂದು ಗೋವು ಮೇಯುತ್ತಾ ನಿಂತಿತ್ತು. ಅದನ್ನು ನೋಡಿದ ...ನ್ ಡ್ರೈವರ್‌ಗೆ ಕಾರು ನಿಲ್ಲಿಸಲು ಹೇಳಿ ಗೋವಿನ ಹತ್ತಿರ ಹೋಗಿ ...ದರ ತಲೆ ಬಾಲ ಕೆಚ್ಚಲು ಎಲ್ಲಾ ಮುಟ್ಟಿ ಮುಟ್ಟಿ ನಮಸ್ಕರಿಸಿ ...ರಿನಲ್ಲಿ ಬಂದು ಕುಳಿತ. ಇದನ್ನು ನೋಡಿದ ಆ ದಡ್ಡ ಮುಸ್ಲಿಂ ...ೈವರ್ "ಇದೇನು ಧಣಿಗಳೇ, ದನಕ್ಕೆ ಹೀಗೆ ಎಲ್ಲೆಲ್ಲೋ ಮುಟ್ಟಿ ...ಮಸ್ಕರಿಸಿದ್ದೀರಿ?" ಎಂದು ಕೇಳಿದ. "ಅದು ನನ್ನ ತಾಯಿ, ಅದಕ್ಕಾಗಿ ...ಮು ನಮಸ್ಕರಿಸಿದ್ದು" ಎಂದು ಡಾನ್ ಹೇಳಿದ. ಸ್ವಲ್ಪ ದೂರ ...ೋದಾಗ ಒಂದು ಹೋರಿ ರಸ್ತೆ ಬದಿಯಲ್ಲಿ ಮೇಯುತ್ತಿತ್ತು. ...ನ್ನು ಕಂಡು ಆ ಮುಸ್ಲಿಂ ಡ್ರೈವರ್ ಮುಗ್ಧನಾಗಿ ಕೇಳಿದ: "ಧಣಿಗಳೇ ...ು ನಿಲ್ಲಿಸಲೇ? ಅಲ್ಲಿ ನೋಡಿ ನಿಮ್ಮ ತಂದೆ ಮೇಯುತ್ತಿದ್ದಾರೆ!" ...ಗಿಂದ ಸಿಟ್ಟಾದ ಡಾನ್ ಆ ಚಾಲಕನಿಗೆ ಒಂದು ಬಾರಿಸಿ ಹೇಳಿದ: "ಅದು ನನ್ನ ತಂದೆಯಲ್ಲ, ನಿನ್ನದೇ ತಂದೆ. ಸುಮ್ಮನೆ ಕಾರ್ ಚಲಾಯಿಸು."

ಅದನ್ನು ಕೇಳಿ ಪೆಚ್ಚಾದ ಡ್ರೈವರ್ ಕಾರು ಚಲಾಯಿಸಿದ. ಸ್ವಲ್ಪ ದೂರ ಹೋದ ಮೇಲೆ ಅಲ್ಲೊಂದು ಹೋರಿ ಒಂದು ಗೋವಿನ ಮೇಲೆ ಹತ್ತಲು ಪ್ರಯತ್ನಿಸುತ್ತಿತ್ತು. ಅದನ್ನು ಕಂಡ ಡ್ರೈವರ್ ತುಳುವಿನಲ್ಲಿ ಪೆದ್ದುಪೆದ್ದಾಗಿ ಕೂಗಿದ: "ಅಲ್ನೋಡಿ ಧಣಿಗಳೇ, ನನ್ನ ತಂದೆ ನಿಮ್ಮ ತಾಯಿಗೆ ಪೋಟುತ್ತಿದ್ದಾನೆ."

ಕಾರಿನ ಹಿಂದಿನ ಸೀಟಿನಲ್ಲಿದ್ದ ಡಾನ್‌ನ ಹೆಂಡತಿ ಕಮಲಿ ಆಗ ಇನ್ನೂ ಯುವತಿಯಾಗಿದ್ದು ಚಾಲಕನ ಮಾತು ಕೇಳಿ ನಾಚಿ ನೀರಾದಳು. ಮರುದಿನವೇ ಆ ಕಾರ್ ಚಾಲಕನನ್ನು ಡಾನ್ ಕೆಲಸದಿಂದ ತೆಗೆದುಹಾಕಿದನಂತೆ.



ಆ ಪೆದ್ದ ಚಾಲಕನಿಗೆ ಇಂದಿನವರೆಗೂ ಅರ್ಥವಾಗದ ವಿಷಯವೇನೆಂದರೆ ಪವಿತ್ರ ದೇವರಾದ ಲಕ್ಷಾಂತರ ಗೋವುಗಳು ಹೋರಿಯ ಸಂಪರ್ಕವಿಲ್ಲದೇ ಗರ್ಭ ಹೇಗೆ ಧರಿಸುತ್ತವೆ ಹಾಗೂ ಅವುಗಳಿಗೆ ಗಂಡು ಕರು ಹುಟ್ಟಿದರೆ ತಾಯಿಯ ದೈವತ್ವ ಗಂಡು ಕರುಗಳಿಗೆ ಯಾಕೆ ಅನುವಂಶಿಕವಾಗಿ ವರ್ಗಾವಣೆ ಆಗುವುದಿಲ್ಲ? ಪುರುಷ ಪ್ರಧಾನ ಆರ್ಯ ಸಂಸ್ಕೃತಿಯಲ್ಲಿ ಗಂಡಿಗೆ ಇಂತಹ ಘೋರ ಅನ್ಯಾಯ ಆಗುವುದು ಹೇಗೆ ಸಾಧ್ಯ? ದೇವಲೋಕದ ರಾಜನಾದ ಇಂದ್ರನ ಸಹಿತ ಅವನ ಆಸ್ಥಾನದಲ್ಲಿರುವ ದೇವತೆಗಳು ಮತ್ತು ಅಪ್ಸರೆಯರೆಲ್ಲಾ ಮಹಾ ಕಾಮುಕರು, ಕಾಮಧೇನು ದೇವಲೋಕದ ಗೋವಾದರೂ ಅದರ ಮೈಯಲ್ಲಿ ಕಾಮವೇ ಇಲ್ಲವಂತೆ! ಕಾಮವಿಲ್ಲದ ಕಾಮಧೇನುವಿಗೆ ಹೋರಿಯ ಸಂಪರ್ಕವಿಲ್ಲದೇ ನಂದಿನಿ ಎಂಬ ಕರು ಹುಟ್ಟಿ ಅದು ಭೂಲೋಕಕ್ಕೆ ಬಂದು ಕಟೀಲಿನ ಹತ್ತಿರ ನದಿಯಾಗಿ ಹರಿಯಲು ಹೇಗೆ ಸಾಧ್ಯವಾಯಿತು? ಕಾಮಧೇನು ಯಾವುದಾದರೂ ಕೋಪಿಷ್ಠ ಋಷಿಯ ಶಾಪದಿಂದ ಭೂಲೋಕದಲ್ಲಿ ಮಾನವಳಾಗಿ ಹುಟ್ಟಿ ಸುಂದರಿಯಾಗಿ ಬೆಳೆದು ನಂತರ ತನ್ನ ಶಾಪ ಕಳೆಯಲು ವಿಷ್ಣು ದೇವರ ಯಾವುದಾದರೂ ಅವತಾರದೊಂದಿಗೆ ಲೈಂಗಿಕ ಮಿಲನವಾಗಿ ಮೋಕ್ಷ ಪಡೆದಳು ಎಂಬ ಪುರಾಣ ಕಥೆಗಳು ಯಾಕೆ ಹುಟ್ಟಿಕೊಳ್ಳಲಿಲ್ಲ? ಎಂಬ ಈ ಎಲ್ಲ ಯಕ್ಷಪ್ರಶ್ನೆಗಳು ಆ ...ೈವರ್ ಮನದ ... [illegible]

...ಪಿ ಗವಿಕಿರಣ, ಮೈಸೂರು


ದಲಿತರ ದುಸ್ಥಿತಿಯೂ ಮೋದಿಯ ಮೊಸಳೆ ಕಣ್ಣೀರೂ

ಗುಜರಾತ್ ರಾಜ್ಯದ ಊನಾ ತಾಲೂಕಿನ ಮೋಟಾ ಸಮುಧಿಯಾಲಾ ಗ್ರಾಮದಲ್ಲಿ ಗೋರಕ್ಷಕ ದಳದ ಕಾರ್ಯಕರ್ತರು ಸತ್ತ ದನದ ಚರ್ಮ ಸುಲಿಯುತ್ತಿದ್ದ ಬಡಪಾಯಿ ದಲಿತ ಕುಟುಂಬವೊಂದರ ಸದಸ್ಯರ ಮೇಲೆ ಬರ್ಬರ ಹಲ್ಲೆ ನಡೆಸಿದ ಬೆನ್ನಲ್ಲೆ ಉತ್ತರ ಪ್ರದೇಶದ ಬಿಜೆಪಿ ಉಪಾಧ್ಯಕ್ಷನೊಬ್ಬ ದಲಿತ ನಾಯಕಿ ಮಾಯಾವತಿಯವರನ್ನು ನಿಂದಿಸಿದ ವಿದ್ಯಮಾನ ಸಂಭವಿಸಿದಾಗ ದಲಿತರ ಹುದುಮಿಟ್ಟ ಆಕ್ರೋಶದ ಬಾಂಬ್ ಸ್ಫೋಟಗೊಂಡಿದೆ. ರೊಚ್ಚಿಗೆದ್ದ ಗುಜರಾತಿ ದಲಿತರು "ನಿಮ್ಮ ಪವಿತ್ರ ಗೋವುಗಳ ಶವಗಳನ್ನು ನೀವೇ ಎತ್ತಿ" ಎಂದು ತಿರುಗಿಬಿದ್ದುದರ ಫಲವಾಗಿ ಇಡೀ ರಾಜ್ಯ ದುರ್ವಾಸನೆ ಬೀರತೊಡಗಿದೆ. ರಾಜ್ಯದಾದ್ಯಂತ ನಡೆಯುತ್ತಿರುವ ಭಾರಿ ಪ್ರತಿಭಟನೆಗಳ ಸದ್ದು ಮುಗಿಲುಮುಟ್ಟಿದೆ. ದಲಿತರ ಈ ಚಾರಿತ್ರಿಕ ಹೋರಾಟದಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ರಾಹುಲ್ ಶರ್ಮ ಕೂಡಾ ಒಂದು ಪ್ರಮುಖ ಪಾತ್ರ ವಹಿಸಿದ್ದಾರೆ. ನಿಮಗೆ ನೆನಪಿರಬಹುದು, 2002ರ ಗುಜರಾತ್ ಹತ್ಯಾಕಾಂಡದಲ್ಲಿ ಅನೇಕ ರಾಜಕಾರಣಿಗಳು ಹಾಗೂ ಪೊಲೀಸ್ ಅಧಿಕಾರಿಗಳ ಪಾತ್ರವನ್ನು ಬಯಲಿಗೆಳೆದಾತ ಇದೇ ರಾಹುಲ್ ಶರ್ಮ. ಗುಜರಾತಿ ದಲಿತರ ಹೋರಾಟಕ್ಕೆ ದೇಶದ ವಿವಿಧೆಡೆಗಳಿಂದ, ವಿವಿಧ ಸ್ತರಗಳಿಂದ ದೊಡ್ಡ ಮಟ್ಟದಲ್ಲಿ ಬೆಂಬಲ ವ್ಯಕ್ತವಾಗುತ್ತಿದೆ. ಇತರ ರಾಜ್ಯಗಳಲ್ಲಿನ ದಲಿತರು ಧರಣಿ, ಪ್ರತಿಭಟನೆಗಳ ಮೂಲಕ ತಮ್ಮ ಗುಜರಾತಿ ಸೋದರ ಸೋದರಿಯರಿಗೆ ಸಾಥ್ ನೀಡುತ್ತಿದ್ದಾರೆ. ಇದರಿಂದಾಗಿ ಮುಂಬರುವ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಉತ್ತರ ಪ್ರದೇಶ ಮತ್ತಿತರ ರಾಜ್ಯಗಳಲ್ಲಿ ದಲಿತ ವೋಟುಗಳಿಗಾಗಿ ನಾನಾತಂತ್ರಗಳನ್ನು ಹೆಣೆಯುತ್ತಿರುವ ಬಿಜೆಪಿಗೆ ಭಾರಿ ಹಿನ್ನಡೆ ಉಂಟಾಗಿದೆ. ದಲಿತರ ಮತಬ್ಯಾಂಕ್ ಕಳೆದುಕೊಂಡರೆ ತಮ್ಮ ಕನಸಿನ ಹಿಂದೂ ರಾಷ್ಟ್ರ ಗಗನಕುಸುಮವಾಗಲಿದೆ ಎಂಬ ಸತ್ಯದರ್ಶನ ಆಗುತ್ತಿದ್ದಂತೆ ಸಂಘ ಪರಿವಾರಕ್ಕೆ ಎಲ್ಲಿಲ್ಲದ ಭಯವಾಗತೊಡಗಿದೆ. ಆ ಭೀತಿ ಇಂದು ಸಂಘ ಪರಿವಾರದ ಬುನಾದಿಯನ್ನೆ ಗಡಗಡ ಅಲುಗಾಡಿಸಲಾರಂಭಿಸಿದೆ.

ಇಂಥಾ ಸಂದರ್ಭದಲ್ಲಿ ಇಷ್ಟು ವರ್ಷಗಳ ಕಾಲ ದಲಿತರನ್ನು ಅಲ್ಪಸಂಖ್ಯಾತರ ವಿರುದ್ಧ ಎತ್ತಿಕಟ್ಟಿ ಸಮಾಜದ ಧ್ರುವೀಕರಣಕ್ಕಾಗಿ ದುರುಪಯೋಗಪಡಿಸಿಕೊಂಡು ಬಂದಿರುವ ನರೇಂದ್ರ ಮೋದಿಗೆ ಇನ್ನು ತುಟಿ ಬಿಚ್ಚದೆ ಇದ್ದರೆ ಉಳಿಗಾಲವಿಲ್ಲ ಎಂದು ಅನಿಸಿದೆ. ಹೀಗಾಗಿ ವಿಧಿಯಿಲ್ಲದೆ ಕೆಲವು ಬೂಟಾಟಿಕೆಯ ಮಾತುಗಳನ್ನಾಡಿದ್ದಾನೆ. ಆದರೆ ಅಂದು ಆತನ ಆಡಳಿತದಡಿಯಲ್ಲಿ (ಮತ್ತು ಇಂದೂ ಕೂಡಾ) ದಲಿತರ ದೈನೇಸಿಸ್ಥಿತಿ ಮತ್ತು ಆತನ ಹಲವಾರು "ನುಡಿಮುತ್ತು"ಗಳನ್ನು ಜ್ಞಾಪಿಸಿಕೊಂಡರೆ ಸಾಕು, ಈ ತಥಾಕಥಿತ ದಲಿತ ಪರ ಹೇಳಿಕೆಗಳೆಲ್ಲ ಬರೀ ಕಪಟನಾಟಕ ಎಂದು ತಿಳಿಯುತ್ತದೆ. ಇಂದು ಊನಾ ಚಳವಳಿಯ ನೇತೃತ್ವ ವಹಿಸಿರುವ ಜಿಗ್ನೇಶ್ ಮೇವಾನಿ ಖಚಿತಪಡಿಸಿರುವಂತೆ 2009ರಲ್ಲಿ ಇದೇ ಮೋದಿ 'ದನದ ಚರ್ಮ ಸುಲಿಯುವಾಗ ದಲಿತರಿಗೆ ಆಧ್ಯಾತ್ಮಿಕ ಶಾಂತಿ ಸಿಗುತ್ತದೆ' ಎಂದಿದ್ದ. ಒಮ್ಮೆ ಸಫಾಯಿ ಕರ್ಮಚಾರಿಗಳನ್ನು ಉದ್ದೇಶಿಸಿ ಮಾಡಿದ ಭಾಷಣವೊಂದರಲ್ಲಿ, ವಾಲ್ಮೀಕಿ ಜಾತಿಗೆ ಸೇರಿದ ಮಲ ಹೊರುವವರ ಕೆಲಸವನ್ನು ಪೂಜಾರಿ ದೇವಸ್ಥಾನವನ್ನು ಶುಚಿಮಾಡುವುದಕ್ಕೆ ಹೋಲಿಸಿದ್ದ. ರಾಜ್ಯದ ಐಎಎಸ್ ಅಧಿಕಾರಿಗಳಿಗೆ ಕೊಟ್ಟ ಹಲವಾರು ಲೆಕ್ಚರ್‌ಗಳಲ್ಲಿಯೂ ಮನುಷ್ಯರ ಹೇಲನ್ನು ಮನುಷ್ಯರೇ ಎತ್ತುವಂತಹ ಈ ಘೋರ ದೌರ್ಜನ್ಯವನ್ನು 'ಅಧ್ಯಾತ್ಮಿಕ ಅನುಭವ' ಎಂದು ಕರೆದಿದ್ದ. ಅದು ಸಮಾಜಸೇವೆಗಾಗಿ ಸಾಕ್ಷಾತ್ ಭಗವಂತನೆ ಅವರಿಗೆ ವಹಿಸಿದ ಕರ್ತವ್ಯ; ಹಾಗಾಗಿ ಶತಮಾನಗಳಿಂದಲೂ ಅದನ್ನು ಮುಂದುವರಿಸಿದ್ದಾರೆ ಎಂಬ ಸಮರ್ಥನೆಯನ್ನೂ ನೀಡಿದ್ದ. ತನ್ನ ಉಪನ್ಯಾಸಗಳನ್ನೆಲ್ಲ ಒಟ್ಟು ಸೇರಿಸಿ 'ಕರ್ಮಯೋಗ' ಹೆಸರಿನ ಪುಸ್ತಕವನ್ನೂ ಹೊರತಂದಿದ್ದಾನೆ. ಅದೂ ಸರ್ಕಾರಿ ವೆಚ್ಚದಲ್ಲಿ. ಮೋದಿಯ ಮಾತುಗಳ ಇಂಗಿತಾರ್ಥ ಏನೆಂದರೆ ವಾಲ್ಮೀಕಿಗಳು ಮಲಹೊರುತ್ತಲೆ ಇರಬೇಕು, ಮೋದಿಯಂಥವರು ಅಂಬೇಡ್ಕರ್ ವಿರೋಧಿಸುತ್ತಿದ್ದ ಬ್ರಾಹ್ಮಣಶಾಹಿ ಮತ್ತು ಕಾರ್ಪೋರೇಟುಗಳನ್ನು ಓಲೈಸುತ್ತ ರಾಜ್ಯಭಾರ ಮಾಡುತ್ತಲೆ ಇರಬೇಕು! ಹೀಗೆ ನಿಧಾನವಾಗಿ ಹೆಚ್ಚುವ ಖಾಸಗೀಕರಣವು ಬ್ರಾಹ್ಮಣಶಾಹಿ ಬಂಡವಾಳಶಾಹಿ ಜೋಡಿಯನ್ನು ಇನ್ನಷ್ಟು ಬಲಪಡಿಸಿ ಮೀಸಲಾತಿ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತ ಹೋಗುತ್ತದೆ. ಪರಿಣಾಮವಾಗಿ ದಲಿತರು ಎರಡನೆ ದರ್ಜೆಯ ಪ್ರಜೆಗಳಾಗಿ, ಬ್ರಾಹ್ಮಣಶಾಹಿಯ ಸೇವೆ ಮಾಡುತ್ತ ಅದರ ಪದಾತಿದಳಗಳಾಗಿ ಉಳಿಯುತ್ತಾರೆ.

ಅಭಿವೃದ್ಧಿಯ ಮಾದರಿ ಎಂದು ಟಾಂಟಾಂ ಮಾಡಲಾಗಿರುವ ಗುಜರಾತಿನಲ್ಲಿ ವಾಸ್ತವವಾಗಿ ದಲಿತರ ಪರಿಸ್ಥಿತಿ ಮಿಕ್ಕ ರಾಜ್ಯಗಳಿಗಿಂತ ಭಿನ್ನವಾಗಿಲ್ಲ. ಅವರ ಸ್ಥಾನಮಾನದಲ್ಲಿ ಕೂಡ ಯಾವ ಬದಲಾವಣೆಯೂ ಆಗಿಲ್ಲ. ದೇಶದ ಎಲ್ಲಾ ರಾಜ್ಯಗಳಲ್ಲಿ ಇರುವಂತೆ ಬಹಿಷ್ಕಾರ, ಅಸ್ಪೃಶ್ಯತೆ, ಜೀತ, ಅತ್ಯಾಚಾರ, ಜಾತಿಕ್ರೌರ್ಯ, ಮಲ ಹೊರುವ ಪದ್ಧತಿ ಗುಜರಾತ್‌ನಲ್ಲೂ ಇದೆ. ಆದರೆ ಇಂದು ಊನಾ ಘಟನೆಯಿಂದ ತೀರ ವಿಚಲಿತಗೊಂಡು ಕೈಕೈ ಹೊಸಕುತ್ತಿರುವ ಬಿಜೆಪಿ, ವಿಷಯದ ಗಂಭೀರತೆಯನ್ನು ಮರೆಮಾಚಲೋಸುಗ ಇದೊಂದು ದುರದೃಷ್ಟಕರ ಘಟನೆ; ಗುಜರಾತಿನಲ್ಲಿ ದಲಿತ ದೌರ್ಜನ್ಯಗಳ ಸಂಖ್ಯೆ ಕಡಿಮೆ ಇದೆ; ಬಿಜೆಪಿಯೇತರ ಸರಕಾರಗಳಿರುವ ಉತ್ತರ ಪ್ರದೇಶ, ಬಿಹಾರಗಳಲ್ಲಿ ಅತ್ಯಧಿಕ ದೌರ್ಜನ್ಯ ಪ್ರಕರಣಗಳು ವರದಿಯಾಗಿವೆ ಎಂದು ವಾದಿಸಲೆತ್ನಿಸುತ್ತಿದೆ. ಇತ್ತೀಚೆಗಷ್ಟೆ ರಾಜ್ಯಸಭೆಯ ಸದಸ್ಯನಾಗಿರುವ ನರೇಂದ್ರ ಜಾಧವ್ ಎಂಬಾತ "2014ರಲ್ಲಿ ಉತ್ತರ ಪ್ರದೇಶ, ರಾಜಸ್ಥಾನ, ಬಿಹಾರಗಳಲ್ಲಿ ಅತಿ ಹೆಚ್ಚು ದಲಿತ ದೌರ್ಜನ್ಯ ಪ್ರಕರಣಗಳು ನಡೆದಿವೆ. ಅಲ್ಲಿ 17ರಿಂದ 18 ಪ್ರತಿಶತ ಪ್ರಕರಣಗಳಾಗಿದ್ದರೆ ಗುಜರಾತಿನಲ್ಲಿ ಅದು ಕೇವಲ 2.4 ಪ್ರತಿಶತದಷ್ಟಿದೆ" ಎಂದು ಕೆಲವು ಅಂಕಿಅಂಶಗಳನ್ನು ಉರುಳಿಸಿದ್ದಾನೆ. ಆದರೆ ಬಿಜೆಪಿ ಮತ್ತದರ ವಕ್ತಾರರೆಲ್ಲ ಬರೀ ಬುರುಡೆ ಬಿಡುತ್ತಿದ್ದಾರೆ. ನೈಜ ಅಂಕಿಅಂಶಗಳು ಬೇರೆಯೆ ಇವೆ:

ರಾಷ್ಟ್ರೀಯ ಅಪರಾಧ ದಾಖಲೆಗಳ ಸಂಸ್ಥೆ (National Crime Records Bureau) ಹಿಂದೆಲ್ಲಾ ತನ್ನ ಲೆಕ್ಕಾಚಾರಗಳಿಗೆ ರಾಜ್ಯದ ಒಟ್ಟು ಜನಸಂಖ್ಯೆಯನ್ನು ಬಳಸುತ್ತಿತ್ತು. ಈ ತಪ್ಪನ್ನು ಸರಿಪಡಿಸಿ ಪ್ರತಿ 1 ಲಕ್ಷ ದಲಿತ ಜನಸಂಖ್ಯೆಗೆ ಎಷ್ಟು ದೌರ್ಜನ್ಯ ಪ್ರಕರಣಗಳು ದಾಖಲಾಗುತ್ತವೊ ಅದನ್ನೆ ನಿಜವಾದ ಸೂಚ್ಯಂಕವಾಗಿ



ಮಾಡಿರುವುದು 2012ರ ನಂತರವೆ. ಇದರ ಪ್ರಕಾರ 2014ರಲ್ಲಿ ಅತ್ಯಧಿಕ ಪ್ರಕರಣಗಳು ದಾಖಲಾಗಿರುವುದು ಬಿಜೆಪಿ/ಬಿಜೆಪಿ ಮಿತ್ರಪಕ್ಷದ ಆಡಳಿತವಿರುವ ಗೋವಾ, ರಾಜಸ್ಥಾನ ಮತ್ತು ಆಂಧ್ರ ಪ್ರದೇಶಗಳಲ್ಲಿ.

2014ರ ಅಂಕಿಅಂಶಗಳು

- ಗೋವಾ (ಬಿಜೆಪಿ) 66.8%
- ರಾಜಸ್ಥಾನ (ಬಿಜೆಪಿ) 65.7%
- ಆಂಧ್ರ(ಬಿಜೆಪಿ ಮಿತ್ರಪಕ್ಷ ಟಿಡಿಪಿ) 47.6%
- ಗುಜರಾತ್ (ಬಿಜೆಪಿ) 27.7%
- ಉತ್ತರ ಪ್ರದೇಶ 19.5%

2013ರ ಅಂಕಿಅಂಶಗಳು

- ಗುಜರಾತ್ 29.21% (ರಾಷ್ಟ್ರೀಯ ಸರಾಸರಿಗಿಂತ '16.95%' ಜಾಸ್ತಿ)
- ಉತ್ತರ ಪ್ರದೇಶ 15% (ರಾಷ್ಟ್ರೀಯ ಸರಾಸರಿಗಿಂತ ಕಡಿಮೆ)

2012ರ ಅಂಕಿಅಂಶಗಳು

- ಗುಜರಾತ್ 25.23% (ರಾಷ್ಟ್ರೀಯ ಸರಾಸರಿಗಿಂತ '19.85%' ಜಾಸ್ತಿ)
- ಉತ್ತರ ಪ್ರದೇಶ 17.16% (ರಾಷ್ಟ್ರೀಯ ಸರಾಸರಿಗಿಂತ ಕಡಿಮೆ)

ಗುಜರಾತ್ ದಲಿತಪೀಡಕರ ಪಟ್ಟಿಯಲ್ಲಿ ಅತ್ಯುನ್ನತ ಸ್ಥಾನ ಪಡೆದಿರುವ ರಾಜ್ಯಗಳಲ್ಲೊಂದು ಎನ್ನುವುದನ್ನು ಮೇಲಿನ ಅಂಕಿಅಂಶಗಳು ಸಾಬೀತುಪಡಿಸುತ್ತವೆ. ಇಷ್ಟೇ ಅಲ್ಲ, ಕೊಲೆ, ಅತ್ಯಾಚಾರ ಪ್ರಕರಣಗಳಲ್ಲೂ ಗುಜರಾತ್ ಹೆಚ್ಚಿನ ರಾಜ್ಯಗಳಿಗಿಂತ ಮುಂದಿದೆ. 2012ನ್ನು ಹೊರತುಪಡಿಸಿ ಮಿಕ್ಕ ವರ್ಷಗಳಲ್ಲಿ ಕೊಲೆ ಪ್ರಕರಣಗಳ ಶೇಕಡಾವಾರು ಸಂಖ್ಯೆ ಇತರ ರಾಜ್ಯಗಳಿಗಿಂತ ಜಾಸ್ತಿ ಇದೆ. ಅತ್ಯಾಚಾರ ಪ್ರಕರಣಗಳಲ್ಲಿ ಮಧ್ಯ ಪ್ರದೇಶ (4.2%), ಕೇರಳ (4%), ರಾಜಸ್ಥಾನಗಳ (2.8%) ನಂತರ ನಾಲ್ಕನೆ ಸ್ಥಾನ ಗುಜರಾತಿನದೆ ಆಗಿದೆ.

ವಾಸ್ತವದಲ್ಲಿ ಗುಜರಾತಿನಲ್ಲಿ ದಲಿತ ದೌರ್ಜನ್ಯ ತಡೆ ಕಾಯ್ದೆಯನ್ನು ಉದ್ದೇಶಪೂರ್ವಕವಾಗಿ ಅಲಕ್ಷಿಸಲಾಗಿದ್ದು ಸದರಿ ಕಾಯ್ದೆಯಡಿ ದಾಖಲಿಸಲಾಗುವ ಪ್ರಕರಣಗಳಲ್ಲಿ ಶೇಕಡಾ 90ಕ್ಕೂ ಅಧಿಕ ಪ್ರಕರಣಗಳು ಖುಲಾಸೆಗೊಳ್ಳುತ್ತಿವೆ. ಇದಕ್ಕೆ ರಾಜ್ಯ ಸರ್ಕಾರದ ಉದ್ದೇಶಪೂರ್ವಕ ನೀತಿಗಳೇ ಕಾರಣ ಎನ್ನುವುದಕ್ಕೆ ಈ ಕೆಳಗಿನ ಕೆಲವು ಸಂಗತಿಗಳೆ ಸಾಕ್ಷಿ:

- ಇಂತಹ ಪ್ರಕರಣಗಳ ತನಿಖೆಯನ್ನು ಡಿವೈಎಸ್‌ಪಿಗಿಂತ ಕೆಳಮಟ್ಟದ ಅಧಿಕಾರಿಗಳು ಮಾಡಬಾರದೆಂದಿದ್ದರೂ ಅತ್ಯಧಿಕ ಪ್ರಕರಣಗಳಲ್ಲಿ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್‌ಗಳೆ ತನಿಖೆ ನಡೆಸುತ್ತಾರೆ.
- ನ್ಯಾಯಾಲಯಗಳಿಗೆ ಬಲಿಪಶುಗಳ ಜಾತಿ ಪ್ರಮಾಣಪತ್ರಗಳನ್ನು ಒದಗಿಸಲಾಗುತ್ತಿಲ್ಲ.
- ರಾಜ್ಯ ಸರ್ಕಾರ ಕಾಯ್ದೆಗೆ ತಿದ್ದುಪಡಿ ಮಾಡಿದೆ ಎಂದು ನ್ಯಾಯಾಲಯಕ್ಕೆ ಸುಳ್ಳು ಹೇಳಲಾಗುತ್ತದೆ.
- ಕಾಯ್ದೆಯಲ್ಲಿ ಅವಕಾಶ ಇಲ್ಲದ ಹೊರತಾಗಿಯೂ ಆರೋಪಿಗಳಿಗೆ ನಿರೀಕ್ಷಣಾ ಜಾಮೀನು ನೀಡಲಾಗುತ್ತದೆ.


ದಲಿತ ದೌರ್ಜನ್ಯ ಕೇಸುಗಳಲ್ಲಿ ಶಿಕ್ಷೆಯಾಗುವ ಪ್ರಕರಣಗಳ ಸಂಖ್ಯೆಯಲ್ಲಿಯೂ ಗುಜರಾತಿನ ದಾಖಲೆ ತೀರ ಕಳಪೆಯಾಗಿದೆ. ಶಿಕ್ಷೆ ವಿಧಿಸಲಾಗಿರುವ ಪ್ರಕರಣಗಳ ಪ್ರಮಾಣ ದೇಶಾದ್ಯಂತ 22 ಪ್ರತಿಶತದಷ್ಟಿದ್ದರೆ ಗುಜರಾತಿನಲ್ಲಿ ಅದು ಬರೀ 2.9 ಪ್ರತಿಶತ ಇದೆ. ಇದಕ್ಕೆ ಜವಾಬ್ದಾರಿಯುತ ಸ್ಥಾನಗಳಲ್ಲಿರುವವರ ಪೂರ್ವಗ್ರಹಪೀಡಿತ ಧೋರಣೆಗಳೇ ಕಾರಣವೆಂದು ತಿಳಿದುಬಂದಿದೆ. ಗುಜರಾತಿನ 16 ಜಿಲ್ಲೆಗಳಲ್ಲಿ ಸ್ಥಾಪಿಸಲಾದ ವಿಶೇಷ ದೌರ್ಜನ್ಯ ನ್ಯಾಯಾಲಯಗಳು ಏಪ್ರಿಲ್ 1, 1995ರ ನಂತರದ ಹತ್ತು ವರ್ಷಗಳಲ್ಲಿ ನೀಡಿರುವ 400 ತೀರ್ಪುಗಳ ಅಧ್ಯಯನ ನಡೆಸಿದ ಅಹಮದಾಬಾದಿನ ಸಾಮಾಜಿಕ ನ್ಯಾಯಮಂಡಳಿ ಕಂಡುಕೊಂಡಿರುವಂತೆ ಪೊಲೀಸರು ತಮ್ಮ ತನಿಖೆಯ ವೇಳೆ ಕೇಸುಗಳನ್ನು ಉದ್ದೇಶಪೂರ್ವಕವಾಗಿ ದುರ್ಬಲಗೊಳಿಸುವ ಮೂಲಕ ಅಪರಾಧಿಗಳಿಗೆ ಶಿಕ್ಷೆಯಾಗದಂತೆ ನೋಡಿಕೊಳ್ಳುತ್ತಾರೆ. ನ್ಯಾಯಾಂಗದ ಮೇಲೂ ದೋಷಾರೋಪ ಹೊರಿಸಿರುವ ಮಂಡಳಿ "ತನಿಖೆಯಲ್ಲಿ ಆದ ತಾಂತ್ರಿಕ ಲೋಪದೋಷಗಳ ಕುಂಟುನೆಪ ಹೇಳಿ ಅಪರಾಧಿಗಳನ್ನು ದೋಷಮುಕ್ತಗೊಳಿಸಲಾಗಿದೆ; ಆ ಲೋಪದೋಷಗಳಿಗೆ ಕಾರಣೀಭೂತರಾದವರನ್ನು ಶಿಕ್ಷಿಸಲು ಅದೇ ಕಾಯ್ದೆಯಲ್ಲಿ ಅವಕಾಶಗಳಿದ್ದರೂ ಅವನ್ನು ಬಳಸಿಕೊಳ್ಳಲಾಗಿಲ್ಲ" ಎಂದು ಹೇಳಿದೆ.

'ಅಭಿವೃದ್ಧಿಯ ಮಾದರಿ' ಎಂದೆ ದೇಶಾದ್ಯಂತ ಪ್ರಚಾರ ಮಾಡಲಾಗಿರುವ ಮೋದಿಯ ಗುಜರಾತಿನಲ್ಲಿ ದಲಿತರ ದುಸ್ಥಿತಿಯ ಬಗ್ಗೆ ಇನ್ನಷ್ಟು ಸ್ಪಷ್ಟ ಚಿತ್ರಣವನ್ನು ಒದಗಿಸುವ ಕೆಲವು ಉದಾಹರಣೆಗಳು ಇಲ್ಲಿವೆ:

ಗುಜರಾತಿನಲ್ಲಿ ದಲಿತರ ಸುಮಾರು 64 ಲಕ್ಷ ಮನೆಗಳಿಗೆ ಒಳಚರಂಡಿ ವ್ಯವಸ್ಥೆ ಇಲ್ಲ. ಸುಮಾರು 52 ಲಕ್ಷ ಮನೆಗಳಿಗೆ ಶೌಚಾಲಯದ ವ್ಯವಸ್ಥೆ ಇಲ್ಲ. ರಾಜ್ಯದಾದ್ಯಂತ ಪೇಟೆ ಪಟ್ಟಣಗಳಲ್ಲಿ ಇಂದಿಗೂ ಮಲ ಹೊರುವ ಪದ್ಧತಿ ಜಾರಿಯಲ್ಲಿದೆ. ಹೆಚ್ಚುಕಮ್ಮಿ 'ಸ್ಮಾರ್ಟ್ ಸಿಟಿ' ಎಂದೇ ಪರಿಗಣಿಸಲ್ಪಟ್ಟಿರುವ ಅಹಮದಾಬಾದ್ ನಗರವೊಂದರಲ್ಲೆ ಇಂತಹ 188 ಪಾಯಿಖಾನೆಗಳಿರುವ ವಿಷಯ ಗುಟ್ಟಾಗಿ ಉಳಿದಿಲ್ಲ.

ಭೂಸುಧಾರಣೆ ಕಾಯ್ದೆಯನ್ವಯ ದಲಿತರಿಗೆ ಭೂಮಿ ದೊರಕಿದೆ ಎನ್ನಲಾದರೂ ಅದು ಬರೀ ಹೆಸರಿಗೆ ಮಾತ್ರ. ವಾಸ್ತವವಾಗಿ ಆ ಜಮೀನುಗಳೆಲ್ಲವೂ ಜಮೀನ್ದಾರರ ಕಪಿಮುಷ್ಟಿಯಲ್ಲಿವೆ. ದಲಿತರು ಕಾನೂನಾತ್ಮಕವಾಗಿ ತಮ್ಮದಾಗಿದ್ದ ಭೂಮಿಯಲ್ಲಿ ಜೀತದಾಳುಗಳಾಗಿ ದುಡಿಯಬೇಕಾದ ಪರಿಸ್ಥಿತಿ ಬಂದಿದೆ. ಇದನ್ನು ವಿರೋಧಿಸುವವರನ್ನು ಊರಿನಿಂದ ಬಹಿಷ್ಕರಿಸಲಾಗುತ್ತದೆ. ಒಂದು ಸಂದರ್ಭದಲ್ಲಿ ರಾಷ್ಟ್ರೀಯ ಮಾನವ ಹಕ್ಕು ಆಯೋಗ ಕೇವಲ ಎರಡು ದಿನಗಳ ಅವಧಿಯಲ್ಲಿ ಇಂತಹ 77 ಪ್ರಕರಣಗಳನ್ನು ದಾಖಲಿಸಿದೆ.

ಕೆಲವು ವರ್ಷಗಳ ಹಿಂದೆ ನವಸರ್ಜನ್ ಸಂಸ್ಥೆ ನಡೆಸಿದ ಸಮೀಕ್ಷೆಯೊಂದು ಗುಜರಾತಿನ ಶೇ. 98ಕ್ಕೂ ಅಧಿಕ ಹಳ್ಳಿಗಳಲ್ಲಿ ಅಸ್ಪೃಶ್ಯತೆ ಇನ್ನೂ ಜಾರಿಯಲ್ಲಿರುವುದನ್ನು ಬಯಲಿಗೆಳೆದಿದೆ. ರಾಜ್ಯದಲ್ಲಿ ದಲಿತರನ್ನು ಪೂಜಾರಿಗಳಾಗಿ ನೇಮಿಸಲಾಗುತ್ತಿದೆ ಎಂದು ದೊಡ್ಡದಾಗಿ ಪ್ರಚಾರ



ಮಾಡಲಾಗುತ್ತಿದೆ. ಆದರೆ ಅದೆಲ್ಲ ಸೋಮ... ಅಕ್ಷರಧಾಮಗಳಂಥಲ್ಲಿ ಅಲ್ಲ, ಬರೀ ಊರ ಹೊ... ಕಾಡೊಳಗಿರುವ ಪಾಳುಬಿದ್ದ ಮಂದಿರಗಳ... ಸೀಮಿತವಾಗಿದೆ! ನಿಜ ಹೇಳಬೇಕೆಂದರೆ ರಾಜ್ಯದ ... ಕಡೆಗಳಲ್ಲಿ ಈಗಲೂ ದಲಿತರಿಗೆ ಮಂದಿರ ಪ್ರವೇಶ ... 2009ರ ಒಂದು ಸಮೀಕ್ಷೆಯಂತೆ 1655 ಹಳ್ಳಿ... 98,000 ದಲಿತರಿಗೆ ದೇವಸ್ಥಾನ ಪ್ರವೇಶ... ನಿಷೇಧಿಸಲಾಗಿದೆ.

95 ಪ್ರತಿಶತಕ್ಕೂ ಅಧಿಕ ದಲಿತರಿಗೆ ಪ್ರತ್ಯೇಕ ಲೋ... ತಟ್ಟೆಗಳಲ್ಲಿ ಆಹಾರ ನೀಡಲಾಗುತ್ತದೆ. ಶಾಲೆಗಳಲ್ಲಿ ... ಮಕ್ಕಳಿಂದ ಬಲವಂತವಾಗಿ ಶೌಚಾಲಯ ತೊಳೆ... ಪ್ರಕರಣಗಳು ಪತ್ತೆಯಾಗಿವೆ. ಅಂತರ್ಜಾ... ಮದುವೆಯಾಗುವವರನ್ನು ಸವರ್ಣೀಯರು ಜೀ... ದಹಿಸಿದ ಉದಾಹರಣೆಗಳೂ ಇವೆ. ಕಛ್ ಭೂ... ಪೀಡಿತರಿಗೆ ಮರುವಸತಿ ಕಲ್ಪಿಸುವಲ್ಲಿಯೂ ಜಾತಿಆಧಾ... ಭಾರಿ ತಾರತಮ್ಯ ತೋರಲಾಗಿದೆ.


ಗುಜರಾತಿನಲ್ಲಿ ದಲಿತ ಮಹಿಳೆ ಸಂತೆ... ಖರೀದಿಸುವ ತರಕಾರಿಯನ್ನು ಆಕೆಯ ಮ... ಎಸೆಯಲಾಗುತ್ತದೆ. ಅಲ್ಲಿ ದಲಿತ ಮಹಿಳೆಯರು ... ಹಸುಗಳ ಹಾಲನ್ನು ಖರೀದಿಸಲು ನಿರಾಕರಿಸುವ ಸಹ... ಸಂಘಗಳೂ ಇವೆ. ನಂಬಲಸಾಧ್ಯವೆನಿಸಿದರೂ ಇದು ... ಇದಕ್ಕೆ ಜೀವಂತ ಉದಾಹರಣೆ ಮೆಹಸಾನ ಜಿಲ್ಲೆ.

2008ರಿಂದ ಜಾರಿಗೆ ಬಂದಿರುವ 'ಗುಜ... ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ'ಯ ಪ್ರಧಾನ ಉದ್ದೇ... ದಲಿತರ ಮತ್ತು ಸ್ತ್ರೀಯರ ಧಾರ್ಮಿಕ ಸ್ವಾತಂತ್ರ್ಯ... ಹತ್ತಿಕ್ಕುವುದಾಗಿದೆ. ಈ ಕಾಯ್ದೆಯ ಪ್ರಕಾರ ಮತಾ... ಆಗಲು ಇಷ್ಟಪಡುವ ಯಾವನೆ ವ್ಯಕ್ತಿ ಸ್ಥಳೀಯ ... ಮ್ಯಾಜಿಸ್ಟ್ರೇಟರಿಂದ ಪೂರ್ವಾನುಮತಿ ಪಡೆದುಕೊಳ್ಳು... ಕಡ್ಡಾಯವಾಗಿದೆ. ಕಾಯ್ದೆಯನ್ನು ಉಲ್ಲಂಘಿಸುವವರಿಗೆ ... 3 ವರ್ಷಗಳ ಸಜೆ ಹಾಗೂ 50,000 ರೂಪಾಯಿ ... ವಿಧಿಸಲಾಗುತ್ತದೆ. ಒಂದುವೇಳೆ ಅಂತಹ ವ್ಯಕ್ತಿ ಅ... ವಯಸ್ಕ ಅಥವಾ ಮಹಿಳೆ ಅಥವಾ ದಲಿತ ಆ... ಶಿಕ್ಷೆಯ ಅವಧಿಯನ್ನು 4 ವರ್ಷಕ್ಕೆ ಮತ್ತು ದಂ... ಮೊತ್ತವನ್ನು 1 ಲಕ್ಷಕ್ಕೆ ಏರಿಸಲಾಗುತ್ತದೆ! ಇದರರ್ಥ ಏನ... ದಲಿತರು ದಲಿತರಾಗಿಯೆ ಉಳಿದು ಮೇಲ್ಜಾತಿಗಳ ... ಮಾಡುತ್ತಿರಬೇಕು; ಹಿಂದೂ ಮಹಿಳೆಯರು ಹಿಂ... ಧರ್ಮದಲ್ಲೆ ಉಳಿಯಬೇಕು, ಅನ್ಯಧರ್ಮೀಯ... ವಿವಾಹವಾಗಬಾರದು!

ದುರದೃಷ್ಟವಶಾತ್ ಕ್ಯಾನ್ಸರ್ ವ್ಯಾಧಿಗೆ ಸಮಾನವಾಗಿ... ದಲಿತ ಸಮುದಾಯಗಳ ಈ ದುಸ್ಥಿತಿಯನ್ನು ಗಾಂಧಿ... ತವರೂರು ಮತ್ತು 'ಅಭಿವೃದ್ಧಿ' ಎಂಬ ಮುಖವಾ... ಅಡಿಯಲ್ಲಿ ಮರೆಮಾಚಲಾಗಿದೆ. ರಾಷ್ಟ್ರೀಯ ಸರಾಸರಿ... ಅರ್ಧಕ್ಕಿಂತಲೂ ಕಡಿಮೆ ಸಂಖ್ಯೆಯಲ್ಲಿರುವ (ಸುಮ... 8%) ಗುಜರಾತಿನ ದಲಿತರು ಆಗೊಮ್ಮೆ ಈಗೊ... ಬಂಡಾಯ ಎದ್ದಿದ್ದಾರಾದರೂ ನಿರಂತರವಾದ ಪ್ರತಿರೋ... ಚಳವಳಿಯೊಂದನ್ನು ಕಟ್ಟಲು ಇದುವರೆಗೆ ಸಾಧ್ಯವಾಗಿರ... ಆದರೆ ಇದೀಗ ರಾಷ್ಟ್ರೀಯ ಮಟ್ಟದಲ್ಲಿ ಅಭೂತಪೂ... ಬೆಂಬಲ ಪಡೆದುಕೊಂಡಿರುವ ಊನಾ ಚಳವಳಿ ... ಕೊರತೆಯನ್ನು ತುಂಬುವಂತೆ ತೋರುತ್ತಿದೆ. ಚೆಡ್ಡಿಗಳ ... ತೂರಾಟ ಮತ್ತಿತರ ರೀತಿಯ ಕಿರುಕುಳ, ಪ್ರತಿರೋಧಗಳ... ದಿಟ್ಟವಾಗಿ ಎದುರಿಸಿ ಮುಂದುವರಿದ 'ಚಲೋ ಊ... ಮೆರವಣಿಗೆ' ಯಶಸ್ವಿಯಾಗಿ 81 ಕಿಮೀ ಕ್ರಮಿಸಿ ಆ... 15ರಂದು ಊನಾದಲ್ಲಿ ಬೃಹತ್ ಮಹಾಸಭೆಯೊಂ... ಮುಕ್ತಾಯಗೊಂಡಿದೆ. ದಲಿತರ ಈ ಐತಿಹಾಸಿಕ ಹೋರಾ... ಕಸುವು ಕಳೆದುಕೊಳ್ಳದೆ ಮುಂದುವರಿಯಲಿ, ಇನ್ನ... ಶಕ್ತಿಯುತವಾಗಿ ದೇಶದುದ್ದಗಲಕ್ಕೂ ವ್ಯಾಪಿಸಲಿ ಎಂ... ಆಶಿಸೋಣ.

–ಸುರೇಶ್ ಭಟ್ ಬಾಕ್ರಬೈ...


(ಆಧಾರ: 12.8.2016ರ ಡೆಕ್ಕನ್ ಹೆರಾಲ್ಡ್ ... ಆನಂದ ತೇಲ್ತುಂಬ್ಡೆ ಲೇಖನ; ಮಂಕು ಬೂ(ಮೋ)ದಿ...



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ವ್ಯಕ್ತಿ ಎಂಬ ಶಕ್ತಿ



ಅರಣ್ಯದಲ್ಲಿ ಪ್ರಾಣಿಗಳು ಹೋರಾಡುತ್ತವೆ. ಆಕ್ರಮಣ ಮಾಡುತ್ತವೆ. ಕೊಂದು ತಿನ್ನುತ್ತವೆ. ಆದರೆ ಅವ್ಯಾವುದೂ ಕೂಡ ತಮ್ಮ ಶ್ರೇಷ್ಠತೆಯ ಹಿರಿಮೆಯನ್ನು ಎತ್ತಿಹಿಡಿಯಲೇನಲ್ಲ. ಕಾಡಿನ ರಾಜ ಸಿಂಹ ಎಂದು ಯಾವಾಗಲೂ ಕುತ್ತಿಗೆ ಪೂರ್ತಿ ಕೇಸರವಿಟ್ಟುಕೊಂಡಿರುವ ಸೋಮಾರಿ ಪ್ರಾಣಿಯೊಂದನ್ನು ತೋರಿಸಿ ಮಕ್ಕಳಿಗೆ ಹೇಳುತ್ತಿರುತ್ತೇವೆ. ರಾಜ ಎಂಬ ಪರಿಕಲ್ಪನೆಯನ್ನು ನಾವು ವ್ಯಕ್ತಿಗೆ ಆರೋಪಿಸಿಕೊಂಡು, ಅವನಿಗೆ ಗಾಂಭೀರ್ಯ, ಧೀಮಂತ ಮುಖಭಾವದ ಗುಣಗಳನ್ನೆಲ್ಲಾ ನಿರೀಕ್ಷಿಸಿಕೊಂಡು, ಒಟ್ಟಾರೆ ರಾಜ ಎಂದರೆ ಹೀಗಿರಬೇಕು ಎಂದು ಬಯಸುತ್ತೇವೆ. ಬೇಟೆಯಾಡದ, ಸಂಸಾರ ಸಾಕದ ಗಂಡು ಸಿಂಹವನ್ನು ರಾಜ ಎಂದು ರಾಜತ್ವದ ಗುಣಗಳನ್ನು ಗುರುತಿಸುತ್ತೇವೆ. ಆದರೆ ಬೇಟೆಯಾಡುವ, ಸಂಸಾರವನ್ನು ಸಾಕಿ ಸಲಹುವ ಸಿಂಹಿಣಿಯನ್ನು ರಾಣಿ ಎಂದೂ ಹೇಳುವುದಿಲ್ಲ. ಯಾಕೆಂದರೆ ಅದಕ್ಕೆ ಗಂಡು ಸಿಂಹಕ್ಕಿರುವಂತಹ ಬಾಹ್ಯಾಕರ್ಷಣೆಗಳು ಇಲ್ಲ, ಇದು ರೂಢಿ. ಸಮಾಜವು ಸಾಮೂಹಿಕವಾಗಿ ಒಂದು ರೂಢಿಯನ್ನು ಎಲ್ಲರಿಗೂ ಅಭ್ಯಾಸ ಮಾಡಿಸುತ್ತದೆ. ಎಂತದ್ದೋ ಒಂದು ರೂಢಿಯಿಂದ ತಳೆಯುವಂತಹ ಧೋರಣೆಗಳನ್ನು ಮೀರುವುದು ತಂತ್ರ ಸಾಧನೆಯಲ್ಲಿ ಒಂದು ಯಶಸ್ಸಿನ ಹಂತ. ಸಾಮಾನ್ಯರಲ್ಲಿದ್ದಂತೆ ಸ್ವರ್ಗದ ಆಸೆ, ನರಕದ ಭೀತಿ ಇಲ್ಲದ್ದು ಅದು. ನರಕ ಮತ್ತು ಸ್ವರ್ಗ ಎಂಬ ಎರಡೂ ಪರಿಕಲ್ಪನೆಗಳು ಮೋಸಗೊಳಿಸುವ ಪರಿಕಲ್ಪನೆಗಳೇ ಆಗಿವೆ. ಒಳ್ಳೆಯ ಮೋಸ, ಕೆಟ್ಟ ಮೋಸ ಎಂಬುದಿಲ್ಲ, ಯಾವುದು ಅವಾಸ್ತವವ್ರೋ, ಯಾವುದು ಅನೈಸರ್ಗಿಕವ್ರೋ ಅದು ಶಕ್ತಿಯ ಕೇಂದ್ರವಾಗುವುದಿಲ್ಲ. ಶಕ್ತಿಯ ಕೇಂದ್ರ ಎನ್ನುವುದಾದರೂ ಕೂಡ ಏನದು? ಈರುಳ್ಳಿಯ ಸಿಪ್ಪೆಗಳನ್ನು ಬಿಡಿಸುತ್ತಾ ಬಂದಂತೆ ಒಳಗೇನೂ ಇಲ್ಲದಂತಿರುವುದೇ ಅದು. ಖಾಲಿ. ಅದೇ ಈಥರ್. ಅದೇ ಆಕಾಶ. ಅದೇ ಶೂನ್ಯ. ಶೂನ್ಯವೇ ಶಕ್ತಿಯ ಕೇಂದ್ರ. ಅದರಲ್ಲಿ ಒಳ್ಳೆಯದು ಅಥವಾ ಕೆಟ್ಟದ್ದು ಎಂಬ ಲೇಬಲ್ಲುಗಳನ್ನು ಹಚ್ಚಿಕೊಂಡಿರುವ ಯಾವುದೇ ಒಂದು ಬಂದರೂ ಅದು ಅಡಚಣೆಯೇ. ಇನ್ನೂ







ಮುಂದುವರಿದು ಹೇಳಬೇಕೆಂದರೆ, ಅದಕ್ಕೆ ಹೆಸರುಗಳ ಬೇಧವಿರುವುದಿಲ್ಲ, ತನ್ನದು ಶ್ರೇಷ್ಠ ಮತ್ತೊಬ್ಬರದ್ದು ಕನಿಷ್ಟ ಎಂಬ ತುಲನಾತ್ಮಕ ಬುದ್ಧಿ ಇರುವುದಿಲ್ಲ, ಶಂಕರಾಚಾರ್ಯ, ಮಧ್ವಾಚಾರ್ಯ ಅಥವಾ ಯಾವುದೇ ಸಿದ್ಧಾಂತವಾದಿಗಳು ತಮ್ಮ ವಾದವನ್ನು ಜಡಿಯುತ್ತಾ ಜಡರಾಗುವುದು ಇಲ್ಲೇ. ತಮ್ಮದೇ ಶ್ರೇಷ್ಠ. ಅದೇ ಅಂತಿಮ. ಮತ್ತೊಬ್ಬರದನ್ನು ಖಂಡಿಸಿ ತಮ್ಮದನ್ನು ಮಂಡಿಸುವ ಧಾವಂತ ತೋರಿದ ಕೂಡಲೇ ಅಲ್ಲಿಗೇ ಅವರ ಯಥಾರ್ಥ ಶೂನ್ಯಸಂಪಾದನೆಯ ಪತನ ಪ್ರಾರಂಭವಾಗುತ್ತದೆ.

ಸಾಮಾಜಿಕವಾಗಿ ಈ ಖಂಡನೆ ಮಂಡನೆಗಳು, ಪ್ರತಿಭಟನೆ, ಮನ್ನಣೆಗಳೆಲ್ಲಾ ಇರುತ್ತವೆ. ಆದರೆ ಆಧ್ಯಾತ್ಮದಲ್ಲಿ ಅದೇನೂ ಇರಲು ಸಾಧ್ಯವಿಲ್ಲ.

ಬುದ್ಧನೆಂಬ ಉಪಕರಣ

ಇತ್ತೀಚೆಗೆ ಓರ್ವ ಯುವ ಆಧ್ಯಾತ್ಮ ಚಿಂತಕನೊಬ್ಬ ತನ್ನ ಫೇಸ್‌ಬುಕ್ ವಾಲ್ ಮೇಲೆ ಯೇಸು ಮತ್ತು ಬುದ್ಧನನ್ನು ಹೋಲಿಸುತ್ತಾ ಬರೆದುಕೊಂಡಿದ್ದ, ಬುದ್ಧ ಯೇಸುವಿಗಿಂತ ಶ್ರೇಷ್ಠ, ಏಕೆಂದರೆ ಯೇಸು ತನಗೆ ಹಿಂಸೆ ಕೊಡಲು ಬಂದವರನ್ನು ಪರಿವರ್ತಿಸಲಿಲ್ಲ, ಒಳ್ಳೆಯವರನ್ನಾಗಿ ಮಾಡಲಿಲ್ಲ, ಆದರೆ ಬುದ್ಧ ತನ್ನ ಬಳಿಗೆ ಬಂದ ಅಂಗುಲಿಮಾಲನನ್ನು ಒಳ್ಳೆಯವನನ್ನಾಗಿ ಪರಿವರ್ತಿಸಿದ. ಆದ್ದರಿಂದ ಬುದ್ಧ ಶ್ರೇಷ್ಠ ಎಂದು ಅವನ ಹೇಳಿಕೆ. ಅವನು ಬಹಳ ಕಿರಿಯ ಮತ್ತು ಇನ್ನೂ ದಾರಿಯನ್ನು ಕ್ರಮಿಸಿರದವನು ಎಂದುಕೊಳ್ಳೋಣ. ಆದರೆ ಗಮನಿಸಲು ಇಲ್ಲೊಂದು ಅಂಶವಿದೆ. ಅಂಗುಲಿಮಾಲನ ಪರಿವರ್ತನೆಯಲ್ಲಿ ಬುದ್ಧನು ಒಂದು ಉಪಕರಣ. ಕಾರಣನಲ್ಲ, ಅಂಗುಲಿಮಾಲನ ಪರಿವರ್ತನೆಗೆ ಕಾರಣ ಸ್ವಯಂ ಅಂಗುಲಿಮಾಲನೇ ಆಗಿರುವನು. ಹಾಗೇನಾದರೂ ಬುದ್ಧ ಈ ಬಗೆಯ ಪರಿವರ್ತನೆಗೆ ಕಾರಣವಾಗುವನೆಂದರೆ ಅವನನ್ನು ಸದಾ ಕೊಲೆ ಮಾಡಲು ಯತ್ನಿಸುತ್ತಿದ್ದ ದೇವದತ್ತ ಎಂದೋ ಪರಿವರ್ತಿತನಾಗ ಬಹುದಿತ್ತು ಅಥವಾ ಬುದ್ಧನ ನಾನಾರೀತಿಯಲ್ಲಿ ಮಾನಗೆಡವಲು ಬಂದವರೆಲ್ಲಾ ಪರಿವರ್ತಿತರಾಗಬಹುದಿತ್ತು, ಬುದ್ಧನು ನೈಸರ್ಗಿಕವಾಗಿ ತನಗೆ ತಾನು ಬೆಳಕಾಗಿದ್ದ. ಕಣ್ಣುಬಿಟ್ಟವರಿಗೆಲ್ಲಾ ಬೆಳಕಿನ ದರ್ಶನವಾಗಿತ್ತು. ಬೆಳಕಿನ ಸೆಲೆಯೊಡನೇ ಸಂಚರಿಸುತ್ತಿದ್ದರೂ ಕಣ್ಣುಬಿಡದವರು ತಮ್ಮಲ್ಲಿ ಕತ್ತಲೆಯನ್ನೇ ತುಂಬಿಕೊಂಡಿರುತ್ತಿದ್ದರು. ನಿಸರ್ಗವನ್ನು ಅರ್ಥಮಾಡಿಕೊಂಡವರಿಗೆ ಬುದ್ಧತ್ವವನ್ನೂ ಅರ್ಥ ಮಾಡಿಕೊಳ್ಳಲು ಸಾಧ್ಯ. ಬುದ್ಧತ್ವ ಎನ್ನುವುದಾದರೂ ಏನು? ಅರ್ಥ ಮಾಡಿಕೊಳ್ಳಲು ಒಂದು ಹೆಸರು. ಆದರೆ ಆ ಹೆಸರು ಎಂಬುದು ಶ್ರೇಷ್ಠ ಮತ್ತೊಂದು ಹೆಸರು ಕನಿಷ್ಠ ಎಂದು ಹೊಡೆದಾಡುವವರು ಸಿದ್ಧಾಂತವಾದಿಗಳು. ನಾಮದಾಕರ್ಷಣೆಗೆ ಮರುಳಾಗಿರುವವರು. ಮೋಹಿತರು. ಅದು ಮುಂದುವರಿದಂತೆ ಉನ್ಮತ್ತತೆ ಕಾಡುತ್ತದೆ. ಆಗಲೇ ಹಿಂದೂತ್ವ, ಇಸ್ಲಾಂ ವಾದ, ಅದ್ವೈತ, ದ್ವೈತ, ಹೀನಾಯಾನ, ಮಹಾಯಾನಗಳು, ಕ್ಯಾಥೋಲಿಕ್, ಪ್ರೊಟೆಸ್ಟೆಂಟ್, ಎಲ್ಲಾ ಆರ್ಥೋಡಾಕ್ಸ್‌ಗಳೂ ಹುಟ್ಟಿಕೊಳ್ಳುವುದು. ಯಾವುದೇ ಒಂದು ಪಂಥ ಹುಟ್ಟಿತೆಂದರೆ ಅಲ್ಲಿ ನಿಶ್ಚಯವಾಗಿ ತಿಳಿಯಿರಿ. ಅಲ್ಲಿಗೆ ಅದು ಕಳೇಬರವೆಂದು: ಒಂದು ಜೈವಿಕತೆಯು ಹೆಣವಾಯಿತೆಂದು. ನಂತರ ಹೆಣಗಳ ಸೌಂದರ್ಯವನ್ನು ವರ್ಣಿಸುವವರು ಬಡಿದಾಡಿಕೊಳ್ಳುವರು. ನಮ್ಮದು ಚೆಂದ, ಶ್ರೇಷ್ಠ, ಪವಿತ್ರ ಇತ್ಯಾದಿ ಹುಸಿ ಉತ್ಪ್ರೇಕ್ಷೆಗಳಿಂದ.

ಒಂದು ಧರ್ಮ ಪಾಪ ಕ್ಷಮೆಗೆ, ಪರಿಹಾರಕ್ಕೆ ಚೀಟಿ ಕೊಡುವುದು, ಪಾಪ ಪುಣ್ಯಗಳ ವ್ಯಾಪಾರ ಮಾಡುತ್ತಿದೆ, ಅದು ಭ್ರಷ್ಟಗೊಂಡಿದೆ ಎಂದು ಧಿಕ್ಕರಿಸುತ್ತಾ ಅದರಿಂದ ಮತ್ತೊಂದು ಕವಲೊಡೆದು ಇನ್ನೂ ಭ್ರಷ್ಟಗೊಂಡಿತು. ಮತ್ತೊಂದು ಧರ್ಮವು ತನ್ನ ಧರ್ಮಸ್ಥಾಪಕನ ನಂತರ ಮತ್ತೊಬ್ಬ ಪ್ರವಾದಿಸುವವನೇ ಹುಟ್ಟುವುದಿಲ್ಲ ಎಂದು ಘೋಷಿಸಿಕೊಂಡು ತನ್ನ ಚೌಕಟ್ಟನ್ನು ಕಟ್ಟಿಕೊಂಡು ತನ್ನ ಜಡತ್ವವನ್ನು ಘೋಷಿಸಿತು. ಮಗದೊಂದು ಧರ್ಮವೇ ಅಲ್ಲದ ಜೀವನ ಪದ್ಧತಿಯು ರಾಜಕೀಯ ಉದ್ದೇಶಗಳಿಗೆ, ತನ್ನ ಸಾಮಾಜಿಕ ಶೋಷಣೆಗಳನ್ನು ಸಮರ್ಥಿಸಿಕೊಳ್ಳುವುದಕ್ಕೆ ತರಾತುರಿಯಲ್ಲಿ ಸ್ಥಾಪಕ ಧರ್ಮದಂತೆ ವರ್ತಿಸತೊಡಗುವುದು.

ಸಿದ್ಧಾಂತಗಳ ಹೆಣಗಳು

ಆಧ್ಯಾತ್ಮ ಚಿಂತಕರು ಆಧ್ಯಾತ್ಮವನ್ನು ಕುರಿತು ಚಿಂತಿಸುವರು. ತುಲನೆ ಮಾಡುವರು. ಯಾವುದು ಶ್ರೇಷ್ಠ ಯಾವುದು ಕನಿಷ್ಠವೆಂದು ಹೋಲಿಕೆ ಮಾಡುವರು. ಆದರೆ ಅನುಭಾವಿಗಳಾಗರು. ಆಧ್ಯಾತ್ಮವನ್ನು ಅನುಭವಿಸಲಾರರು. ಅನುಭವವನ್ನು ಪಡೆಯದವನು ಒಳಕ್ಕೆ ಹೋಗಲಾರ. ಆಳಕ್ಕೆ ಇಳಿಯಲಾರ. ಒಮ್ಮೆ ಆಳಕ್ಕೆ ಇಳಿದವನು ತನ್ನ ಅನುಭವವನ್ನು ವರ್ಣಿಸಲಾರ. ವಿವರಿಸಲು ತನ್ನ ಶಬ್ದಭಂಡಾರವನ್ನು ಉಪಯೋಗಿಸಿದರೂ, ಆ ಪಾರಿಭಾಷೆ ಕೇಳುಗನಿಗೆ ಇನ್ನೇನೋ ರೀತಿಯಲ್ಲಿ ಕೇಳಿಸುತ್ತದೆ. ವಿವರಣೆಗೆ ತೊಡಗುವಾಗಲೇ ಅದು ಅರ್ಧ ಹುಸಿಯಾಗಿಬಿಡುತ್ತದೆ. ಇನ್ನು ಕೇಳುಗನ ಕಿವಿಗೆ ತಲುಪುವಷ್ಟರಲ್ಲಿ ಪೂರ್ತಿ ಹುಸಿಯಾಗಿರುತ್ತದೆ. ಬರಿಯ ಹೊಟ್ಟಾಗಿರುತ್ತದೆ. ಇಷ್ಟಾದರೂ ತಿಳಿದುಕೊಂಡರೆ ತಂತ್ರ ಸಾಧನೆಗಳನ್ನು ಒಂದು ಹಂತಕ್ಕೆ ಗ್ರಹಿಸಲು ಯತ್ನಿಸಬಹುದು.

ಮಲ್ಲಿಗೆ, ಸಂಪಿಗೆಗಳ ನಡುವೆ, ತಾವರೆ, ಜಾಜಿಗಳ ನಡುವೆ, ಮೋಡ, ಬೆಟ್ಟಗಳ ನಡುವೆ, ಹುಟ್ಟದ ತುಲನಾತ್ಮಕವಾದ ಶ್ರೇಷ್ಠತೆಯ ಗೀಳು ಮನುಷ್ಯರಲ್ಲಿ ಹುಟ್ಟಿದ ದಿನವೇ ಸಿದ್ಧಾಂತಗಳೆಂಬ ಹೆಣಗಳು ಉರುಳಿದವು.

ಶೂನ್ಯ ಸಾಮರ್ಥ್ಯ ಶಕ್ತಿ

ಎಲ್ಲಾ ಸಿದ್ಧಾಂತಗಳ ಮೂಲ ಶೂನ್ಯವೇ. ಅದರ ಸಾಮರ್ಥ್ಯ ಶಕ್ತಿಯೇ. ಶಕ್ತಿಯೇ ಕುಲ. ನಾವು ಕುಲಸ್ಥರು ಎಂದರೆ ಅದೊಂದು ಅಂತರ್ಗತವಾಗಿರುವಂತಹ ಒಂದು ಶಕ್ತಿಯನ್ನು ಹೊಂದಿರುವವರು ಎಂದೇ ಅರ್ಥ. ಅದರಲ್ಲೂ ಸಮಾನವಾದ ಶಕ್ತಿಯನ್ನು ಹೊಂದಿರುವವರು ಎಂಬುದೇ ಪರಮಾರ್ಥ.

ಶಿವನಿಗೆ ಅಕುಲ ಎನ್ನುವರು. ಕುಲಕ್ಕೆ ಅಕುಲ ವಿರುದ್ಧಾರ್ಥಕವಲ್ಲ, ಇರುವುದು, ಇಲ್ಲದೇ ಇರುವುದು. ಇರುವುದು ಇಲ್ಲದೇ ಇರುವುದು. ಇಲ್ಲದಿರುವುದು ಕೂಡ ತನ್ನ ಇಲ್ಲದೇ ಇರುವಿಕೆಯಲ್ಲಿ ಇರುವುದು. ಇದೊಂದು ಸೂಕ್ಷ್ಮ ವಿಚಾರ. ಕುಲಾರ್ಣವದಲ್ಲಿ ಕುಲಾಚಾರವೆಂಬುದು ಬಹಳ ಪ್ರಮುಖವಾಗಿ ಪರಿಗಣಿಸಲ್ಪಡುವುದು. ಕೌಲರು ಕುಲಾಚಾರವನ್ನು ಸಾಧಿಸುವವರು. ಇದರಲ್ಲಿ ಒಂದು ಪ್ರಸ್ತಾಪವಿದೆ. ವೈದಿಕಾಚಾರ ಅತ್ಯಂತ ಉನ್ನತ ಮಟ್ಟದ್ದೇನೋ ಸರಿ. ಆದರೆ ವೈಷ್ಣವಾಚಾರ ವೈದಿಕಾಚಾರಕ್ಕಿಂತ ಮಿಗಿಲು. ಶೈವಾಚಾರ ಇನ್ನೂ ಉತ್ತಮ. ದಕ್ಷಿಣಾಚಾರವು ಶೈವಾಚಾರಕ್ಕಿಂತಲೂ ಮಿಗಿಲಾದದ್ದು. ದಕ್ಷಿಣಾಚಾರವನ್ನು ಮೀರಿಸುವುದು ವಾಮಾಚಾರ. ಇನ್ನು ವಾಮಾಚಾರಕ್ಕೂ ಮಿಗಿಲೆಂದರೆ ಅದು ಸಿದ್ಧಾಂತಾಚಾರ. ಆದರೆ ಅಂತಿಮವೆಂಬಂತೆ ಕಾಣಿಸುವ ಸಿದ್ಧಾಂತಾಚಾರಕ್ಕಿಂತ ಮೇಲೆ ಕಾಣಿಸುವುದು ಕುಲಾಚಾರ. ಅದೇ ಅಂತಿಮ. ಹೀಗೆಂದು ಹೇಳುವ ಈ ಮಾತಿನಲ್ಲಿ ಶ್ರೇಷ್ಠತೆಯ ತುಲನೆಗಿಂತ ಕಾಣುವುದು ವಿಕಾಸದ ಹಂತಗಳೆಂದು ತೋರುವುದು. ತಾನು ಶ್ರೇಷ್ಠ ಮತ್ತೊಂದು ಕನಿಷ್ಠವೆಂದು ಕಾಡುವ ಭಾವ ತಂತ್ರಕ್ಕೆ ಕುಲದ ರೀತಿಗೆ ವಿರುದ್ಧವಾಗಿರುವುದು. ಏಕೆಂದರೆ ಕುಲಾಚಾರವು ಎಲ್ಲಾ ಭೂತ, ಜೀವ ಮತ್ತು ವಸ್ತುಗಳಲ್ಲಿ ಸಾಮಾನ್ಯವಾಗಿರುವ ಮತ್ತು ಅಂತರ್ಗತವಾಗಿರುವ ಶಕ್ತಿಯನ್ನು ಅನುಭವಿಸಲು ಮಾಡುವಂತಹ ಆಚಾರ ಅಂದರೆ ರೀತಿ, ನೀತಿ ಮತ್ತು ಕ್ರಮವಾಗಿವೆ. ಆ ಶಕ್ತಿಯನ್ನು ಹೊಂದಲು ಯಾವುದು ಅಗತ್ಯ ಯಾವುದು ಅನಗತ್ಯ. ಯಾವುದು ಬೇಕು, ಯಾವುದು ಬೇಡ; ಇಷ್ಟನ್ನು ಅದು ಗ್ರಹಿಸಲು ಯತ್ನಿಸುವುದು.

ಹೊರಗಿನ ಪರೆ, ಪದರಗಳನ್ನೆಲ್ಲಾ ಸರಿಸುತ್ತಾ ಒಳಗಿ ಶೂನ್ಯದ ಸಾಮರ್ಥ್ಯವಾದ ಶಕ್ತಿಯನ್ನು ಹೊಂದುವವನು ಕೌಲನಾಗುತ್ತಾನೆ. ಕುಲೀನ ಎನಿಸಿಕೊಳ್ಳುತ್ತಾನೆ. ಇದು ಅಂತಿಮ ಘಟ್ಟ, ಅಂದರೆ ಗೆರೆಕೊರೆದಿರುವುದಂತಲ್ಲ, ಇನ್ನೂ ಮುಂದುವರಿದಂತೆಲ್ಲಾ ಬರಿದೇ ಶೂನ್ಯವಾಗಿರುವುದು. ಶೂನ್ಯದಲ್ಲಿ ಕ್ರಮಿಸುವಿಕೆಯೇ ಕಾಣದು. ಅದರಲ್ಲಿ ಹಿಂದೆ ಎಂಬುದಿಲ್ಲ, ಮುಂದೆ ಎಂಬುದಿಲ್ಲ, ಅಕ್ಕಪಕ್ಕ ಎಂಬುವುದಿಲ್ಲ, ಗುರಿಯೂ ಇಲ್ಲ, ದಾರಿಯೂ ಇಲ್ಲ, ಅವನು ಎಲ್ಲಾ ಪದರಗಳನ್ನೂ ಸರಿಸಿಕೊಂಡು, ಇಲ್ಲವಾಗಿಸಿಕೊಂಡು ಹೋಗಿರುತ್ತಾನೆ. ವರ್ಣ, ಜಾತಿ, ಧರ್ಮ, ಪಂಥಗಳಿರಲಿ, ವಾದ, ನಿರ್ಧಾರ, ತೀರ್ಮಾನಗಳನ್ನೂ, ಒಳ್ಳೆಯದು, ಕೆಟ್ಟದು, ಪ್ರೀತಿ, ದ್ವೇಷ ಎಲ್ಲಾ ಭಾವಗಳೂ ಕಳಚಿಹೋಗುತ್ತವೆ.

ವ್ಯಕ್ತಿಯು ಶಕ್ತಿಯಾಗುವ ಪ್ರಕ್ರಿಯೆಗೊಳಗಾಗುವ ರೀತಿ ಕ್ರಮಗಳೇ ತಂತ್ರ. ಈ ಪ್ರಕ್ರಿಯೆಗಳಿಗೆ ಅನುಕೂಲ ವಾಗುವಂತಹ ಕ್ರಿಯೆಗಳನ್ನು ಮಾಡಬೇಕಾಗುತ್ತದೆ. ಆಲೋಚಿಸಬೇಕಾಗುತ್ತದೆ. ಏಕೆಂದರೆ ಆಲೋಚನೆಯೂ ಒಂದು ಕ್ರಿಯೆ. ಭೌತಿಕ, ಬೌದ್ಧಿಕ, ಮಾನಸಿಕ, ಭಾವನಾತ್ಮಕ; ಎಲ್ಲಾ ಕ್ರಿಯೆಗಳೂ ಪ್ರಕ್ರಿಯೆಯ ಭಾಗವಾಗುತ್ತಾ ಹೋಗುತ್ತದೆ.

ಪುರಾತನರು, ಬುಡಕಟ್ಟಿನ ಜ್ಞಾನಿಗಳು, ಬುದ್ಧರು, ಅರಿಹಂತರು, ಪ್ರಮಥರು, ಶರಣರು, ಕ್ರಿಸ್ತರು, ಪ್ರವಾದಿಗಳು, ಸಂತರು, ಭಕ್ತರು- ಹೀಗೆ ಅನೇಕ ಸಹಜರು ತಮಗೆ ತೋರಿದಂತೆಲ್ಲಾ, ಪ್ರಯೋಗಿಸಿದಂತಹ ತಂತ್ರಗಳಿಗೆಲ್ಲಾ ನಾನಾರೀತಿಗಳಲ್ಲಿ ಹೆಸರಿಟ್ಟುಕೊಂಡು ಪುರಾತನ ಕುಲಾಚಾರದ ತಂತ್ರಕ್ಕೇ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಹೊರಳುತ್ತಿದ್ದರು.

ವ್ಯಕ್ತಿ ಶುದ್ಧಿ

ಯೇಸುವೂ ಕೂಡ ತಂತ್ರ ಸಾಧನೆಯ ಪರಿಕಲ್ಪನೆಗಳನ್ನು ವ್ಯಕ್ತಿಗತ ಶುದ್ಧೀಕರಣಕ್ಕೆ ಮೊದಲು ಬಳಸಲು ಪ್ರಾರಂಭಿಸಿದ್ದ, ವ್ಯಕ್ತಿಯು ಶಕ್ತಿಯಾಗುವ ಪ್ರಕ್ರಿಯೆಗೆ ಅಗತ್ಯವಾದ ಎಲ್ಲಾ ತರಹ ಶುದ್ಧತೆಗೆ ಆದ್ಯತೆ ನೀಡುತ್ತಿದ್ದ, ಅದರಲ್ಲಿ ಒಂದು ಸೂಕ್ಷ್ಮವಾದ ಪ್ರಯೋಗವನ್ನು ಗಮನಿಸಿ.

"ತೀರ್ಪು ನೀಡಬೇಡ." ಈ ವಾಕ್ಯಕ್ಕೆ ನಾನಾ ರೀತಿಯ ಸಾಮಾಜಿಕ, ಧಾರ್ಮಿಕ, ನೈತಿಕ, ಆಧ್ಯಾತ್ಮಿಕ ಅರ್ಥಗಳು ತೆರೆದುಕೊಳ್ಳುತ್ತಾ ಹೋಗುತ್ತವೆ.

ನಮ್ಮ ನಿತ್ಯಜೀವನದಲ್ಲಿ ಗಮನಿಸೋಣ. ಯಾರೋ ಒಬ್ಬರು ನಮಗೆ ಊಟಕ್ಕಿಟ್ಟಿದ್ದಾರೆ. ಊಟ ಮಾಡಿದೆವು. ಊಟ ಚೆನ್ನಾಗಿದೆ ಅಥವಾ ಚೆನ್ನಾಗಿಲ್ಲ ಎಂದು ಹೇಳಿದರೆ ಅದು ತೀರ್ಮಾನ. ಅದೇ ನನಗೆ ಇಷ್ಟವಾಯಿತು ಅಥವಾ ಇಷ್ಟವಾಗಲಿಲ್ಲ ಎಂದು ಹೇಳುವುದಾದರೆ ಅದು ಅಭಿಪ್ರಾಯ. ನಮಗೆ ನಮ್ಮ ನಮ್ಮ ಅಭಿಪ್ರಾಯಗಳನ್ನು ಮಂಡಿಸುವ ಹಕ್ಕು ಇರುತ್ತದೆ. ಆದರೆ ತೀರ್ಮಾನಿಸುವ ಅಧಿಕಾರ ಇರುವುದಿಲ್ಲ, ಆದರೆ ನನ್ನ ಅಭಿಪ್ರಾಯ ಅಂತ ಬಹುಪಾಲು ಜನರು ತೀರ್ಮಾನವನ್ನೇ ನೀಡುವುದು.

ಇದು ಪ್ರತಿಯೊಂದು ವಿಷಯಕ್ಕೂ ಅನ್ವಯಿಸುತ್ತದೆ. ಯಾವುದೋ ಸಿನಿಮಾ ನೋಡಿ ಬರುತ್ತಾರೆ. ಜನ ತೀರ್ಮಾನಗಳನ್ನು ನೀಡಲು ಎಷ್ಟು ಉತ್ಸುಕರಾಗಿ ರುತ್ತಾರೆಂದರೆ, ಸಿನಿಮಾ ಚೆನ್ನಾಗಿದೆ, ಚೆನ್ನಾಗಿಲ್ಲ, ಡಬ್ಬಾ ಥರ ಇದೆ ಎಂದೆಲ್ಲಾ ತೀರ್ಮಾನಗಳನ್ನು ಪ್ರಕಟಿಸುವುದಿರಲಿ, ಇತರರಿಗೂ ಫರ್ಮಾನುಗಳನ್ನು ಹೊರಡಿಸುತ್ತಾರೆ. ನೋಡೋದೇನೂ ಬೇಕಾಗಿಲ್ಲ, ಚೆನ್ನಾಗಿಲ್ಲ, ಅದರ ಬದಲು ಇನ್ನಾವುದಕ್ಕಾದರೂ ಹೋಗಿ ಅಥವಾ ಒಂದು ಸಲ ನೋಡಬಹುದು ನೋಡಿ. ಅಥವಾ ತುಂಬಾ ಚೆನ್ನಾಗಿದೆ ಮಿಸ್ ಮಾಡದೇ ನೋಡಲೇಬೇಕು; ಹೀಗೆ. ಇದು ಇತರರ ಅಭಿರುಚಿ, ಅಭಿರುಚಿಗನುಸಾರವಾಗಿ ಮಾಡುವ ರಸಗ್ರಹಣ, ತಮ್ಮ ರಸಿಕತೆಯಿಂದ ಆಸ್ವಾದಿಸುವ ಎಲ್ಲಾ ಪ್ರಕ್ರಿಯೆಗಳಲ್ಲಿ ಅತಿಕ್ರಮಣ ಮಾಡುವುದು. ಬರಿಯ ತಮ್ಮದಾಗಿರುವ ಕಾರಣದಿಂದ ಶ್ರೇಷ್ಠವೆಂದುಕೊಂಡು, ತನ್ನ ಅನುಭವಕ್ಕೆ ನಿಲುಕಿರುವುದರಿಂದ ಅದೇ ಸರಿ ಎಂದುಕೊಂಡು ಅದನ್ನೇ ಎಲ್ಲರ ಮೇಲೆ ಹೇರಲು ಹೋಗುವಂತಹ ಸಾಮಾನ್ಯ ಸಂಗತಿಗಳನ್ನು ನಮ್ಮಲ್ಲಿ ಗಮನಿಸುವುದೇ ಇಲ್ಲ. ಒಂದು ಬಟ್ಟೆಯ ವಿಷಯದಲ್ಲಿ, ಊಟ, ಸಿನಿಮಾ, ಮಲಗುವ, ಏಳುವ, ಗಾಡಿಯಲ್ಲಿ ಹೋಗುವ, ಸಂಗೀತ ಕೇಳುವ; ಹೀಗೆ ತನಗೆ ಆನಂದ ನೀಡುವ ವಸ್ತು ಮತ್ತು ವಿಷಯವನ್ನೇ ಸರಿ ಎಂದು ಸಾಧಿಸುತ್ತಾ, ಅದನ್ನೇ ಇತರರ ಮೇಲೆ ಹೇರುವುದನ್ನು ನೋಡುತ್ತೇವೆ. ಅದೇ ವಿಸ್ತರಿಸುತ್ತಾ ಮುಂದೆ, ಧರ್ಮ, ಸಂಸ್ಕೃತಿ, ಆಚಾರ, ವಿಚಾರ ಎಲ್ಲವೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಮಟ್ಟದಲ್ಲಿ ಆಗುತ್ತಾ ಬರುತ್ತದೆ. ಆಗ ಅಲ್ಲಿ ಉಂಟಾಗುವ ಅತಿಕ್ರಮಣಗಳ ಬಗ್ಗೆ ಕನಲುತ್ತೇವೆ. ಹೇರಿಕೆಯ ಶೋಷಣೆಯ ವಿರುದ್ಧ ದನಿ ಎತ್ತುತ್ತೇವೆ. ವ್ಯಕ್ತಿಗತವಾಗಿ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯಕ್ಕೂ ತೀರ್ಮಾನ ನೀಡುವ ಹುಂಬತನಕ್ಕೂ ವ್ಯತ್ಯಾಸ ತಿಳಿಯದೇ ಇರುವುದರಿಂದ ಎಂತೆಲ್ಲಾ ಅನಾಹುತಗಳಾಗುತ್ತಿವೆ ಎಂಬ ಅಂಶವನ್ನೇ ಗಮನಿಸುವುದಿಲ್ಲ. ಇನ್ನು ವ್ಯಕ್ತಿಗೆ, ವಸ್ತುವಿಗೆ ಅಥವಾ ವಿಷಯಕ್ಕೆ ಒಳ್ಳೆಯ ಮತ್ತು ಕೆಟ್ಟ ಎಂಬ ಶಾಶ್ವತ ಲೇಬಲ್‌ಗಳನ್ನು ಹಚ್ಚುವುದಕ್ಕೂ ಹಿಂದೆ ಬೀಳುವುದಿಲ್ಲ.

ಇವನು ಒಳ್ಳೆಯವನು, ಇದು ಕೆಟ್ಟದ್ದು ಎಂದೆಲ್ಲಾ ನಿರ್ಣಾಯಕವಾಗಿ ಹೇಳುವುದು ಕೂಡ ತಂತ್ರ ಸಾಧನೆ ಮಾಡುವ ಪ್ರಕ್ರಿಯೆಗೆ ತೊಡರುಗಾಲೇ. ಒಂದು ವಿಷಯ ಅಥವಾ ಒಂದು ವ್ಯಕ್ತಿಯನ್ನು ಸರಿ ಇಲ್ಲ ಎನ್ನಲು, ನನಗೆ ನನ್ನದೇ ಆದಂತಹ ಹಿನ್ನೆಲೆ, ಅಭಿರುಚಿ, ಸಂಸ್ಕಾರಗಳಿರುತ್ತವೆ. ಆದರೆ ಅದೇ ಆ ಒಂದು ವಿಷಯವನ್ನು ಅಥವಾ ಒಂದು ವ್ಯಕ್ತಿಯನ್ನು ಸರಿ ಅಥವಾ ತಪ್ಪು ಎಂದು ತೀರ್ಮಾನಿಸಲು ಮಾನದಂಡವಾಗುವುದಿಲ್ಲ, ಏಕೆಂದರೆ ನನ್ನ ಒಲವು ನಿಲುವೇ ಜಗತ್ತಿನ ಅಥವಾ ಅಸ್ತಿತ್ವದ ಒಲವು ನಿಲುವು ಅಲ್ಲ, ಹಾಗೆ ತೀರ್ಮಾನಿಸಿದರೆ ಅದು ಅಸ್ತಿತ್ವದ ಮೌಲ್ಯಕ್ಕೆ ಎಸಗುವ ದ್ರೋಹವಾಗುತ್ತದೆ. ಅತಿಕ್ರಮಣವಾಗುತ್ತದೆ. ಅಸ್ತಿತ್ವದ ಒಲವು, ನಿಲುವು ತನ್ನದಾಗಿಸಿಕೊಳ್ಳಲು ಹೋಗುವ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದೇ ಪಕ್ಷದಲ್ಲಿ ಅದರ ಮತ್ತು ಇದರ ಬಲವೂ ಒಂದು ದಿನ ಒಂದಾಗುವುದು. ಈ ಶಕ್ತಿ ಮತ್ತು ಆ ಶಕ್ತಿ ಒಂದಾಗುವ ಅನುಭವವಾಗುವುದು. ಈ ಶಕ್ತಿ ಸಮಾಗಮಕ್ಕೇ ತಂತ್ರ ಬೇಕಾಗಿರುವುದು.

ಹೀಗೆ ವ್ಯಕ್ತಿಗತವಾಗಿರುವಂತಹ ಅನೇಕ ಅಪಕ್ವತೆಗಳನ್ನು ಗುರುತಿಸಿ ಅದನ್ನು ಹೊಟ್ಟು ತೂರುವಂತೆ ತೂರುತ್ತಾ ಪಕ್ವವಾಗುತ್ತಾ ಬರುವುದೆಂದರೆ ಈರುಳ್ಳಿಯ ಸಿಪ್ಪೆಯನ್ನು ಪದರಪದರವಾಗಿ ಬಿಡಿಸುತ್ತಾ ಬರುವುದು. ಕೊನೆಗೆ ಉಳಿಯುವುದೇ ಕುಲಾರ್ಣವ, ಮಹಾನಿರ್ವಾಣ.

ವ್ಯಕ್ತಿ ಶಕ್ತಿಯಾಗುವ ಪ್ರಕ್ರಿಯೆಯಲ್ಲಿ ತೊಡಕಾಗುವ ಇನ್ನೂ ಅನೇಕ ಮನಸ್ಥಿತಿಗಳು, ಧೋರಣೆಗಳು, ವರ್ತನೆಗಳು ಇವೆ. ತಿಳಿದುಕೊಳ್ಳೋಣ. ■

ಗೋಡ್ಸೆ ಸಂತಾನದ ಗೋ ಹೆಸರಿನ ಗೋಲ್‌ಮಾಲ್ ದಂಧೆ

ನಾವೀಗ ಬಳಸುವ ಇಂಗ್ಲಿಷಿನ salary ಎನ್ನುವ ಪದ salt ಪದದಿಂದ ಹುಟ್ಟಿಕೊಂಡಂತದ್ದು. ಸಿಹಿ ಹುಳಿ ಉಪ್ಪು ಖಾರಗಳಿಗೆ ಅದರದ್ದೇ ಆದ ಬದಲಾಗದಂತಹ ಮಹತ್ವಗಳಿದ್ದರೂ ಕೂಡ 'ಉಪ್ಪಿಗಿಂತ ರುಚಿಯಿಲ್ಲ' ಎಂಬ ಉಪ್ಪನ್ನು ಶ್ರೇಷ್ಠೀಕರಿಸುವ ಗಾದೆ ಮಾತ್ರವೇ ಹೆಚ್ಚು ಚಾಲ್ತಿಯಲ್ಲಿದೆ. ಇದಕ್ಕೆ ಕಾರಣ ಆಗ ಈಗಿನಂತೆ ಟಾಟಾ - ಬೈ ಬೈ ಎನ್ನುವ ಉಪ್ಪು ವಿತರಣಾ ಕಂಪೆನಿಗಳಿರಲಿಲ್ಲ, ಉಪ್ಪು ಎಲ್ಲೆಡೆ ಸುಲಭಕ್ಕೆ ಸಿಗುತ್ತಲೂ ಇದ್ದಿರಲಿಲ್ಲ, ಈ ಕಾರಣಕ್ಕೆ ಸಂಬಳವನ್ನು ಸಾಲ್ಟ್ ರೂಪದಲ್ಲಿ ಕೆಲವೆಡೆ ಕೊಡಲಾಗುತ್ತಿದ್ದ ಪದ್ಧತಿಯೇ ಸ್ಯಾಲರಿ ಎಂಬ ಪದದ ಹುಟ್ಟಿಗೆ ಕಾರಣವಾಯಿತು. ಅದೇರೀತಿ ಕನ್ನಡಿ ಒಡೆದವನಿಗೆ ಏಳು ವರ್ಷ ದುರದೃಷ್ಟ ಎನ್ನುವ ನಂಬಿಕೆಯನ್ನು ಹಬ್ಬಿಸಲಾಗಿದ್ದೂ ಕನ್ನಡಿಯೇ ಇಲ್ಲದ ಅದೊಂದು ಅಪರೂಪದ ವಸ್ತುವೆನಿಸಿದ್ದ ಕಾಲದಲ್ಲಿಯೇ ಹೊರತು ಎಲ್ಲಾ ಕಾಲಕ್ಕೂ ಈ ಮಾತು ಅನ್ವಯವಾಗದು. ಅಂದರೆ ಇಂದಿನ ಕಾಲದಲ್ಲಿ ಉಪ್ಪಿನಂತಹ ಸಾಮಾನ್ಯ ವಸ್ತುವನ್ನು ಸಂಬಳ ರೂಪದಲ್ಲಿ ಕೊಟ್ಟರೆ ಕೊಟ್ಟಾತನನ್ನು ಜನ ಉಪ್ಪಿನಲ್ಲೇ ಹೂತು ಬಿಟ್ಟಾರು. ಅದೇರೀತಿ ಕನ್ನಡಿ ಇಲ್ಲದ ಪರಿಸರವೇ ಇಲ್ಲದಂತಹ ಈ ಸಮಯದಲ್ಲಿ ಆ ಹಳೆಯ ನಂಬಿಕೆಯನ್ನು ಈಗ ಊರ್ಜಿತದಲ್ಲಿಡಲು ಸಾಧ್ಯವೇ ಇಲ್ಲ.

ಇದೇರೀತಿ ಗೋ ವೈಭವೀಕರಣವೂ ಇಂದಿನ ಕಾಲಕ್ಕೆ ತೀರಾ ಅಪ್ರಸ್ತುತ. ಆದರೇನು, ಕೆಲವರಿಗದು ಅವರ ಅಸ್ತಿತ್ವವನ್ನು ಜತನದಿಂದ ಕಾಪಾಡುವ ಟಾನಿಕ್ ಅನಿಸಿದ್ದರಿಂದ ಗೋ ವೈಭವೀಕರಣವನ್ನು (ಅವೈದಿಕರಿಗೆ ಸಂಬಂಧವೇ ಇರದ ಭಗವದ್ಗೀತೆ, ಮತಾಂತರ, ಮಾಂಸಾಹಾರ ಇತ್ಯಾದಿಗಳ ನೆಪದಲ್ಲಿ ಸಂಬಂಧವಿಲ್ಲದ ಜನರನ್ನು ಎತ್ತಿಕಟ್ಟಿ ಪಳಗಿಸುವ ತಂತ್ರಗಾರಿಕೆಯಂತೆ) ಇನ್ನೂ ಜೀವಂತವಾಗಿಡಲು ಕೆಲ ಸ್ಥಾಪಿತ ಹಿತಾಸಕ್ತಿಗಳು ನಿರಂತರವಾಗಿ ಹೆಣಗುತ್ತಿವೆ.

ಅಂದಿನ ಕಾಲದಲ್ಲಿ ಹಾಲು ಮೊಸರು ಇತ್ಯಾದಿ ಹೈನುತ್ಪನ್ನಗಳಲ್ಲದೇ ಕೃಷಿಗೆ ಬೇಕಾದ ಗೊಬ್ಬರ, ಉಳುಮೆ, ಗಾಣ, ಬಂಡಿ ಇತ್ಯಾದಿಗಳಿಗೆಲ್ಲ ಪಶು ಸಂಪತ್ತೇ ಆಧಾರವಾಗಿತ್ತು, ಮನೆಯ ಮುಂದೆ ಅಂಗಳಕ್ಕೆ ಇಂಟರ್ ಲಾಕ್ ಸಿಮೆಂಟ್ ಇಟ್ಟಿಗೆ ಜೋಡಿಸುವ ಐಡಿಯಾಗಳು ಈಗಿನದ್ದಾದರೆ ಅಂದು ಸುಲಭಕ್ಕೆ ಹಾಗು ದೊಡ್ಡ ಪ್ರಮಾಣದಲ್ಲಿ ಸಿಗುವ ಸಗಣಿಯನ್ನೇ ಅಂಗಳಕ್ಕೆ ಸಾರಿಸಿ ಮನೆ ಮುಂದೆ ಧೂಳೇಳದಂತೆ ನೋಡಿಕೊಳ್ಳುವುದು ಮಾಮೂಲಿಯಾಗಿತ್ತು, ಬೆರಣಿಯಿಂದ ಒಲೆ ಉರಿಸುವುದು, ಸಗಣಿ ಗಂಜಲವನ್ನು ಗಿಡಗಳಿಗೆ ಹಾಕುವುದು ಮಾಮೂಲಿಯಾಗಿತ್ತಲ್ಲದೇ ದನದ ಚಾಕರಿಗಾಗಿ ಅಂದಿನ ಅವಿಭಕ್ತ ಕುಟುಂಬದಲ್ಲಿ ಜನರೂ ಸಾಕಷ್ಟಿದ್ದರು. ಆದರೆ ಕಾಲ ಈಗ ಮೊದಲಿನಂತಿಲ್ಲ. ಅಂದಿನ ಗೋಸಂಪತ್ತು ಇಂದು ಡೈರಿ ಉದ್ಯಮವಾಗಿ ವ್ಯಾವಹಾರಿಕವಾಗಿ ತುಂಬಾ ಬದಲಾಗಿದೆ.

ದೇಶದಲ್ಲಿ ಕ್ಷೀರ ಕ್ರಾಂತಿ ಎಂಬ ಹೆಗ್ಗಳಿಕೆಯನ್ನು ಹುಟ್ಟು ಹಾಕಿದ್ದು ಯಾವ ಯಜ್ಞೋಪವೀತಧಾರಿ ವೈದಿಕನೂ ಅಲ್ಲ, ಗುಜರಾತಿನಲ್ಲಿ ಗೋವಿನ ರಕ್ಷಣೆ ಹೆಸರಲ್ಲಿ ದಲಿತರಿಗೆ ಮಾರಣಾಂತಿಕವಾಗಿ ಹಲ್ಲೆಗೈದ ಭಜರಂಗಿಗಳೂ ಅಲ್ಲ, ಅಸಲಿಗೆ ಆತ ಹಿಂದೂ ಧರ್ಮೀಯನೇ ಅಲ್ಲ, ಆದರೂ ಗುಜರಾತಿನ ಜನರನ್ನು ಗೋಪಾಲನೆಯಲ್ಲಿ ತೊಡಗಿಸಿ ಅವರನ್ನೂ ಸ್ವಾವಲಂಬಿಗಳನ್ನಾಗಿಸಿ ಕ್ಷೀರಕ್ರಾಂತಿ ಹೆಸರಲ್ಲಿ ದೇಶಕ್ಕೆ ಕೀರ್ತಿ ತಂದುಕೊಟ್ಟಾತ ಅಮುಲ್ ಡೈರಿ ಸಂಸ್ಥಾಪಕ ವರ್ಗೀಸ್ ಕುರಿಯನ್ ಎಂಬ ಕ್ರಿಶ್ಚಿಯನ್.

ಆದಿಮಾನವನ ಪಶುಪಾಲನಾ ನಡವಳಿಕೆಗೆ ಭಾರತ ಮೂಲವಲ್ಲ. ದನ ಕುರಿ ಕೋಳಿ ಹಂದಿಗಳನ್ನು ತನ್ನ ಬಳಕೆಗಾಗಿ ಪಳಗಿಸಿ ಸಾಕಬಹುದೆಂಬ ಕಲ್ಪನೆ ಸಾರ್ವತ್ರಿಕವಾದುದೇ ವಿನಹ ಕೇವಲ ಭಾರತ ಅಥವ ಇಲ್ಲಿಗೆ ಕಾಲಿಟ್ಟ ವೈದಿಕರ ಕಾಪಿರೈಟೇನಲ್ಲ. ಗೋವಿನಲ್ಲಿ 33 ಕೋಟಿ ದೇವತೆಗಳನ್ನು ದನದ ಮೈಗೆ ಕಚ್ಚುವ ಉಣ್ಣೆಗಳ ತರಹ ಅಂಟಿಸಿ ಅದಕ್ಕೊಂದು ಶ್ರೇಷ್ಠತೆಯನ್ನು ಹೊಂದಿಸಿದ್ದು ವೈದಿಕರ ಕಲ್ಪನೆ. ಗೋ-ಬ್ರಾಹ್ಮಣ ಎಂಬ ಜೋಡಿ ಪದಗಳು ಅವರ ಶ್ರುತಿ ಸ್ಮೃತಿಗಳಲ್ಲಿ ಪುರಾಣಗಳಲ್ಲಿ ಇದೇ ಕಾರಣಕ್ಕೆ ಯಥೇಚ್ಛವಾಗಿ ಕಂಡುಬರುತ್ತವೆ. ಗೋವು ಸರ್ವ ದೇವರನ್ನೂ ಹೊಂದಿದ್ದರೆ ಬ್ರಾಹ್ಮಣ ಸ್ವಯಂ ಜನ್ಮತಃ 'ಭೂಸುರತೆ'ಯ ಪಟ್ಟ ಹೊಂದಿದವನು. ಗೋವು ಪವಿತ್ರವೆಂದು ಪೂಜೆಗಷ್ಟೇ ಅರ್ಹವೆಂದೆಣಿಸದೇ ಸೇವನೆಗೂ ಪ್ರಾಶಸ್ತ್ಯ ನೀಡಲಾಗಿತ್ತು. ಇತ್ತೀಚೆಗೆ ಶಿವಮೊಗ್ಗದ ಮತ್ತೂರಿನಲ್ಲಿ ನಡೆದ ಯಾಗ ಈ ವಿಚಾರವನ್ನು ಮತ್ತೆ ನೆನಪಿಸುವಂತೆ ಮಾಡಿದ್ದನ್ನಿಲ್ಲಿ ನೆನಪಿಸಿಕೊಳ್ಳಬಹುದು.

ಗೋವು ಇಂದಿನ ಕಾಲಕ್ಕೆ ಪ್ರಮುಖವೋ ಅಮುಖ್ಯವೋ ಎನ್ನುವ ಚರ್ಚೆಯೇ ಹಾಸ್ಯಾಸ್ಪದ. ಗೋವನ್ನು ಗೋವನ್ನಾಗಿ ನೋಡಬೇಕೇ ವಿನಹ ಪೊಳ್ಳು ನಂಬಿಕೆಗಳ ಆಧಾರದಲ್ಲಲ್ಲ, ಇಂತಹ ಖೊಟ್ಟಿ ನಂಬಿಕೆಗಳೇ ಕ್ಷುಲ್ಲಕ ಗೋವಿನಲ್ಲಿ ಚಿನ್ನವಿದೆ, ವಜ್ರವಿದೆ, ಅದೂ ಭಾರತದ ಹಸುವಿನಲ್ಲಿ ಮಾತ್ರ, ವಿದೇಶಿ ಹಸುವಿನಲ್ಲಲ್ಲ ಎಂದು ಭೋಂಗು ಬಿಡುತ್ತಿದ್ದಾನಲ್ಲದೇ ಇನ್ನೂ ಅತಿರೇಕಕ್ಕೆ ಹೋಗಿ ಭಾರತದ ಗೋಮೂತ್ರವನ್ನು ವಿದೇಶಕ್ಕೆ ರಫ್ತು ಮಾಡಬೇಕು ಅನ್ನುತ್ತಿದ್ದಾನೆ. ಮೂರ್ಖ, ಭಾರತದ ಗೋವಿನಲ್ಲಿ ಚಿನ್ನ ವಜ್ರವಿದ್ದದ್ದೇ ಹೌದಾದಲ್ಲಿ ಪ್ರತಿನಿತ್ಯ ಸಿಗುವ ಟನ್ ಗಟ್ಟಲೆ ಸಗಣಿ ಗಂಜಲವನ್ನು ಸೋಸಿ ಪರಿಷ್ಕರಿಸಿ ಭಾರತದ ಬಡತನವನ್ನೇ ತಿಂಗಳೊಳಗೆ ನಿವಾರಿಸಬಹುದಲ್ಲವೇ? ಮೊದಲು ಈ ಸಗಣಿ ಮೂತ್ರಗಳ ಜಪ ಬಿಟ್ಟು ಶಿಷ್ಯೆಯಂದಿರ ಚೆಡ್ಡಿಗೆ ತಾನು ಅಂಟಿಸಿದ ತನ್ನ ವೀರ್ಯದ ಕಲೆಯಲ್ಲಿ ಪ್ಲಾಟಿನಮ್ ಏನಾದರೂ ಇದೆಯಾ ಈತ ನೋಡಿಕೊಳ್ಳಲಿ.

ಗೋವಿಗೆ ಅಂದು ಇದ್ದಂತಹ ಮಹತ್ವ ಈಗಿಲ್ಲ, ಅದು ಬ್ರಾಹ್ಮಣರಿಗೂ ತಿಳಿದಿದೆ. ಈ ಕಾರಣಕ್ಕೆ ಶಾಸ್ತ್ರದಲ್ಲಿ ಹೇಳಲಾದ ಗೋದಾನದ ಬದಲು ಗೋವಿನ ಆಕಾರದ ಚಿನ್ನವನ್ನು ಅವರೀಗ ದಾನ ಕೇಳಿಪಡೆಯುತ್ತಿದ್ದಾರೆ. ಮುಕ್ಕೋಟಿ ದೇವತೆಗಳ ಪರಮ ಪವಿತ್ರ ಗೋವನ್ನು




ಕಾರಣಗಳಿಗಾಗಿ ಅಖ್ಲಾಕ್ ನಂತವರ, ಗುಜರಾತಿನ ದಲಿತರಂತವರ ಮೇಲಿನ ಅಮಾನುಷ ದಾಳಿಗಳಿಗೆ ಹೇತುವಾಗುವುದನ್ನು ಮರೆಯಬಾರದು. ವಾಸ್ತವವಾಗಿ ಇದು ನೈಜ ಗೋಪ್ರೇಮದ ಕಾಳಜಿಯ ಹಿನ್ನೆಲೆಯಿಂದ ನಡೆದ ದಾಳಿಗಳಲ್ಲವೇ ಅಲ್ಲ, ಇದೊಂದು ಮತಿವಿಕಲ ಉನ್ಮಾದದ ಸ್ಥಿತಿ (ಯಾರೋ ಯಾವುದೋ ಸಂಘಟನೆಯೋ ಉಬ್ಬಿಸಿ ಛೂಬಿಟ್ಟ ಹಿನ್ನೆಲೆಯದ್ದು) ಅಷ್ಟೇ.

ಗೋವು-ಧರ್ಮ ಇತ್ಯಾದಿಗಳ ಬಗ್ಗೆ ಕೊರೆಯುವ ಪರಮಚೆಡ್ಡಿಯೊಬ್ಬನೊಂದಿಗೆ ಆತನ ಕಾರಿನಲ್ಲಿ ನಾನು ಒಂದೆಡೆ ಹೋಗುತ್ತಿದ್ದಾಗ ರಸ್ತೆಯಲ್ಲಿ ಯಾವುದೋ ವಾಹನ ತಾಗಿ ಒದ್ದಾಡುತ್ತಾ ಬಿದ್ದ ದನವನ್ನು ನೋಡಿ ನಿಲ್ಲಿಸಲು ಹೇಳಿದಾಗ ಆ ವ್ಯಕ್ತಿ ನಿರಾಕರಿಸಿದ್ದಂತ ಘಟನೆ ನನಗಿನ್ನೂ ನೆನಪಿದೆ.

ಅವನ್ಯಾವನೋ ರಾಘವೇಶ ಎನ್ನುವ ಅಡ್ಡ ಕಸುಬಿ ಎಷ್ಟೇ ಒತ್ತಾಯದಿಂದ ದಾನ ನೀಡಿದರೂ ಏನೇನೋ ಸಬೂಬು ನೀಡಿ ಅವರೀಗ ತಿರಸ್ಕರಿಸುವುದು ಯಾಕೋ!!? ಅವತ್ತು ಉದ್ದಾಲಕ ಎನ್ನುವ ಬ್ರಾಹ್ಮಣ ಹಾಲು ಹಿಂಡಿ ಮುದಿಮುದಿಯಾದ ಹಸುಗಳನ್ನು ಯಾರಿಗೋ ಕೊಟ್ಟು ಕೈತೊಳೆದುಕೊಳ್ಳುವ ಸಲುವಾಗಿ ದಾನ ಕೊಟ್ಟನಂತೆ. ಅದನ್ನು ಕಂಡ ಆತನ ಮಗ ನಚಿಕೇತ ಬೇಸರದಿಂದ "ನನ್ನನ್ನು ಯಾರಿಗೆ ಈ ರೀತಿ ದಾನ ಕೊಡುತ್ತೀ ಅಪ್ಪಾ??" ಅಂದದ್ದಕ್ಕೆ ಕೋಪಗೊಂಡ ಆತ "ಯಮನಿಗೆ?" ಅಂದನಂತೆ. ಇದು ಅವರ ಗೋಪ್ರೇಮದ ಅಸಲಿಯತ್ತು.

ವೈದಿಕಶಾಹಿ ತಲೆಗಳ ಆರೆಸ್ಸೆಸ್ ಗುಂಪಿನ ಆಜ್ಞಾನುವರ್ತಿ ಮೋದಿ ಸಾಹೇಬ ಇದನ್ನು ಅರ್ಥಮಾಡಿಕೊಂಡರೆ ಯಾವ ಬುಲೆಟ್ಟಿಗೂ ಆತ ಎದೆಯೊಡ್ಡುವ ಪ್ರಮೇಯವೇ ಬಾರದು. ಮೋದಿ ಎಂಬ ಗಾಣಿಗ ಶೂದ್ರನ (ಗಾಣಿಗರೂ ಬಹುತೇಕ 80ರ ದಶಕದವರೆಗೂ ಗಾಣ ಕೆಲಸಕ್ಕೆ ಎತ್ತನ್ನೇ



ಅವಲಂಬಿಸಿದ್ದರು. ಉಳುಮೆಗೂ ಮಿಗಿಲಾದ ಇದರ ವ... ಎಷ್ಟಿತ್ತೆಂದರೆ 'ಗಾಣದೆತ್ತಿನಂತೆ ದುಡಿತ' ಎಂಬ ವ... ರೂಢಿಯಲ್ಲಿದೆ) ಮುಂದಿಟ್ಟು ವೈದಿಕ ತಲೆಗಳು ... ಅಜೆಂಡಾವನ್ನು ನಾಜೂಕಾಗಿ ಜಾರಿಮಾಡುತ್ತಿವೆ. ಇ... ಎಲ್ಲರೂ ಅರ್ಥಮಾಡಿಕೊಳ್ಳುವುದೊಳ್ಳೆಯದು.

"ಗೋಸೇವಕರ ಹೆಸರಲ್ಲಿ ಮುಕ್ಕಾಲುವಾಸಿ ... ಅಕ್ರಮ ದಂಧೆಗಳಲ್ಲೇ ತೊಡಗಿಸಿಕೊಂಡಿದ್ದಾರೆ" ... ಈ ಮೋದಿ ಕೊನೆಗೂ ಬಾಯಿಬಿಟ್ಟಿದ್ದಾನೆ. ಗೋಮಾ... ಹೆಸರಲ್ಲಿ ಸ್ವಾಮಿ ವಿವೇಕಾನಂದರ ಬಳಿಗೆ ವಂತಿಗೆ ಕೇ... ಬಂದ ಜನರನ್ನು "ಮೊದಲು ನಿಮ್ಮ ಕಣ್ಣೆದು... ಹೊಟ್ಟೆಬಟ್ಟೆಗಿಲ್ಲದೇ ನರಳಾಡುತ್ತಿರುವ ದೀನಜನರ ... ಚಿಂತಿಸಿ. ಆ ಬಗ್ಗೆ ಮನಸ್ಸು ಮಿಡಿಯದ ನೀವು ಗೋ... ಬಗ್ಗೆ ಚಿಂತಿಸಿದರೆಷ್ಟು ಬಿಟ್ಟರೆಷ್ಟು" ಎಂದು ಉ... ಕಳುಹಿಸಿದ್ದರು. ಒಂದು ಜೀವವನ್ನು ಹಿಂಸಿಸಿ ಇನ್ನೊ... ವೈಭವೀಕರಿಸಿ ಮತ್ತಷ್ಟು ಹಿಂಸೆಗೆ ಪ್ರಚೋದಿಸು... ಅಂತಃಕರಣವಿಲ್ಲದವರ ನಡೆ.

- ಅವಿನಾಶ್ ಎಮ್.ಎಸ್, ನೆಲ್...

ಸ್ಯೂಡೋ ದೇಶಭಕ್ತಿ ಸಾಂಕ್ರಾಮಿಕ ರೋಗದಂತೆ ಹರಡಿದೆ

ಮೊನ್ನೆ ನಡೆದ ಸ್ವಾತಂತ್ರ್ಯೋತ್ಸವದ ಸಂ... ಮಂಡ್ಯದಲ್ಲಿ ಒಂದು ಶಾಲೆಯ ಮಕ್ಕಳು ಇತ್ತೀಚೆಗೆ ಆ... ಮಾಡಿಕೊಂಡ ಕಲ್ಲಪ್ಪ ಹಂಡಿಭಾಗ್, ಗಣಪತಿ ... ಡಿ.ಕೆ.ರವಿಯವರ ಫೋಟೋಗಳನ್ನು ಹಿಡಿದುಕೊ... ನರ್ತಿಸಿದ ಘಟನೆ ನಡೆಯಿತು. 1947 ಕ್ಕಿಂತ ಮು... ಸ್ವಾತಂತ್ರ್ಯ ಹೋರಾಟಕ್ಕೂ ನಿನ್ನೆ ಮೊನ್ನೆ ಆತ್ಮ... ಮಾಡಿಕೊಂಡ ಈ ಭ್ರಷ್ಟ/ಹೇಡಿ ಸರಕಾರಿ ಅಧಿಕಾರಿಗ... ಏನು ಸಂಬಂಧ ಎಂದು ಆ ಶಾಲೆಯ ಶಿಕ್ಷ... ಗೊತ್ತಿಲ್ಲವಂತೆ. ಆದರೆ ಇವರೆಲ್ಲಾ ಭಗತ್ ಸಿ... ಸುಖದೇವ್, ರಾಜಗುರು, ಸುಭಾಷ್ಚಂದ್ರ ಬೋ... ಅಂಬೇಡ್ಕರ್, ಗಾಂಧೀಜಿ, ನೆಹರೂ ಇವರಿಗಿಂತ ... ಯೋಗ್ಯತೆ ಉಳ್ಳವರೆಂದು ಆ ಶಾಲೆಯ ಶಿ... ಭಾವಿಸಿರುವಂತಿದೆ. ಏನೇ ಆಗಲಿ ಇದು ಆ ಮ... ಶಾಲೆಯವರು ಏನೂ ಗುಪ್ತ ರಾಜಕೀಯ ಉದ್ದೇಶ... ಆಮಯಕವಾಗಿ ಮಾಡಿದ ತಪ್ಪು ಅಲ್ಲವೇ ಅಲ್ಲ. ... ವರ್ಷ ಕರ್ನಾಟಕದ ಐದು ವೀರ ಕನ್ನಡಿಗ ಯೋ... ಪಾಕ್ ಗಡಿಯಲ್ಲಿ ಉಗ್ರರೊಂದಿಗೆ ಹೋರಾ... ಹುತಾತ್ಮರಾದರು. ಅವರ ಫೋಟೋ ಈ ಶಾಲೆಯ... ಸಿಗಲೇ ಇಲ್ಲವೇ?



ಎಷ್ಟೊಂದು ವಿರೋಧಾಭಾಸವುಳ್ಳ ಮನಸ್ಥಿತಿಯಿದು

ಪುರಾಣಕಾಲದಲ್ಲಿ ಪರಶುರಾಮನೆಂಬ ದುರಹಂಕಾರಿ ವೈದಿಕ ಅವನ ಮೂರ್ಖ ತಂದೆ ಹೇಳಿದನೆಂದು ತನ್ನ ತಾಯಿ ರೇಣುಕಾಳನ್ನೇ ಕೊಂದ. ಅದು ಪಿತೃ ಪ್ರಧಾನ ಸಂಸ್ಕೃತಿಯ ದ್ಯೋತಕವಾಗಿತ್ತು, ಈಗ ಉಡುಪಿಯ ಪಶು-ರಾಮ ನವನೀತ ಶೆಟ್ಟಿ ತನ್ನ ಮೂರ್ಖ ತಾಯಿ ಹೇಳಿದಳೆಂದು ತನ್ನ ತಂದೆಯನ್ನೇ ಕೊಂದ. ಇದು ಮಾತೃ ಪ್ರಧಾನ ಸಂಸ್ಕೃತಿಯ ಪ್ರತೀಕ ಎನ್ನಬಹುದೇ? ಇಷ್ಟರವರೆಗೆ ಭಾರತದಲ್ಲಿ ಎಲ್ಲೆಡೆ ಅರ್ಚಕರು ಗಣ-ಹೋಮ ಮಾಡುತ್ತಿದ್ದರು. ಆದರೆ ಈಗ ಕರಾವಳಿಯ ಜ್ಯೋತಿಷಿ-ಅಸ್ರಣ್ಣರು ಗಣಹೋಮದ ಬದಲು ಹೆಣ-ಹೋಮ ಶುರು ಮಾಡಿದ್ದಾರೆ. ಮೌಢ್ಯಭರಿತ ಧನಿಕರು ವಿಶೇಷತಃ ಹೆಂಗಸರು ಜ್ಯೋತಿಷಿಗಳ ಕೈಯಲ್ಲಿ ಸಿಕ್ಕು ಏನೆಲ್ಲಾ ಘೋರ ಕೃತ್ಯಗಳನ್ನು ಮಾಡುತ್ತಾರೆ ಎಂದು ಉಡುಪಿಯ ಹೆಣ-ಹೋಮದ ಘೋರ ಪ್ರಕರಣ ನೋಡಿದರೆ ಅರ್ಥವಾಗುತ್ತದೆ. ಇನ್ನಾದರೂ ಸರಕಾರ ಮೌಢ್ಯ ಪ್ರತಿಬಂಧಕ ಕಾಯ್ದೆ ಬೇಗ ಅನುಷ್ಠಾನ ಮಾಡಲಿ. 1995 ರಲ್ಲಿ ಯುವ-ಕಾಂಗ್ರೆಸ್ ನಾಯಕ ಸುಶೀಲ್ ಶರ್ಮ ತನ್ನ ಪತ್ನಿ ನಯನಾ ಸಹಾನಿಯನ್ನು ಕೊಲೆ ಮಾಡಿ ಅವಳ ದೇಹವನ್ನು ಹೋಟೇಲಿನಲ್ಲಿ ತಂದೂರಿ ಚಿಕನ್ ತಯಾರಿಸುವ ಕಲ್ಲಿದ್ದಲು ಭಟ್ಟಿಯಲ್ಲಿ ಹಾಕಿ ಸಂಪೂರ್ಣ ಸುಟ್ಟ ಕೊಲೆ ಪ್ರಕರಣಕ್ಕೆ 'ತಂದೂರ್ ಮರ್ಡರ್' ಎಂಬ ಹೆಸರು ಬಿದ್ದು ಆ ಟೈಟಲ್ಲಿನ ಹಿಂದಿ ಸಿನಿಮಾ ಸಹ ತಯಾರಾಗಿತ್ತು. ಅದೇರೀತಿ ಈಗ ಉಡುಪಿಯಲ್ಲಿ ಭಾಸ್ಕರ್ ಶೆಟ್ಟಿಯ ಶವವನ್ನು ಅವರ ಮಾಡರ್ನ್ ಹೆಂಡತಿ ಮತ್ತು ಪೈಲ್ವಾನ್ ಮಗ ಕೂಡಿ ನಿರಂಜನ್ ಅಸ್ರಣ್ಣ ಎಂಬ ಜ್ಯೋತಿಷಿಯ ಸಹಾಯದಿಂದ 'ಹೋಮ ಕುಂಡ'ದಲ್ಲಿ ಹಾಕಿ ಪೂರ್ಣ ಸುಟ್ಟ ಆರೋಪ ಇರುವುದರಿಂದ ಈ ಪ್ರಕರಣ ಆಧರಿಸಿ 'ಮಾ. ಬೇಟಾ ಔರ್ ಭಟ್ಟಾ' ಹಾಗೂ 'ಹೋಮಕುಂಡ ಮರ್ಡರ್' ಎಂಬ ಎರಡು ಸಿನಿಮಾ ಟೈಟಲ್ ಈಗಾಗಲೇ ರಿಜಿಸ್ಟರ್ ಆಗಿದೆಯಂತೆ. ಹಿಂದೆಲ್ಲಾ ಯಾಜ್ಞಿಕರು ಹೋಮಕ್ಕೆ ಹವಿಸ್ಸಾಗಿ ಆಕಳ ಕರುವನ್ನು ಕುಂಡಕ್ಕೆ ಹಾಕಿ ಸುಡುತ್ತಿದ್ದರು ಎಂದು ಸ್ವಾಮಿ ವಿವೇಕಾನಂದರೇ ಹೇಳಿದ್ದಾರೆ. ಆದರೆ ಈಗ ಗೋರಕ್ಷಕರ ದಾಂಧಲೆ ನೋಡಿ ಯಾಜ್ಞಿಕರು ಕರುವಿನ ಬದಲು ಮಾನವನನ್ನೇ ಹೋಮಕ್ಕೆ ಹವಿಸ್ಸು ಕೊಡುತ್ತಿರುವಂತಿದೆ.

ಭೀಕರ ಕೊಲೆಗಿಂತ ಹೆಚ್ಚಾಗಿ ನಲ್ವತ್ತೈದು ವರ್ಷದ ರಾಜೇಶ್ವರಿ 25 ವರ್ಷದ ಹುಡುಗ ಅಸ್ರಣ್ಣನೊಂದಿಗೆ ಲೈಂಗಿಕ ಸಂಬಂಧ ಇರಿಸಿಕೊಂಡ ಬಗ್ಗೆ ಜನರು ಕ... ತೋರಿಸುತ್ತಿದ್ದಾರೆ. ಆದರೆ ನಿರಂಜನ ಅಸ್ರಣ್ಣ ಒಬ್ಬ ಪಕ್ಕಾ ವೈಷ್ಣವ. ಹಾಗಾಗಿ ... ಪುರಾಣ ಓದಿದವರಿಗೆ ಇದೆಲ್ಲ ವಿಚಿತ್ರವೆನಿಸುವುದಿಲ್ಲ, ಕಾರಣ ದೇವರಾದ ಕೃಷ್ಣ... ಸೋದರ ಮಾವನ ಹೆಂಡತಿ ರಾಧಾ ತನಗಿಂತ 15 ವರ್ಷ ದೊಡ್ಡವಳಾದರೂ ಅ... ಪ್ರೇಮಿಸಿದ. ನಲ್ವತ್ತು ವರ್ಷದ ಯುವಕ ಕೀಚಕ ಎಂಬತ್ತು ವರ್ಷದ ಮು... ದ್ರೌಪದಿಯನ್ನು ಮೋಹಿಸಿ ಹತನಾದ. ಹದಿನಾರು ವರ್ಷದ ಬಾಲಕ ಅಭಿಮನ್ಯು... ವರ್ಷದ ಉತ್ತರೆಯನ್ನು ಮದುವೆಯಾದ. ಕೃಷ್ಣನ ಹದಿನಾರು ಸಾವಿರ ಹೆಂಡತಿಯ... ಹಲವರು ಕೃಷ್ಣನಿಗಿಂತ ವಯಸ್ಸಿನಲ್ಲಿ ಹಿರಿಯರೇ ಆಗಿದ್ದರು. ಕುರುಕ್ಷೇತ್ರ ಯು... ಸಮಯದಲ್ಲಿ ತೊಂಬತ್ತು ವರ್ಷದ ವೃದ್ಧ ಕೃಷ್ಣ ಯುದ್ಧ ಭೂಮಿಯಲ್ಲಿ ಪಾಂಡ... ಸಹಾಯ ಮಾಡುತ್ತಿದ್ದರೆ, ಆಗ ಇನ್ನೂ ಯುವಕನಾಗಿದ್ದ ಕೃಷ್ಣನ ಮನ್ಮಥರೂಪಿ ... ಸಾಂಬ ಮಥುರೆಯಲ್ಲಿ ತನ್ನ ಆಂಟಿಯರೊಂದಿಗೆ ರಾಸಲೀಲೆಯಲ್ಲಿ ತೊಡಗಿದ್ದ ಎನ್... ಭಾಗವತ. ಈಗಿನ ಮಠಾಧೀಶ ಗೋಸ್ವಾಮಿಯೂ ತನಗಿಂತ 12 ವರ್ಷ ಹಿ... ಪ್ರೇಮಲತಾರನ್ನು ಹಲವಾರು ಬಾರಿ ಭೋಗಿಸಲಿಲ್ಲವೇ! ಹೀಗಿದ್ದರೂ ಭಾರತದ ಪು... ಪ್ರಧಾನ ಸಮಾಜದಲ್ಲಿ ಗಂಡನೇ ಯಾವಾಗಲೂ ಹೆಂಡತಿಗಿಂತ ದೊಡ್ಡವನಿರ... ಎಂಬ ಸಾಮಾಜಿಕ ಕಟ್ಟಳೆ ಹೇಗೆ ಬಂತೊ ಗೊತ್ತಿಲ್ಲ, ಹೆಂಡತಿಗಿಂತ ಗಂಡ 60 ... ವರ್ಷ ದೊಡ್ಡವನಿದ್ದರೂ ಪರವಾಗಿಲ್ಲ ಆದರೆ ಹೆಂಡತಿ ಮಾತ್ರ ಗಂಡನಿಗಿಂತ ... ವರ್ಷವೂ ದೊಡ್ಡವಳಾಗಿರಬಾರದಂತೆ.

ಸತ್ಯವತಿಯನ್ನು ಪರಾಶರ ಮುನಿ ರೇಪ್ ಮಾಡಿ ವೇದವ್ಯಾಸನನ್ನು ಹುಟ್ಟಿ... ಸತ್ಯವತಿಗೆ ಕೇವಲ 16 ವರ್ಷ ಪ್ರಾಯ ಮತ್ತು ಪರಾಶರ 85 ವರ್ಷದ ಹಣ್ಣು ... ಮುದುಕ. ಅಹಲ್ಯೆ ಕೇವಲ 12 ವರ್ಷದ ಪೋರಿಯಾಗಿದ್ದಾಗ 75 ವರ್ಷದ ಗ... ಋಷಿ ಅವಳನ್ನು ಮದುವೆಯಾದ. ಹಿಂದೂ ಸಮಾಜಕ್ಕೆ ಮುದುಕರ ಇಂತಹ ... ಬುದ್ಧಿ ಒಪ್ಪಿಗೆಯಿದೆ ಆದರೆ ಹೆಣ್ಣು ಗಂಡಿಗಿಂತ ಒಂದು ದಿನ ಹಿರಿಯಳಾದರೂ ... ಹಿಂದೂ ಸಮಾಜಕ್ಕೆ ಅಸಮ್ಮತ. ಎಷ್ಟೊಂದು ವಿರೋಧಾಭಾಸವುಳ್ಳ ಮನಸ್ಥಿತಿಯ...

- ಕ್ಷಿತೇಜ್ ಕೆ ಹೆಗಡೆ, ಮಂಗಳ...

ಪೊಲೀಸ್ ಇಲಾಖೆ ಹೇಗೆ 60% ಕೇಸರೀಕರಣಗೊಂಡಿದೆಯೋ ಅದೇ ರೀತಿ ಶಾಲಾ-ಕಾಲೇಜುಗಳ ಶಿಕ್ಷಕ ವರ್ಗ ಸಹ 60%ಗೂ ಹೆಚ್ಚು ಕೇಸರೀಕರಣಗೊಂಡಿದೆ. ನನ್ನ ಪತ್ನಿಯೂ ಸರಕಾರಿ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿದ್ದಾಳೆ. ಜತೆಗೆ ನನ್ನ ಹತ್ತಿರದ ಸಂಬಂಧಿಗಳು ಶಾಲೆ-ಕಾಲೇಜುಗಳಲ್ಲಿ ಶಿಕ್ಷಕರಾಗಿ, ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ. ಇವರೇ ತಮ್ಮ ಸ್ವಂತ ಅನುಭವದಿಂದ ಹೇಳುವಂತೆ ಈಗ ಎಲ್ಲಾ ಶಾಲಾ ಕಾಲೇಜುಗಳ ಶಿಕ್ಷಕ/ಭೋಧಕರಲ್ಲಿ ಶೇ.60 ಕ್ಕೂ ಹೆಚ್ಚು ಸಿಬ್ಬಂದಿ ಕೇಸರೀಕರಣಕ್ಕೆ ಒಳಗಾಗಿದ್ದಾರೆ. ಈ ಕೇಸರಿ ಶಿಕ್ಷಕರಲ್ಲಿ ಎಷ್ಟೊಂದು ಒಗ್ಗಟ್ಟಿದೆಯೆಂದರೆ ಶಾಲೆ ಕಾಲೇಜುಗಳಲ್ಲಿ ನಿಷ್ಪಕ್ಷ ಜಾತ್ಯತೀತರಾಗಿರುವ ಹಿಂದೂ ಶಿಕ್ಷಕರು ಅಥವಾ ದಲಿತ-ಮುಸ್ಲಿಂ-ಕ್ರೈಸ್ತ ಶಿಕ್ಷಕರಿಗೆ ಮಾನಸಿಕ ಹಿಂಸೆ ಕೊಟ್ಟು ಪರಕೀಯ ಪ್ರಜ್ಞೆಯಿಂದ ಬಳಲುವಂತೆ ಮಾಡುತ್ತಾರೆ. ಅದರಲ್ಲೂ ಶಾಲೆ-ಕಾಲೇಜಿನ ಪ್ರಿನ್ಸಿಪಾಲ್/ಹೆಡ್ ಮಾಸ್ಟರ್ ಕೇಸರಿಪ್ರಿಯ ಆಗಿದ್ದರಂತೂ ಜಾತ್ಯತೀತ ಶಿಕ್ಷಕರ ಉಸಿರು ಕಟ್ಟುವಂತಹ ಉಭಯ ಸಂಕಟದ ಪರಿಸ್ಥಿತಿ ನಿರ್ಮಾಣವಾಗಿರುತ್ತದೆ. ಜತೆಗೆ ಎಲ್ಲಾ ಶಿಕ್ಷಕ ಸಿಬ್ಬಂದಿಗಳಲ್ಲಿ ಕೇಸರಿಪ್ರಿಯ ಮತ್ತು ಕೇಸರಿಯೇತರ ಎಂಬ ಬಹಿರಂಗವಾಗಿ ತಾರತಮ್ಯ ಮಾಡಲಾಗುತ್ತದೆ.

ಇದೆಲ್ಲಾ ಹಿಂದಿನ 7-8 ವರ್ಷಗಳಿಂದ ಅತ್ಯಂತ ವ್ಯವಸ್ಥಿತ ವಾಗಿ ಆರೆಸ್ಸೆಸ್ ನೇತಾರರ ನಿಗರಾಣಿಯಲ್ಲಿ ನಡೆಯುತ್ತಿರುವ ಕಾರ್ಯ. ಶಿಕ್ಷಕರಿಗೆ ಸರಕಾರ ನಿಗದಿಪಡಿಸಿರುವ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳೊಂದಿಗೆ ಆರೆಸ್ಸೆಸ್ ಸಹ ಈ ಕೇಸರಿ ಶಿಕ್ಷಕರಿಗೆ ನಿಗದಿತ ಹೊಣೆ ಕೊಟ್ಟಿದ್ದು ಸಮಯ ಸಮಯಕ್ಕೆ ಅವರ performance review ಸಹ ಆರೆಸ್ಸೆಸ್ ನೇತಾರರು ಗುಟ್ಟಾಗಿ ನಡೆಸುತ್ತಿರುತ್ತಾರೆ. ಶಿಕ್ಷಕರೇ ಭವಿಷ್ಯದ ಪ್ರಜೆಗಳನ್ನು ರೂಪಿಸುವುದರಿಂದ ವಿದ್ಯಾರ್ಥಿಗಳಲ್ಲಿ ಮೆಲ್ಲ-ಮೆಲ್ಲಗೆ ಸಂಕುಚಿತ ಹಿಂದೂತ್ವ ಮನಸ್ಥಿತಿ ತುಂಬಲು ಶಿಕ್ಷಕರೇ ಅತ್ಯುತ್ತಮ ಸಾಧನ ಎಂಬ ದೂರದೃಷ್ಟಿ ಯೋಜನೆ ಆರೆಸ್ಸೆಸ್ ಹೊಂದಿದೆ. ಮರವನ್ನು ಎಳವೆಯಲ್ಲಿಯೇ ನಮಗೆ ಬೇಕಾದಂತೆ ಬಗ್ಗಿಸುವುದೇ ಅತ್ಯಂತ ಸುಲಭ ಮನೋವೈಜ್ಞಾನಿಕ ತಂತ್ರ ಎಂದು ಆರೆಸ್ಸೆಸ್ ಸರಿಯಾಗಿ ಗುರುತಿಸಿದೆ. ಅದು ನಿನ್ನೆಯ ಸ್ವಾತಂತ್ರ್ಯೋತ್ಸವದಲ್ಲಿ ನಮ್ಮ ಮಂಡ್ಯದಲ್ಲಿ ಮಾತ್ರವಲ್ಲ ದೇಶದೆಲ್ಲೆಡೆ ಪ್ರತಿಫಲಿತವಾಗಿದೆ.

ಅಷ್ಟೇ ಅಲ್ಲ, ಅವಕಾಶ ಸಿಕ್ಕಾಗಲೆಲ್ಲಾ ಏನಾದರೊಂದು ಸುಳ್ಳು ನೆಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಕುಚ್ಚೇಕರಿಸಿ ಹೀಯಾಳಿಸುತ್ತಲೇ ಇರಬೇಕು ಹಾಗೂ ಮೋದಿಯನ್ನು ಯಾವುದಾದರೂ (ಕಾಲ್ಪನಿಕ) ಸಾಧನೆಯ ಕಾರಣಕೊಟ್ಟು ಹೊಗಳುತ್ತಲೇ ಇರಬೇಕೆಂದು ಕೇಸರಿ ಶಿಕ್ಷಕರಿಗೆ ಆರೆಸ್ಸೆಸ್ ಕೊಟ್ಟ ಗುಪ್ತ ಆದೇಶವೆಂದು ಕೆಲವು ಹಿರಿಯ ಶಿಕ್ಷಕರೇ ನನಗೆ ಹೇಳಿದ್ದಾರೆ.

ನಿನ್ನೆಯ ಸ್ವಾತಂತ್ರ್ಯ ದಿನಾಚರಣೆಯ ವೇಳೆ ಕಾಶ್ಮೀರದ ಶ್ರೀನಗರದಲ್ಲಿ ಧ್ವಜ ಹಾರಿಸುವಾಗ ಅದು ಕೆಳಗೆ ಬಿದ್ದಿದ್ದು ಆಕಸ್ಮಿಕವಲ್ಲ ಎಂಬುದು ನಿಜ. ಆದರೆ ಈ ಕುತಂತ್ರದ ಹಿಂದೆ ಪ್ರತ್ಯೇಕತಾವಾದಿ ಕಾಶ್ಮೀರಿಗಳ ಕೈಯಿದೆಯೆಂದು ಭಾವಿಸುವುದಕ್ಕಿಂತ ಸಂಘಿಗಳ ಕುತಂತ್ರವಿದೆ ಎನ್ನುವುದೇ ಸರಿ. ಯಾಕೆಂದರೆ ಈ ಧ್ವಜ ಕೆಳಗೆ ಬಿದ್ದ ಘಟನೆ ಉತ್ಪ್ರೇಕ್ಷಿಸಿ ದೇಶದೆಲ್ಲೆಡೆ ಅಪಪ್ರಚಾರ ಮಾಡಿ ಕಾಶ್ಮೀರಿಗಳ ವಿರುದ್ಧ ಭಾರತದಾದ್ಯಂತ ದ್ವೇಷ ಹುಟ್ಟು ಹಾಕುವುದೇ ಈ ಕುತಂತ್ರದ ಹಿಂದೆ ಇರುವ ಸಂಘಿಗಳ ದುರುದ್ದೇಶ. ಎಷ್ಟೇ ಆಗಲಿ ಹಿಂದಿನ ಎರಡು ವರ್ಷದಿಂದ ಸ್ಯೂಡೋ (ಕೃತಿಮ) ದೇಶಭಕ್ತಿ ಸಾಂಕ್ರಾಮಿಕ ರೋಗದಂತೆ ಭಾರತದ ವಿದ್ಯಾವಂತ ಮಧ್ಯಮ ವರ್ಗದಲ್ಲಿ ಆಳವಾಗಿ ಹರಡಿದೆ ತಾನೇ.

- ಜೆ.ಆರ್. ರೈ, ಮಂಗಳೂರು

ಎಮ್ಮೆ ದೊಡ್ಡಮ್ಮ, ಆಡು-ಕುರಿ ಚಿಕ್ಕಮ್ಮ ಯಾಕಾಗಲಿಲ್ಲ?

ಬೆಂಗಳೂರಿನಲ್ಲಿ ಪಾಶ್ಚುರೈಜ್ಡ್ ಮೇಕೆಯ ಹಾಲು ಇನ್ನು ಮಾರುಕಟ್ಟೆಯಲ್ಲಿ ಸಿಗಲಿದ್ದು ಅದು ಲೀಟರಿಗೆ ರೂ.250 ಕ್ಕೆ ಮಾರಾಟವಾಗಲಿದೆ. ಕಾರಣ ಅದು ಜನರ ಆರೋಗ್ಯಕ್ಕೆ ಮಾತ್ರವಲ್ಲ ಡೆಂಗೀಯಂತಹ ರೋಗಕ್ಕೂ ಔಷಧ ರೂಪದಲ್ಲಿ ಬಳಕೆಯಾಗುತ್ತದೆಯಂತೆ. ಜತೆಗೆ ಸಣ್ಣ ಮಕ್ಕಳಿಗೆ ಮೇಕೆ ಹಾಲು ತಾಯಿಯ ಹಾಲಿನಷ್ಟೇ ಪೌಷ್ಟಿಕವಂತೆ. ಆಕಳ ಹಾಲಿಗಿಂತ ಮೇಕೆಯ ಹಾಲು ಸಣ್ಣ ಮಕ್ಕಳಿಗೆ ಹೆಚ್ಚು ಆರೋಗ್ಯಕರ ಮತ್ತು ಸದೃಢ ಬೆಳವಣಿಗೆಗೆ ಸಹಾಯಕವೆಂದು ತಜ್ಞರು ಹೇಳುತ್ತಾರೆ. ಅದಕ್ಕಾಗಿ ಉತ್ತರ ಕರ್ನಾಟಕದಲ್ಲಿ ಹೆಚ್ಚಿನ ಹಳ್ಳಿಗರು ತಾವೇ ಮನೆಯಲ್ಲಿ ಮೇಕೆ ಸಾಕಿ ತಾಯಿಯ ಹಾಲು ಕಡಿಮೆ ಬಿದ್ದರೆ ಮೇಕೆ ಹಾಲೇ ಮಕ್ಕಳಿಗೆ ಕೊಡುವುದು. ಇನ್ನು ಮುಂದೆ ಕೆಎಮ್ಎಫ್ (ನಂದಿನಿ) ಸಹ ಆಡಿನ ಹಾಲನ್ನು ಪೌಚ್‌ಗಳಲ್ಲಿ ಮಾರುವ ಯೋಜನೆ ಹೊಂದಿದೆ ಎಂದು ಅದು ತನ್ನ ಪ್ರಕಟಣೆಯಲ್ಲಿ ಮೊನ್ನೆ ತಿಳಿಸಿದೆ.

ಇಷ್ಟೆಲ್ಲಾ ಆಗುವಾಗ ಗೋರಕ್ಷಕರು ಮತ್ತು ಸಂಘಿಗಳು ಸುಮ್ಮನಿರುವುದು ಆಶ್ಚರ್ಯ. ಯಾಕೆಂದರೆ ಸಂಘಿಗಳ ವಾದದಂತೆ ಎಲ್ಲರೂ ತಾಯಿಯ ಹಾಲಿನ ನಂತರ ಗೋವಿನ ಹಾಲನ್ನೇ ಸಣ್ಣ ಮಕ್ಕಳಿಗೆ ಕೊಟ್ಟು ಬೆಳೆಸುವುದರಿಂದ ಗೋವು ತಾಯಿಗೆ ಸಮ. ಆದರೆ ಗೋವು ಎಂಬ ಪ್ರಾಣಿ ಹಾಲು ಎಲ್ಲಿಂದ ಕೊಡುತ್ತದೆ ಮೂತ್ರ ಎಲ್ಲಿಂದ ಮಾಡುತ್ತದೆ ಎಂದು ಸಹ ಗೊತ್ತಿಲ್ಲದ ಸಂಘಿಗಳಿಗೆ ಭಾರತೀಯ ಹಳ್ಳಿಗಳ ನೈಜ ಸ್ಥಿತಿಯ ಅರಿವೇ ಇಲ್ಲ.

ಭಾರತದ ಎಲ್ಲಾ ರಾಜ್ಯಗಳ ಹಳ್ಳಿಗಳಲ್ಲಿ ಹೆಚ್ಚಿನ ರೈತರು ಹಾಲಿಗಾಗಿ ಎಮ್ಮೆ ಅಥವಾ ಆಡು ಸಾಕುತ್ತಾರೆ. ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಲಿಂಗಾಯತ ರೈತರು ಹೆಚ್ಚಾಗಿ ಎಮ್ಮೆ ಸಾಕಿದರೆ, ಕುರುಬ ಜಾತಿಯವರು ಮತ್ತು ಮುಸ್ಲಿಂ ರೈತರು ಆಡು ಮತ್ತು ಕುರಿ ಸಾಕಿ ಅವುಗಳ ಹಾಲೇ ಬಳಸುತ್ತಾರೆ. ಕುರುಬ ಜಾತಿಯವರಿಗೆ ತಲಾ ತಲಾಂತರದಿಂದ ಜೀವನಾಧಾರ ವಾಗಿರುವ ಕುರಿ ಮತ್ತು ಆಡೇ ತಾಯಿಗೆ ಸಮಾನ. ಕಡಿಮೆ ಹಾಲು ಕೊಟ್ಟು ಹೆಚ್ಚು ಮೇವು ತಿನ್ನುವ ದೇಶಿ ಆಕಳು ಸಾಕುವವರು ಹಳ್ಳಿಗಳಲ್ಲಿ ತುಂಬಾ ಕಡಿಮೆ. ಹಾಗಿರುವಾಗ ಗೋವು ಎಲ್ಲಾ ಭಾರತಿಯರಿಗೆ ತಾಯಿಯ ಸ್ಥಾನದಲ್ಲಿದೆ ಎಂದು ಸಂಘಿಗಳು ಘೀಳಿಡುವುದು ಯಾವ ಆಧಾರದಲ್ಲಿ?

ಭಾರತದ 80% ಬಡವರು ಎಮ್ಮೆ ಹಾಲು ಕುಡಿದೇ ಬೆಳೆದಿದ್ದು, ಹಾಗಾಗಿ ಆಕಳಿಗಿಂತ ಎಮ್ಮೆಯೇ ಭಾರತೀಯರಿಗೆ ಹೆಚ್ಚು ಹೆಮ್ಮೆಯ ಪ್ರಾಣಿಯಾಗಬೇಕಿತ್ತು. ಆದುದರಿಂದ ಕಡೇಪಕ್ಷ ಎಮ್ಮೆಗೆ ದೊಡ್ಡಮ್ಮ ಹಾಗೂ ಆಡು-ಕುರಿಗೆ ಚಿಕ್ಕಮ್ಮನ ಸ್ಥಾನವಾದರೂ ಕೊಡಬೇಕಿತ್ತು. ಆದರೆ ಎಮ್ಮೆ ಅಷ್ಟು ಸುಂದರವಾಗಿಲ್ಲವಾದುದರಿಂದ ಅದನ್ನು ತಾಯಿಯ ಸ್ಥಾನದಲ್ಲಿರಿಸುವುದು ಸೌಂದರ್ಯಪ್ರಿಯ ಪುರಾಣಕರ್ತರಿಗೆ ಹಾಗೂ ಈಗಿನ ವರ್ಣಪ್ರಿಯ ಸಂಘಿಗಳಿಗೆ ಇಷ್ಟವಾಗುವುದಿಲ್ಲ. ಪ್ರಾಣಿಗಳಲ್ಲೂ ಅವುಗಳ ನಿಜ ಉಪಯುಕ್ತತೆ ನೋಡಿ ಜನರು ಅವು ತಮ್ಮ ತಾಯಿ-ತಂದೆ ಎಂದು ಹೇಳುವ ಬದಲು ಅವುಗಳ ಬಾಹ್ಯ ಸೌಂದರ್ಯ ನೋಡಿ ತಾಯಿ ಯಾರು ಸೇವಕ ಯಾರು ಎಂದು ನಿರ್ಧರಿಸುತ್ತಾರೆ. ಆಕಳಿಗಿಂತ ಎಲ್ಲಾ ವಿಧದಲ್ಲೂ ಮನುಷ್ಯನಿಗೆ ಹೆಚ್ಚು ಉಪಯುಕ್ತವಾಗಿರುವ ಎಮ್ಮೆಯ ಬಗ್ಗೆ 'ಇಟ್ಟರೆ ಸೆಗಣಿಯಾದೆ ತಟ್ಟಿದರೆ ಕುರುಳಾದೆ' ಎಂದು ಯಾರೂ ಹಾಡು ಬರೆದಿಲ್ಲ ಅಥವಾ ಪುಣ್ಯಕೋಟಿ ಎಂಬ ಎಮ್ಮೆ ತನ್ನ ಗಂಡನ (ಕಂದನ) ನೆನೆದುಕೊಂಡು ಎಂಬ ಪದ್ಯ ಯಾವ ಕವಿಯೂ ಬರೆದಿಲ್ಲ. ಕುರೂಪಿ ಕಪ್ಪು ಎಮ್ಮೆಗೆ ಪುಣ್ಯಕೋಟಿ ಅಥವಾ ತಾಯಿ ಎಂಬ ಉನ್ನತ ಸ್ಥಾನ ಕೊಡಲು ಬಿಳಿಯ ಬ್ರಾಹ್ಮಣ ಕವಿಗೆ ಮನಸ್ಸಾಗದಿರುವುದು ಆಶ್ಚರ್ಯವಲ್ಲ.


ಆಡಿನ ಹಾಲಲ್ಲಿರುವ ಔಷಧಿ ಗುಣ ಈಗೀಗ ಜನರಿಗೆ ಗೊತ್ತಾಗಿದೆ. ಆದರೆ ಅದಕ್ಕಿಂತ ಹೆಚ್ಚು ಔಷಧ ಗುಣವಿರುವ ಒಂಟೆ ಅಥವಾ ಕತ್ತೆಯ ಹಾಲನ್ನು ಲ್ಯಾಬಿನಲ್ಲಿ ಸಂಶೋಧನೆಗೆ ಒಳಪಡಿಸಿ ಒಂಟೆ ಮತ್ತು ಕತ್ತೆ ಸಹ ನಮ್ಮ ತಾಯಿಗಿಂತಲೂ ಮಿಗಿಲು ಎಂದು ಬಾಬಾ ರಾಮದೇವ್ ಅಥವಾ ಹಿಂದೂ ಸಂಶೋಧಕರು ಪ್ರಚುರಪಡಿಸಲು ಪ್ರಯತ್ನಿಸಲೇ ಇಲ್ಲ. ಯಾಕೆಂದರೆ ಇವುಗಳು ಸಹ ಹೊರನೋಟಕ್ಕೆ ಸುಂದರ ಪ್ರಾಣಿಗಳಲ್ಲ.

ಹಾಗೆಯೇ ಎಮ್ಮೆ-ಕತ್ತೆ-ಒಂಟೆ ಇವುಗಳ ಸೆಗಣಿ-ಮೂತ್ರದಲ್ಲಿ ಅಥವಾ ಆಡು-ಕುರಿಗಳ ಹಿಕ್ಕೆಯಲ್ಲಿ ಚಿನ್ನ ವಜ್ರ ಇದೆಯೋ ಇಲ್ಲವೋ ಎಂಬುದನ್ನೂ ಯಾರೂ ಪರೀಕ್ಷಿಸದಿರುವುದಕ್ಕೆ ಕಾರಣ ಇವುಗಳು ಸುಂದರ ಪ್ರಾಣಿಗಳಲ್ಲ ಎಂಬುದೇ ಆಗಿದೆ. ಒಟ್ಟಾರೆ ಪುರಾಣಕರ್ತರು ಹಾಗೂ ಸಂಘಿಗಳು ಗೋವಿಗೆ ದೇವರ ಸ್ಥಾನ ಅಥವಾ ತಾಯಿಯ ಸ್ಥಾನ ಕೊಡುವಲ್ಲಿ ಅದರ ಬಾಹ್ಯ ಸೌಂದರ್ಯವನ್ನು ಗಣನೆಗೆ ತೆಗೆದುಕೊಂಡಿದ್ದಾರೆಯೇ ಹೊರತು ಅದರ ನೈಜ ಉಪಯುಕ್ತತೆ ಪರಿಗಣಿಸಿಯೇ ಇಲ್ಲ.

ದೇವರಿಗೆ ವಾಹನಗಳನ್ನು ಪೂರೈಸುವಲ್ಲಿಯೂ ಸೌಂದರ್ಯಪ್ರಿಯ ವೈದಿಕರು ಮಾಡಿರುವ ತಾರತಮ್ಯ ನೋಡಿ - ಶಿವನಿಗೆ ಸುಂದರ ನಂದಿ ವಾಹನವಾದರೆ ಮೃತ್ಯುದೇವ ಯಮನಿಗೆ ಕುರೂಪಿ ಕೋಣ ವಾಹನ. ಸಂಕಟ ತರುವ ಶನಿದೇವನಿಗೆ ಕುರೂಪಿ ಕಾಗೆಯಾದರೆ ಕುಮಾರಸ್ವಾಮಿಗೆ ಸುರಸುಂದರ ನವಿಲೇ ವಾಹನ. ಪುರಾಣಕರ್ತರಲ್ಲಿ ಸೌಂದರ್ಯ ಪ್ರಜ್ಞೆಯ ಜತೆ ಹಾಸ್ಯಪ್ರಜ್ಞೆಯೂ ಇತ್ತು, ಹಾಗಾಗಿ ಆನೆ ತಲೆಯ ದಢೂತಿ ಗಣಪನಿಗೆ ಪುಟಗೋಸಿ ಕಪ್ಪು ಇಲಿಯನ್ನೇ ವಾಹನ ಮಾಡಿಬಿಟ್ಟರು ಪಾಪ, ಕಾರಣ ಆ ಮಹಾಕಾಯ ಲಂಬೋದರ ಪುಟ್ಟ ಇಲಿಯಿಂದ ಜಾರಿ ಬಿದ್ದರೂ ಪೆಟ್ಟಾಗಲಾರದು ಎಂಬ ಅತಿ ವಿಶ್ವಾಸ ಇರಬೇಕು ಅಥವಾ ಈಗಿನ ಕಾರಿನ ಸೀಟ್ ಬೆಲ್ಟಿನಂತೆ ಗಣಪ ತನ್ನ ಹೊಟ್ಟೆಯ ಸುತ್ತ ಇದ್ದ ನಾಗರ ಹಾವನ್ನೇ ಸೀಟ್ ಬೆಲ್ಟಿನಂತೆ ಇಲಿಗೆ ಕಟ್ಟಿ ಸೇಫಾಗಿ ಟ್ರಾವೆಲ್ ಮಾಡುತ್ತಿರಬಹುದು. ಒಟ್ಟಾರೆ ವೈದಿಕರಿಗೆ ಸೌಂದರ್ಯವೇ ದೇವರು, ಮೌಢ್ಯವೇ ದೇವರ ಮೂಲವು.

- ವೀರಪ್ಪ ಬಿ. ಎನ್. ಮಡಿಕೇರಿ

ಹೊಸ ಹುಡುಗರ ಜತೆಗಿನ ಕೆಲಸ ರೋಚಕ ಮಹೇಶ್ ಬಾಬು



ಪುನೀತ್ ರಾಜ್‌ಕುಮಾರ್ ಸೇರಿದಂತೆ ಹಲವು ಸ್ಟಾರ್ ನಟರ ಚಿತ್ರಗಳಿಗೆ ಆಕ್ಷನ್ ಕಟ್ ಹೇಳಿರುವ ನಿರ್ದೇಶಕ ಮಹೇಶ್ ಬಾಬು, ಈ ಬಾರಿ ಹೊಸ ಹುಡುಗರಿಗೆ ಮಣೆ ಹಾಕಿದ್ದಾರೆ. 'ಕ್ರೇಜಿಬಾಯ್' ಚಿತ್ರದ ಮೂಲಕ ದಿಲೀಪ್ ಮತ್ತು ಆಶಿಕಾ ಎಂಬ ನಟನಟಿಯರನ್ನು ಪರಿಚಯಿಸುತ್ತಿದ್ದಾರೆ.

ಕಾಲೇಜು ಹುಡುಗರ ಲೈಫ್‌ಗೆ ಸಂಬಂಧಿಸಿದ ಅನೇಕ ಚಿತ್ರಗಳು ಈಗಾಗಲೇ ಕನ್ನಡದಲ್ಲಿ ಬಂದಿವೆ. ಅವುಗಳಿಗಿಂತ ಭಿನ್ನವಾಗಿ ಸಿನಿಮಾ ಮಾಡಿದ್ದಾರಂತೆ ನಿರ್ದೇಶಕ ಮಹೇಶ್ ಬಾಬು. ಕಾಲೇಜು ಹುಡುಗರ ಜೀವನದ ಜತೆಗೆ ಮೌಲ್ಯಗಳನ್ನು ಈ ಸಿನಿಮಾದ ಮೂಲಕ ಹೇಳಲು ಹೊರಟಿದ್ದಾರಂತೆ. ಈಗಾಗಲೇ ಸ್ಟಾರ್ ನಟರ ಚಿತ್ರಗಳಿಗೆ ಆಕ್ಷನ್ ಕಟ್ ಹೇಳಿರುವ ನಿರ್ದೇಶಕರು, ಈ ಬಾರಿ ಹೊಸ ಹುಡುಗರ ಚಿತ್ರವನ್ನು ನಿರ್ದೇಶಿಸಿದ್ದರ ಹಿಂದೆಯೂ ರೋಚಕ ಕತೆಯಿದೆಯಂತೆ. ಇದೇ ಶುಕ್ರವಾರ ಬಿಡುಗಡೆ ಆಗುತ್ತಿರುವ 'ಕ್ರೇಜಿಬಾಯ್' ಸಿನಿಮಾದ ಬಗ್ಗೆ ಹಲವು ಸಂಗತಿಗಳನ್ನು ಇಲ್ಲಿ ಬಿಚ್ಚಿಟ್ಟಿದ್ದಾರೆ ನಿರ್ದೇಶಕರು.

** ಪುನೀತ್, ದರ್ಶನ್‌ರಂಥ ಸ್ಟಾರ್ ಚಿತ್ರಗಳಿಗೆ ನಿರ್ದೇಶನ ಮಾಡಿದವರು ನೀವು ಸಡನ್ನಾಗಿ ಹೊಸ ಹುಡುಗರ ಜತೆ ಕೆಲಸ ಮಾಡಲು ಮುಂದಾಗಿದ್ದು ಯಾಕೆ?*

ಹೊಸ ಹುಡುಗರ ಜತೆ ಕೆಲಸ ಮಾಡುವುದೆಂದರೆ ನನಗೆ ತುಂಬಾನೇ ಇಷ್ಟ. ಪುನೀತ್ ಅವರ ಚೊಚ್ಚಲು ಚಿತ್ರಕ್ಕೂ ನಾನು ಕೆಲಸ ಮಾಡಿದ್ದೇನೆ. ರಮ್ಯಾ ಮತ್ತು ರಕ್ಷಿತಾರ ಮೊದಲ ಚಿತ್ರದಲ್ಲೂ ಕಾರ್ಯನಿರ್ವಹಿಸಿದ್ದೇನೆ. ಹೀಗಾಗಿ 'ಕ್ರೇಜಿಬಾಯ್'ನಲ್ಲೂ ನಾನು ಹೊಸ ಮುಖಗಳಿಗೆ ಮಣೆ ಹಾಕಿದೆ. ಹಾಗಂತ ಅವರು ಹೊಸಬರು ಅನ್ನುವ ರೀತಿಯಲ್ಲಿ ಕಾಣಿಸಿಕೊಂಡಿಲ್ಲ.

** 'ಕ್ರೇಜಿಬಾಯ್'ನ ನಾಯಕ ದಿಲೀಪ್ ಮತ್ತು ನಾಯಕಿ ಆಶಿಕಾ ಸಿಕ್ಕಿದ್ದು ಹೇಗೆ?*

ಈ ಸಿನಿಮಾದ ನಿರ್ಮಾಪಕ ಚಂದ್ರು ಅವರು ಮೊದಲು ನನಗೊಂದು ಕತೆ ಹೇಳಿದರು. ಆನಂತರ ಹೊಸ ಹುಡುಗನನ್ನು ಈ ಸಿನಿಮಾದ ಮೂಲಕ ಪರಿಚಯ ಮಾಡಬೇಕು ಅಂತ ಹೇಳಿದರು. ಹಾಗಾಗಿ ದಿಲೀಪ್ ಸಿಕ್ಕಿದ್ದು. ಈಗತಾನೆ ಇಂಜಿನಿಯರಿಂಗ್ ಮುಗಿಸಿದ್ದಾನೆ. ಆಶಿಕಾ ಪಕ್ಕದ ತುಮಕೂರಿನ ಹುಡುಗಿ. ಆಕೆ ಕೂಡ ಡಿಗ್ರಿ ಓದುತ್ತಿದ್ದಾಳೆ. ಇಬ್ಬರಿಗೂ ಸಿನಿಮಾದ ಹಿನ್ನೆಲೆಯಿಲ್ಲ. ಹೀಗಾಗಿ ತರಬೇತಿ ಕೊಟ್ಟು ಕ್ಯಾಮೆರಾ ಮುಂದೆ ನಿಲ್ಲಿಸಿದ್ದೇವೆ.

** ಈ ಸಿನಿಮಾದ ಮೂಲಕ ಏನು ಹೇಳೋಕೆ ಹೊರಟಿದ್ದೀರಿ?*

ಕಾಲೇಜು ಹುಡುಗರ ಸ್ಟೋರಿ ಅಂದಾಕ್ಷಣ ಹೆಚ್ಚಾಗಿ ಲವ್‌ಸ್ಟೋರಿಗಳನ್ನೇ ಸಿನಿಮಾ ಮಾಡಿದ್ದಾರೆ. ಇಲ್ಲಿಯೂ ಪ್ರೇಮಕತೆ ಇದೆ. ಆದರೆ, ಅದರ ಜತೆಗೆ ಬದುಕಿನ ಹಲವು ಮೌಲ್ಯಗಳನ್ನು ಹೇಳುತ್ತಿದ್ದೇವೆ. ಹಾಗಂತ ವೇದಾಂತ ಸಾರುವ ಸಿನಿಮಾ ಇದಲ್ಲ, ಮನರಂಜನೆಯ ಜತೆಗೆ ಸಮಾಜಕ್ಕೊಂದು ಪುಟ್ಟ ಸಂದೇಶವೂ ಇದೆ. ಅಲ್ಲದೇ, ನಾವು ಓದಿದ ಕಾಲೇಜ್ ಅನ್ನು ಈ ಮೂಲಕ ನೆನಪಿಸಿಕೊಳ್ಳುವ ಪುಟ್ಟ ಪ್ರಯತ್ನವೂ ಆಗಿದೆ.

** ಹೊಸ ಹುಡುಗರ ಜತೆ ಕೆಲಸ ಮಾಡುವುದು ಚಾಲೇಂಜ್ ಅನಿಸತ್ತಾ?*

ಹೊಸ ಹುಡುಗರು ಮಾತ್ರವಲ್ಲ, ನುರಿತ ಕಲಾವಿದರ ಜತೆ ಸಿನಿಮಾ ಮಾಡುವಾಗಲೂ ನಾನು ಚಾಲೇಂಜ್ ಅಂದುಕೊಂಡೆ ತೊಡಗಿಸಿಕೊಳ್ಳುವೆ. ಎರಡೂ ಕೆಲಸಗಳಲ್ಲಿ ವಿಭಿನ್ನ ಅನುಭವ ನನಗೆ ದೊರೆತಿದೆ. ಈ ಹೊತ್ತಿನ ಹುಡುಗರು ಮಾತಾಡುವಾಗ ಹೆಚ್ಚಾಗಿ ಇಂಗ್ಲಿಷ್ ಪದಗಳನ್ನು ಬಳಸುತ್ತಾರೆ. ಆದರೆ ದಿಲೀಪ್ ಸ್ಪಷ್ಟವಾಗಿ ಕನ್ನಡ ಮಾತಾಡುತ್ತಾನೆ. ಎರಡು ಪುಟಗಳ ಡೈಲಾಗ್ ಅನ್ನು ಒಂದೇ ಉಸಿರಿಗೆ ಹೇಳುತ್ತಿದ್ದ. ಒಂದೊಂದು ಬಾರಿ ಪೈಪೋಟಿಗೆ ಬಿದ್ದವರಂತೆ ನಾಯಕ ಮತ್ತು ನಾಯಕಿ ನಟಿಸುತ್ತಿದ್ದರು. ಆಗ ಕಂಡಿತಾ ಚಾಲೇಂಜ್ ಅನಿಸುತ್ತಿತ್ತು.

** ಕತೆಯ ಹೊರತಾಗಿ ಮತ್ತಾವ ವಿಷಯ ಪ್ರೇಕ್ಷಕರಿಗೆ ಇಷ್ಟವಾಗಲಿದೆ?*


ಈ ಸಿನಿಮಾದಲ್ಲಿ ನನಗೆ ಅತ್ಯುತ್ತಮ ತಂತ್ರಜ್ಞರು ಸಿಕ್ಕಿದ್ದಾರೆ. ಶೇಖರ್ ಚಂದ್ರು ಅವರ ಸಿನಿಮಾಟೋಗ್ರಫಿ ಚಿತ್ರದ ಜೀವಾಳ. ಕಲರ್‌ಫುಲ್ಲಾಗಿ ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ. ಜೆಸ್ಸಿ ಗಿಫ್ಟ್ ಅವರ ಸಂಗೀತ ನಿರ್ದೇಶನದಲ್ಲಿ ಮೂಡಿ ಬಂದಿರುವ ಹಾಡುಗಳು ಹಿಟ್ ಆಗಿವೆ. ಖ್ಯಾತ ಸ್ಟಂಟ್ ಮಾಸ್ಟರ್ ರವಿವರ್ಮ, ಆರು ಸಾಹಸ ಸನ್ನಿವೇಶಗಳನ್ನು ಈ ಚಿತ್ರಕ್ಕಾಗಿ ಕಂಪೋಸ್ ಮಾಡಿದ್ದಾರೆ. ಇವೆಲ್ಲವೂ ವಿಭಿನ್ನವಾಗಿ ಮೂಡಿಬಂದಿದ್ದರಿಂದ ಪ್ರೇಕ್ಷಕರಿಗೆ ಸಿನಿಮಾ ಇಷ್ಟವಾಗಬಹುದು.

** ಕಾಲೇಜು ಹುಡುಗರಿಗೆ ಮಾತ್ರ ಈ ಸಿನಿಮಾ ಸೀಮಿತನಾ?*

ಹಾಗೇನೂ ಇಲ್ಲ, ಎಲ್ಲರೂ ನೋಡುವಂತಹ ಅಂಶಗಳು ಚಿತ್ರದಲ್ಲಿವೆ. ಒಂದೂ ಡಬ್ಬಲ್ ಮೀನಿಂಗ್ ಸಂಭಾಷಣೆ ಇಲ್ಲ. ಅದರಲ್ಲೂ ಸೆಕೆಂಡ್ ಹಾಫ್‌ನಲ್ಲಿ ಸಾಕಷ್ಟು ಸೆಂಟಿಮೆಂಟ್ ದೃಶ್ಯಗಳನ್ನು ಕಟ್ಟಿಕೊಡಲಾಗಿದೆ. ನಾಯಕ ಮತ್ತು ಆತನ ತಂದೆಯ ಸನ್ನಿವೇಶಗಳು ಕಣ್ಣುಗಳನ್ನು ತೇವ ಮಾಡಲಿವೆ.

** ಹೊಸ ಹುಡುಗರ ಜತೆ ಯಾವ ಯಾವ ಕಲಾವಿದರು ಪಾತ್ರ ಮಾಡಿದ್ದಾರೆ?*

ಸಾಧು ಕೋಕಿಲಾ ಈ ಸಿನಿಮಾದಲ್ಲಿ ಡ್ರಾಮಾ ಮಾಸ್ಟರ್ ಪಾತ್ರ ಮಾಡಿದ್ದಾರೆ. ರವಿಶಂಕರ್ ಖಳನಾಯಕ. ಹಾಗಂತ ಅಬ್ಬರ ಜಾಸ್ತಿ ಇಲ್ಲ. ಅನಂತ್ ನಾಗ್ ಸಾರ್ ಇಲ್ಲಿ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ರಂಗಾಯಣ ರಘು ಅವರು ಕೂಡ ತಾರಾಗಣದಲ್ಲಿದ್ದಾರೆ. ■



Registered No.RNP/KA/BGS/2036/2014-16 Posted at :Bangalore-26, PSO, Mysore Road. Thursday R B P LANKESH, Kannada Weekly Price Rs. 15/- 31-08-2016 RNI No. KARKAN200

ಅಪ್ಪನ ಹಾದಿಯಲ್ಲಿ ಪನ್ನಗಾಭರಣ



ಹಿರಿಯ ನಿರ್ದೇಶಕರ ಮಕ್ಕಳು ಈ ವರ್ಷ ನಿರ್ದೇಶಕರಾಗಿ ಸಿನಿಮಾ ರಂಗಕ್ಕೆ ಕಾಲಿಡುತ್ತಿದ್ದಾರೆ. ಅದಕ್ಕೆ ಹೊಸ ಸೇರ್ಪಡೆ ನಾಗಾಭರಣ ಪುತ್ರ ಪನ್ನಗಾಭರಣ. ಗಿರೀಶ್ ಕಾಸರವಳ್ಳಿ ಪುತ್ರ ಅಪೂರ್ವ ಕಾಸರವಳ್ಳಿ ಸಿನಿಮಾ ಮಾಡಿರುವ ಬೆನ್ನಲ್ಲೇ ಪನ್ನಗಾಭರಣ ಚಿತ್ರವೊಂದನ್ನು ಕೈಗೆತ್ತಿಕೊಂಡಿದ್ದು ಕುತೂಹಲಕ್ಕೆ ಕಾರಣವಾಗಿದೆ. ಈ ಹಿಂದೆ ಗಿರೀಶ್ ಕಾಸರವಳ್ಳಿ ಮತ್ತು ನಾಗಾಭರಣ ಚಿತ್ರಗಳ ಮಧ್ಯೆ ಪೈಪೋಟಿ ಇರುತ್ತಿತ್ತು. ಈಗ ಅವರ ಮಕ್ಕಳ ಸಿನಿಮಾಗಳ ನಡುವೆ ಪೈಪೋಟಿ ನಡೆಯಲಿದೆ ಅನ್ನುವ ಚರ್ಚೆಯೂ ಶುರುವಾಗಿದೆ.

ಅಂದಹಾಗೆ ಪನ್ನಗಾಭರಣ ಪಕ್ಕಾ ತರಬೇತಿ ಪಡೆದುಕೊಂಡೆ ಸಿನಿಮಾ ರಂಗಕ್ಕೆ ಕಾಲಿಡುತ್ತಿದ್ದಾರೆ. ನ್ಯೂಯಾರ್ಕ್ ಫಿಲಂ ಅಕಾಡೆಮಿಯಲ್ಲಿ ಮಾಸ್ಟರ್ಸ್ ಪದವಿ ಪಡೆದಿರುವ ಇವರು, ಈಗಾಗಲೇ ಅನೇಕ ಜಾಹಿರಾತು ಸಿನಿಮಾಗಳನ್ನು ನಿರ್ದೇಶನ ಮಾಡಿದ್ದಾರೆ. ಅಲ್ಲದೇ, ತಂದೆಯ ಸಿನಿಮಾಗಳಿಗೆ ಸಹನಿರ್ದೇಶಕನಾಗಿ ಕೆಲಸ ಮಾಡಿದ ಅನುಭವ ಕೂಡ ಇದೆ. ಈಗ ಬಿ.ಸಿ ಪಾಟೀಲ್ ನಿರ್ಮಾಣದ ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾಗುತ್ತಿದ್ದಾರೆ.

ಮೊದಲ ಸಿನಿಮಾದಲ್ಲೇ ಹಲವು ಅಚ್ಚರಿಗಳನ್ನು ಮೂಡಿಸಲಿದ್ದಾರೆ ಪನ್ನಗಾ. ಚೊಚ್ಚಲು ಚಿತ್ರದಲ್ಲೇ ಐದು ಜನ ಹೀರೋ ಮತ್ತು ಹೀರೋಯಿನ್‌ಗಳ ಜತೆ ಕೆಲಸ ಮಾಡಲಿದ್ದಾರೆ. ಸದ್ಯಕ್ಕೆ ಧನಂಜಯ್ ಮತ್ತು ಶ್ರುತಿ ಹರಿಹರನ್‌ರನ್ನು ಆಯ್ಕೆ ಮಾಡಿಕೊಂಡಿದ್ದು, ಉಳಿದ ತಾರಾಗಣದ ಆಯ್ಕೆ ನಡೆಯಬೇಕಿದೆ.

ಚಿತ್ರಕ್ಕೆ 'ಹ್ಯಾಪಿ ನ್ಯೂ ಇಯರ್' ಎಂದು ಹೆಸರಿಟ್ಟಿದ್ದಾರೆ. ಹೊಸ ರೀತಿಯ ಕತೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ.

ಲಾಂಗ್‌ನತ್ತ ಮರಳಿದ ದರ್ಶನ್


ಮಚ್ಚು ಲಾಂಗ್‌ಗಳ ಸಿನಿಮಾಗೆ ಫೇಮಸ್ ಆಗಿದ್ದ ದರ್ಶನ್, ಇತ್ತೀಚೆಗೆ ಅಂತಹ ಕತೆಗಳನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ಕೈಯಲ್ಲಿ ಗನ್ ಇದ್ದರೂ, ಅವುಗಳು ದುಷ್ಟರ ಸಂಹಾರಕ್ಕಾಗಿ ಇರುತ್ತಿದ್ದವು. ಲಾಂಗ್ ಹಿಡಿಯದ ಕಾರಣ, ಮಾಸ್ ಪ್ರೇಕ್ಷಕರು ದೂರವಾಗುತ್ತಿದ್ದಾರೆ ಅನ್ನುವ ಮಾತೂ ಕೇಳಿಬಂದಿತ್ತು. ಆದರೀಗ ಮತ್ತೆ ಮಾಸ್ ಪ್ರೇಕ್ಷಕರನ್ನು ಸೆಳೆಯಲು ದರ್ಶನ್ ಮುಂದಾಗಿದ್ದಾರೆ. 'ಚಕ್ರವರ್ತಿ' ಚಿತ್ರದಲ್ಲಿ ಮತ್ತೆ ಅವರು ಲಾಂಗ್ ಹಿಡಿದು ಅಬ್ಬರಿಸಿದ್ದಾರೆ.

ಚಿಂತನ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ 'ಚಕ್ರವರ್ತಿ' ಸಿನಿಮಾದಲ್ಲಿ ಭೂಗತ ಜಗತ್ತಿನ ಕತೆ ಇದೆ. ಇದು ಹೊಸ ರೀತಿಯ ಪಾತ್ರವಾದ್ದರಿಂದ ದರ್ಶನ್, ಈ ಕತೆಯನ್ನು ಒಪ್ಪಿಕೊಂಡಿದ್ದಾರಂತೆ. ಜತೆಗೆ ನಿರ್ದೇಶಕ ಚಿಂತನ್ ಕೂಡ ದರ್ಶನ್ ಜತೆ ಬಹುವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಇದು ಇವರ ಚೊಚ್ಚಲು ಸಿನಿಮಾ ಕೂಡ. ಹೀಗಾಗಿ ಭೂಗತಲೋಕದ ಪಾತ್ರವನ್ನು ದರ್ಶನ್ ಒಪ್ಪಿಕೊಂಡಿದ್ದಾರೆ ಅನ್ನುತ್ತಿದೆ ಮತ್ತೊಂದು ಮೂಲ.



ಭೂಗತ ಜಗತ್ತಿನ ಸ್ಟೋರಿ ಇಲ್ಲಿದ್ದರೂ, ದರ್ಶನ್ ಈ ಸಿನಿಮಾದಲ್ಲಿ ರೆಟ್ರೋ ಸ್ಟೈಲ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಕೌಟುಂಬಿಕ ಕತೆಯೂ ಚಿತ್ರಕತೆಯಲ್ಲಿ ಮಿಕ್ಸ್ ಆಗಿರುವುದರಿಂದ ವಿಭಿನ್ನವಾದ ಕಾಸ್ಟ್ಯೂಮ್ ಕೂಡ ಹಾಕಿದ್ದಾರೆ. ಈ ಚಿತ್ರದ ಮತ್ತೊಂದು ವಿಶೇಷತೆ ಅಂದರೆ, ಇದೇ ಮೊದಲ ಬಾರಿಗೆ ದರ್ಶನ್ ಜತೆ ಸಹೋದರ ದಿನಕರ್ ತೂಗುದೀಪ ಕೂಡ ನಟಿಸುತ್ತಿದ್ದಾರೆ. ದಿನಕರ್ ಇಲ್ಲಿ ನೆಗೆಟಿವ್ ಪಾತ್ರವನ್ನು ನಿರ್ವಹಿಸಿದ್ದಾರೆ.

ಪೊಲೀಸ್ ಅಧಿಕಾರಿಯಾಗಿ ಅವಿನಾ



'ಜುಗಾರಿ' ಸಿನಿಮಾದ ಮೂಲಕ ಬೆಳಕಿಗೆ ಬಂದ ಅವಿನಾಶ್, ಆನಂತರ ಹಲವು ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಂಡರು. ಕಳೆದ ವರ್ಷ ರಿಲೀಸ್ ಆದ 'ಲಾಸ್ಟ್ ಬಸ್' ಕೂಡ ಇವರಿಗೆ ಒಳ್ಳೆಯ ಹೆಸರು ತಂದುಕೊಟ್ಟಿತು. ಈಗ ಮತ್ತೊಂದು ಸಿನಿಮಾಗೆ ಆಯ್ಕೆಯಾಗಿದ್ದಾರೆ. ಕನ್ನಡ ಮತ್ತು ತಮಿಳಿನಲ್ಲಿ ನಿರ್ಮಾಣ ಆಗಲಿರುವ ಚಿತ್ರದಲ್ಲಿ ಇವರು ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ಚಿತ್ರಕ್ಕೆ 'ಚೇಸ್ ಇನ್ ದ ಡಾರ್ಕ್' ಎಂದು ಹೆಸರಿಡಲಾಗಿದೆ.

ಹರಿ ಆನಂದ್ ಈ ಚಿತ್ರದ ನಿರ್ದೇಶಕ. ಇದು ಇವರ ಚೊ... ಸಿನಿಮಾ. ಅಂದುಕೊಂಡಂತೆ ಆಗಿದ್ದರೆ ಅವಿನಾಶ್ ಮತ್ತು ಹರಿ ಈ ಹಿಂ... ಒಂದು ಸಿನಿಮಾ ಮಾಡಬೇಕಿತ್ತು. 'ಹಾಲಿಡೆ' ಎಂಬ ಸಿನಿಮಾವನ್ನು ಜೋಡಿ ಮಾಡಲು ಹೊರಟಿದ್ದರು. ಆದರೆ, ಅದು ಸಾಧ್ಯವಾಗಲಿಲ್ಲ. ಹ... ಹೊಸ ರೀತಿಯ ಸಿನಿಮಾದಲ್ಲಿ ಒಂದಾಗಿದೆ.

ನುರಿತ ತಂತ್ರಜ್ಞರು ಸಿನಿಮಾದಲ್ಲಿ ಕೆಲಸ ಮಾಡಲಿದ್ದಾರೆ. ತನಿಖಾ ವ... ಸುತ್ತ ಹೆಣೆದಿರುವ ಕತೆ ಇಲ್ಲಿದೆ. ಹೀಗಾಗಿ ಸಿನಿಮಾಟೋಗ್ರಫಿಗೆ ಮಹತ್ವ ನೀಡಿದ್ದಾರಂತೆ ನಿರ್ದೇಶಕರು. ಹಾಗಂತ ಅವಿನಾಶ್ ಇದೇ ಮೊ... ಬಾರಿಗೆ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿಲ್ಲ. ಗೋಲ್ಡನ್ ಸ್ಟಾರ್ ಗ... ನಟನೆಯ 'ಮದುವೆ ಮನೆ' ಚಿತ್ರದಲ್ಲಿ ಇವರು ಖಾಕಿ ಧರಿಸಿದ್ದರು. ಹ... ಸಮರ್ಥವಾಗಿ ಈ ಪಾತ್ರವನ್ನು ನಿರ್ವಹಿಸಬಲ್ಲೆ ಅಂದಿದ್ದಾರೆ.

ಅನಂತ್ ಅರಸ್ ಸಿನಿಮಾಟೋಗ್ರಫಿಯಲ್ಲಿ ಚಿತ್ರ ಮೂಡಿಬರಲಿದ್ದು ಕಾ... ಆಚಾರ್ಯ ಸಂಗೀತ ನೀಡಲಿದ್ದಾರೆ.

ತರಬೇತಿಯ ಕನಸಲ್ಲಿ ಧ್ರುವ

ಸಾಹಸ ಪ್ರಧಾನ ಸಿನಿಮಾಗಳಲ್ಲಿ ನಟಿಸುವುದಕ್ಕಾಗಿಯೇ ತರಬೇತಿ ಪಡೆಯಲು ಬಯಸಿದ್ದಾರೆ ಧ್ರುವ ಸರ್ಜಾ. ಹೊಸ ಹೊಸ ಸಾಹಸ ಕಲೆಗಳನ್ನು ಕಲಿಯಲು ಅವರು ವಿದೇಶಕ್ಕೆ ಹೋಗಲು ತಯಾರಿ ಮಾಡಿಕೊಳ್ಳುತ್ತಿದ್ದಾರೆ. ಇವರ ಮುಂದಿನ ಸಿನಿಮಾ 'ಜಬರ್‌ದಸ್ತ್'ನಲ್ಲಿ ಸಾಕಷ್ಟು ಸಾಹಸ ಸನ್ನಿವೇಶಗಳು ಇವೆಯಂತೆ. ಹಾಗಾಗಿ ಹಾಲಿವುಡ್ ಸಿನಿಮಾಗಳಲ್ಲಿ ಕೆಲಸ ಮಾಡಿದ ಸಾಹಸ ನಿರ್ದೇಶಕರನ್ನು ಧ್ರುವ ಭೇಟಿಯಾಗಲಿದ್ದಾರೆ. ಅವರ ಬಳಿಯೇ ತರಬೇತಿಯನ್ನೂ ಪಡೆಯಲಿದ್ದಾರೆ.



ಈ ಸಿನಿಮಾವನ್ನು ನಂದಕಿಶೋರ್ ನಿರ್ದೇಶನ ಮಾಡಲಿದ್ದು, ಧ್ರುವಗಾಗಿಯೇ ಸ್ಕ್ರಿಪ್ಟ್ ರೆಡಿ ಮಾಡಿದ್ದಾರೆ. ಹಾಲಿವುಡ್ ರೀತಿಯಲ್ಲೇ ಧ್ರುವ ಸ್ಟಂಟ್ ಮಾಡಬೇಕಿದೆಯಂತೆ. ಹೀಗಾಗಿ ತರಬೇತಿ ಅನಿವಾರ್ಯ ಅಂತಿದ್ದಾರೆ.

ರಮೇಶ್‌ಗೆ ಮಗಳಾದ ರಚಿತಾ

ಸ್ಟಾರ್ ನಟರ ಸಿನಿಮಾಗಳಲ್ಲಿ ಬ್ಯುಸಿಯಾಗಿರುವ ರಚಿತಾ ರಾಮ್, ಈ ಮಧ್ಯೆ ಕೊಂಚ ಟೈಮ್ ಮಾಡಿಕೊಂಡು ಪ್ರಯೋಗಾತ್ಮಕ ಚಿತ್ರದಲ್ಲಿ ನಟಿಸಿದ್ದಾರೆ. ರಮೇಶ್ ಅರವಿಂದ್ ನಟನೆಯ 'ಪುಷ್ಪಕ ವಿಮಾನ'ದಲ್ಲಿ ಇವರು ರಮೇಶ್‌ಗೆ ಮಗಳಾಗಿ ನಟಿಸಿದ್ದಾರೆ. ಭಾವನಾತ್ಮಕ ಪಾತ್ರ ಅದಾಗಿದ್ದರಿಂದ, ಬೇರೆ ನಿರ್ಮಾಣ ಸಂಸ್ಥೆಗಳಿಗೆ ಮನವಿ ಮಾಡಿಕೊಂಡು ಈ ಸಿನಿಮಾದಲ್ಲಿ ನಟಿಸಿದ್ದೇನೆ ಅಂದಿದ್ದಾರೆ ರಚಿತಾ.



ಇದು ರಮೇಶ್ ಅವರ ನೂರನೇ ಸಿನಿಮಾ. ಅಲ್ಲದೇ ಹಾಡೊಂದರಲ್ಲಿ ಜ್ಯೂಹಿ ಚಾವ್ಲಾ ಕೂಡ ಕಾಣಿಸಿಕೊಂಡಿದ್ದಾರೆ. ಟೀಸರ್‌ನಿಂದಾಗಿಯೇ ಸಿನಿಮಾ ಸಾಕಷ್ಟು ಗಮನ ಸೆಳೆದಿದೆ. ಸಿನಿಮಾದ ಬಹುತೇಕ ಶೂಟಿಂಗ್ ಮುಗಿದಿದ್ದು, ಸದ್ಯಕ್ಕೆ ರೀ-ರೆಕಾರ್ಡಿಂಗ್ ಕಾರ್ಯ ನಡೆಯುತ್ತಿದೆ. ಮೊನ್ನೆಯಷ್ಟೇ ರಚಿತಾ ರಾಮ್ ಅವರ ಪಾತ್ರದ ಫಸ್ಟ್ ಲುಕ್ ರಿಲೀಸ್ ಮಾಡಿರುವ ಸಿನಿಮಾ ತಂಡ, ಪಾತ್ರದ ಬಗ್ಗೆ ಸಾಕಷ್ಟು ಕ್ಯೂರಿಯಾಸಿಟಿ ಕ್ರಿಯೇಟ್ ಮಾಡಿದೆ.

ಇದು ತಂದೆ ಮಗಳ ಬಾಂಧವ್ಯದ ಚಿತ್ರ. ಈಗಾಗಲೇ ಇಂತಹ ಚಿತ್ರಗಳು ಯಶಸ್ವಿ ಕೂಡ ಆಗಿವೆ. ಇದೇ ಹಾದಿಯಲ್ಲೇ 'ಪುಷ್ಪಕ ವಿಮಾನ' ಸಾಗಲಿದೆ ಅಂತಾರೆ ರಚಿತಾ. ಶೂಟಿಂಗ್ ಟೈಮ್‌ನಲ್ಲಿ ಪದೇಪದೇ ತಮ್ಮ ತಂದೆ ನೆನಪಾಗುತ್ತಿದ್ದ ವಿಷಯವನ್ನು ಅವರು ಹಂಚಿಕೊಂಡಿದ್ದಾರೆ.





PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com